ಸರ್ದಾರ್ ಭಗತ್‌ಸಿಂಗ್

ಸೋ.ಮು.ಭಾಸ್ಕರಾಚಾರ್



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಸರ್ದಾರ್ ಭಗತ್‌ಸಿಂಗ್

ಸೋ. ಮು. ಭಾಸ್ಕರಾಚಾರ್

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು ೫೬೦೦೦೨

SARDAR BHAGATH SINGH
Written by S. M. Bhaskara Char
and Published by Karnataka Sahitya Akademy,
Nrupatunga Road, Bangalore-560002.

First Publication 1994 Pages : viii + 96

ಮೊದಲನೇ ಮುದ್ರಣ ೧೯೯೪

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ಮೂರು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು-೫೬೦೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ–ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು

ಒಪ್ಪುವುದಿಲ್ಲ ; ಅವಮಾನವೀಯತೆಯನ್ನು ಘೋಷಿಸುವುದಿಲ್ಲ. ಆದರ ಆದ್ಯತೆಗಳಲ್ಲಿ ಅಂತರವಿರಬಹುದು ; ಚಿಂತನೆಯಲ್ಲಿ ವೈರಂಧ್ಯಗಳಿರ ಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತ ನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇ ಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯು ವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆ ಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕ ಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪ — ಬರಗೂರು ರಾಮಚಂದ್ರಪ್ಪ
ಬೆಂಗಳೂರು — ಅಧ್ಯಕ್ಷರು

ಓದುಗರೊಂದಿಗೆ ಒಂದುಕ್ಷಣ....

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ನನ್ನ ಮೇಲೆ ವಿಶ್ವಾಸ ಹಾಗೂ ನಂಬಿಕೆ ಇಟ್ಟು, ಕೆಲವು ನಿಬಂಧನೆಗಳೊಂದಿಗೆ 'ಭಗತ್ ಸಿಂಗ್'ನ ಪರಿಚಯವನ್ನು ಮಾಡಿಕೊಡಿ ಎಂದು ಒತ್ತಾಸೆಪಡಿಸಿದ್ದರಿಂದ/ಬರೆಸಿದ್ದರಿಂದ "ಸರ್ದಾರ್ ಭಗತ್ ಸಿಂಗ್" ಕೃತಿರೂಪವಾಗಲು ಸಾಧ್ಯವಾಯಿತು.

ತಮ್ಮ ಶಕ್ತಿ ಹಾಗೂ ಸಂಘಟನೆಯನ್ನು ಚದುರಿಸಿಕೊಂಡು, ಯಾಂತ್ರಿಕ ಬದುಕಿನಲ್ಲಿ ಅರಾಜಕತೆಯಲ್ಲಿರುವ ಯುವಜನತೆಗೆ; ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ಮರಣೀಯ ಹೋರಾಟ ನಡೆಸಿ ಹುತಾತ್ಮನಾದ ಕ್ರಾಂತಿಕಾರಿ ಯುವಕನನ್ನು ಪರಿಚಯಿಸುವ ಮೂಲಕ, ಜಾಗೃತಿಗೊಳಿಸುವ ಸ್ತುತ್ಯ ಕಾರ್ಯವನ್ನು ನಮ್ಮ ಸಾಹಿತ್ಯ ಅಕಾಡೆಮಿ ಕೈಗೊಂಡಿರುವುದು ಶ್ಲಾಘನೀಯವಾದ ಸಂಗತಿ.

ಸ್ವಾತಂತ್ರ್ಯ ಹೋರಾಟದಲ್ಲಿ ತನ್ನ ವಿಶಿಷ್ಟ ಹಾಗೂ ಅಪೂರ್ವ ವ್ಯಕ್ತಿತ್ವದಿಂದ ಅಮರನಾಗಿರುವ ಭಗತ್ ಸಿಂಗನನ್ನು ವಸ್ತುನಿಷ್ಠವಾಗಿ ಹಾಗೂ ವೈಚಾರಿಕವಾಗಿ ಕಂಡು, ಬರೆದುಕೊಡಬೇಕೆಂಬ ಸಲಹೆಯಂತೆ, ನಾನು ಯಾವ 'ಇಜಂಗಳ' ಎಳೆದಾಟಕ್ಕೂ ಒಳಗಾಗದೆ, ದೊರಕಿದ ಕೃತಿಗಳು ಮತ್ತು ಲೇಖನಗಳನ್ನು ಆಧಾರವಾಗಿಟ್ಟುಕೊಂಡು ಬರೆದಿದ್ದೇನೆ. ಇನ್ನೂ ಒಂದು ಮಾತನ್ನು ಪ್ರಾಮಾಣಿಕವಾಗಿ ಹೇಳಬೇಕಾದರೆ, ಈಗಾಗಲೇ ಈ ದೇಶಪ್ರೇಮಿಯ ಬಗ್ಗೆ ವಿಸ್ತಾರವಾದ ವಿಚಾರಗಳಿಂದ ಕೂಡಿರುವ ಡಾ॥ ಜಿ. ರಾಮಕೃಷ್ಣರ 'ಭಗತ್ ಸಿಂಗ್'

ಹಾಗೂ ಹುತಾತ್ಮ ಭಗತ್ ಸಿಂಗನ 'ನಾನೇಕೆ ನಾಸ್ತಿಕನಾದೆ ?' ಕೃತಿಗಳಿಗೆ ಹೆಚ್ಚು ಋಣಿಯಾಗಿದ್ದೇನೆ, ಹಾಗೆಯೇ ಸಾಮ್ರಾಜ್ಯಶಾಹಿ ಸರ್ಕಾರದಲ್ಲಿ ಕೈಕೋಳದೊಂದಿಗೆ ಬಂಧಿಯಾಗಿದ್ದ ಭಗತ್‌ಸಿಂಗನ ಅಪರೂಪದ ಭಾವ ಚಿತ್ರವಿದ್ದ 'ಮಹೋನ್ನತ ಮಾನವ' ಕೃತಿ ನೀಡಿ ಉಪಕರಿಸಿದ ಹಿರಿಯ ಕಾರ್ಮಿಕ ನಾಯಕರಾದ ಕಾಮ್ರೇಡ್ ಕೆ. ಆರ್. ನಾಯಕ್ ರವರನ್ನು ಇಲ್ಲಿ ಸ್ಮರಿಸಿಕೊಳ್ಳುವೆ.

ತನ್ನ ಹೋರಾಟ, ತ್ಯಾಗ ಬಲಿದಾನದಿಂದ ಎಲ್ಲಾ ಕಾಲ ದೇಶಕ್ಕೂ ಬತ್ತದ ಸ್ಫೂರ್ತಿಯಾಗಿ, ನಂದದ 'ಕಿಡಿ'ಯಾಗಿರುವ ಸಮರ ಶೂರ, ಉಗ್ರ ದೇಶಪ್ರೇಮಿ ಹಾಗೂ ಶ್ರೇಷ್ಟ ಮಾನವತಾವಾದಿ ಭಗತ್‌ಸಿಂಗನಂಥ ವ್ಯಕ್ತಿಯನ್ನು ಕುರಿತು ಬರೆಯಲು ಅವಕಾಶ ದೊರೆತದ್ದೇ ನನ್ನ ಬದುಕಿನ ಒಂದು ಮರೆಯಲಾಗದ ಸಂಗತಿ. ಇದಕ್ಕೆ ಕಾರಣಕರ್ತರಾದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಶ್ರೀ ಬರಗೂರು ರಾಮಚಂದ್ರಪ್ಪನವರನ್ನು ನಾನು ಕೃತಜ್ಞತೆಯಿಂದ ನೆನೆಯುತ್ತೇನೆ.

ಸೋ. ಮು. ಭಾಸ್ಕರಾಚಾರ್
೧೦ನೇ ಮಾರ್ಚ್ ೧೯೯೪ ತುಮಕೂರು

ಸರ್ದಾರ್ ಭಗತ್‌ಸಿಂಗ್

ಅಧ್ಯಾಯ ೧

ಸಿಡಿಲ ಮರಿ

ನಮ್ಮ ಸ್ವಾತಂತ್ರ್ಯ ಸಂಗ್ರಾಮದ ವೀರ ಗಾಥೆಯನ್ನೊಮ್ಮೆ ಅವಲೋಕಿಸುತ್ತಾ ನಡೆದಾಗ, ಕೆಲವೆಡೆ ನಾವು ಕ್ಷಣಕಾಲ ಸ್ತಬ್ಧರಾಗಿ ನಿಲ್ಲುತ್ತೇವೆ. ಅರಿವಿಲ್ಲದೆ ನಮ್ಮಿಂದ ತಲೆಬಾಗಿಸಿಕೊಳ್ಳುವ ಅಪೂರ್ವ ಆತ್ಮೀಯ ಯುವಕ ಕ್ರಾಂತಿಕಾರಿ ದೇಶಪ್ರೇಮಿಗಳ ಹಿಂಡನ್ನೇ ಸಂಧಿಸುತ್ತೇವೆ. ಅವರ ಬದುಕಿನ ಅದಮ್ಯ ಆಸೆ, ಆಕಾಂಕ್ಷೆ. ಹೋರಾಟದ ಗೊತ್ತುಗುರಿಗಳು ನಮ್ಮನ್ನು ಬೆರಗುಗೊಳಿಸಿ ರಾಷ್ಟ್ರೀಯ ಪ್ರಜ್ಞೆ, ಜೀವನೋತ್ಸಾಹ, ಮಾನವ ಪ್ರೇಮ, ಹೋರಾಟ ಮನೋಧರ್ಮ ತಾನೇತಾನಾಗಿ ಪುಟಿದೇಳುವಂತೆ ಉತ್ಕರ್ಷವನ್ನುಂಟುಮಾಡುತ್ತವೆ. ಅಂಥ ಎತ್ತರದ ವ್ಯಕ್ತಿಯೊಬ್ಬನನ್ನು ದರ್ಶಿಸುವುದೇ ಇಲ್ಲಿನ ಪ್ರಯತ್ನ.

ಮಂದಸ್ಮಿತ, ಆಕರ್ಷಣೀಯ ದೇಹದ ಕಣ್ತುಂಬ ಕನಸುಗಳನ್ನು ಹೊತ್ತು, ಸದಾ ತನ್ಮಯತೆಯಲ್ಲಿದ್ದ ಮೂರು ವರ್ಷದ ಮಗ ಒಮ್ಮೆ ತಂದೆಯೊಡನೆ ಹೊಲಕ್ಕೆ ಹೋಗಿ, ತಾನೊಬ್ಬನೇ ಮಣ್ಣಿನ ಆಟದಲ್ಲಿ ತೊಡಗಿದ್ದ. ಮಣ್ಣಿನ ಗುಡ್ಡೆಗಳನ್ನು ಮಾಡಿ ಅವುಗಳ ಒಂದೊಂದರ ಮೇಲೂ ಒಂದೊಂದು ಕಡ್ಡಿಯನ್ನು ನೆಡುತ್ತಿದ್ದ. ಈ ಮಗುವಿನ ವಿಚಿತ್ರ ಆಟ ಗಮನಿಸಿದ ತಂದೆಯ ಸ್ನೇಹಿತರು, "ಅದೇನು ಮಾಡು

ತ್ತಿದ್ದೀಯ ಮಗು ?" ಎಂದು ಕೇಳಿದರು. "ನಾನು ಬಂದೂಕುಗಳನ್ನು ನೆಡುತ್ತಿದ್ದೇನೆ" ಎಂದು ಬಾಲಕ ತಟ್ಟನೆ ಉತ್ತರಿಸಿದ.

ಇಪ್ಪತ್ತೆರಡು ಮೊಕದ್ದಮೆಗಳಿಗೆ ಅಪರಾಧಿಯಾಗಿ ಬ್ರಿಟೀಷರ ಆಕ್ರೋಶಕ್ಕೆ ಕಾರಣನಾಗಿದ್ದ ತನ್ನ ಚಿಕ್ಕಪ್ಪ ದೇಶ ಬಿಟ್ಟು ಹೋಗಿದ್ದಾಗ, ಗಂಡನ ಅಗಲುವಿಕೆಯಿಂದ ಕನಲಿಹೋಗಿದ್ದ ತನ್ನ ಚಿಕ್ಕಮ್ಮನನ್ನು ಈ ಬಾಲಕ, "ಅಳಬೇಡ, ಚಿಕ್ಕಮ್ಮ, ನಾನು ದೊಡ್ಡವನಾದಾಗ ಬ್ರಿಟೀಷರನ್ನು ಈ ದೇಶದಿಂದ ಹೊಡೆದೋಡಿಸಿ ಚಿಕ್ಕಪ್ಪನನ್ನು ಕರೆತರುತ್ತೇನೆ" ಎಂದು ಸಂತೈಸಿದ್ದ.

ಇದೇ ಬಾಲಕ ೧೨ ವರ್ಷದವನಾಗಿದ್ದಾಗ ಏಪ್ರಿಲ್ ೧೯೧೯ರ ೨೦ನೇ ತಾರೀಕು ಶಾಲೆಗೆ ಹೋಗಬೇಕಾದವನು, ಯಾರಿಗೂ ಹೇಳದೆ ನೇರವಾಗಿ ರೈಲಿನಲ್ಲಿ ಪಯಣಿಸಿ, ಜಲಿಯನ್ ವಾಲಾಬಾಗ್‌ನಲ್ಲಿ ಮಧ್ಯಾಹ್ನ ಮೂಕನಂತೆ ಅತ್ತಿಂದಿತ್ತ ತಳಮಳಗೊಂಡು ಓಡಾಡುತ್ತ ಅಂತರ್ಮುಖಿಯಾಗಿ ನಿಂತ. ಆನಂತರ ಅಲ್ಲಿದ್ದ ಮಣ್ಣನ್ನು ತೆಗೆದುಕೊಂಡು ಹಣೆಗಿಟ್ಟುಕೊಂಡು. ಸ್ವಲ್ಪ ಮಣ್ಣನ್ನು ತೆಗೆದುಕೊಂಡು ತನ್ನಲ್ಲಿದ್ದ ಡಬ್ಬಿಯಲ್ಲಿ ಶೇಖರಿಸಿಕೊಂಡು ಮನೆಗೆ ಹಿಂತಿರುಗಿದ. ರಾತ್ರಿ ಊಟ ನಿರಾಕರಿಸಿ, ಮೋಹಕ ಮಾವಿನಹಣ್ಣು ಮುಟ್ಟದೆ ತನ್ನ ಸೋದರಿಯನ್ನು ಒಂಟಿಯಾಗಿ ಮನೆಯ ಹಿಂಭಾಗಕ್ಕೆ ಕರೆದೊಯ್ದ. ತಾನು ಡಬ್ಬಿಯಲ್ಲಿ ತಂದಿದ್ದ ಮಣ್ಣನ್ನು ತೋರಿಸಿದ.

ಜಲಿಯನ್‌ವಾಲಾಬಾಗ್‌ಹತ್ಯಾಕಾಂಡದ ಪಾತಕ ಡಯರ್ ಮನುಷ್ಯರೊಂದಿಗೆ ರಕ್ತದೋಕುಳಿಯಾಡಿ ತೊಯ್ದಿದ್ದ ಆ ಮಣ್ಣನ್ನು ತೋರಿಸಿ ತನ್ನ ಉಪವಾಸಕ್ಕೆ ಕಾರಣ ತಿಳಿಸಿದ್ದ. ಅಷ್ಟೇಯಲ್ಲ 'ತ್ಯಾಗದ ಪ್ರತೀಕ' ಆ ಮಣ್ಣು ಎಂದು ಅವಳಿಗೆ ಹೇಳಿದ.

ಇಂಥ ವೀರೋಚಿತ ಗುಣಗಳನ್ನು ಬಾಲ್ಯದಲ್ಲೇ ಮೈಗೂಡಿಸಿಕೊಂಡು ಬದುಕಿನಲ್ಲಿ ಸಾಧಿಸಿ ತೋರಿಸಿ ಅಮರನಾದವನೇ ಸರ್ದಾರ್ ಭಗತ್‌ಸಿಂಗ್.

ಈತನ ಬದುಕೇ ಒಂದು ವೀರಕಾವ್ಯ. ಅಪೂರ್ವ ಸ್ವಾತಂತ್ರ್ಯ ಪ್ರೇಮಿ, ವಾಸ್ತವವಾದಿ, ಜ್ಞಾನಾಕಾಂಕ್ಷಿ, ಸಂಘಟನಾ ಚತುರ, ಸಮಾಜ ವಾದಿಯಾದ ಈತ ಒಬ್ಬ ವ್ಯಕ್ತಿಯಲ್ಲ, ಒಂದು ಶಕ್ತಿಯೂ ಅಲ್ಲ, 'ನೂತನ ಮಾರ್ಗಸ್ಥಾಪಕ'ನೆಂದರೆ ಸರಿ ಎನಿಸುತ್ತದೆ.

ವ್ಯಕ್ತಿ. ಪರಂಪರೆ ಹಾಗೂ ಪರಿಸರದಿಂದ ಪ್ರೇರಿತನಾಗುತ್ತಾನೆ. ಭಗತ್‌ಸಿಂಗ್‌ಗೆ ಇಂಥ ಪರಂಪರೆ ಹಾಗೂ ಪರಿಸರಗಳೆರಡೂ ದೊರಕಿದ್ದವು. ಅನೇಕ ಭಾಷೆಗಳನ್ನು ಬಲ್ಲ ಸುಸಂಸ್ಕೃತರೂ ಯುನಾನಿ ವೈದ್ಯರೂ ಕೃಷಿಕರೂ ಸಮಾಜ ಸುಧಾರಕರೂ ಕಾಂಗ್ರೆಸ್ ಸದಸ್ಯರೂ ಆಗಿದ್ದ ಅರ್ಜುನ್‌ಸಿಂಗ್ ಭಗತ್‌ಸಿಂಗ್‌ನ ತಾತ. ಈ ತಾತನ ಮಕ್ಕಳಾದ ಕಿಶನ್‌ಸಿಂಗ್, ಅಜಿತ್‌ಸಿಂಗ್ ಮತ್ತು ಸ್ವರ್ಣಸಿಂಗ್ ಕೂಡ ಸಮರಶೀಲ ವ್ಯಕ್ತಿತ್ವದ ಸ್ವಾತಂತ್ರ್ಯ ಹೋರಾಟಗಾರರೇ ಆಗಿದ್ದರು. ಇಂಥ ಪರಾಕ್ರಮದ ಹಿನ್ನೆಲೆಯುಳ್ಳ ಕಿಶನ್‌ಸಿಂಗ್ ಮತ್ತು ವಿದ್ಯಾವತಿದೇವಿಗೆ ಬದುಕಿದ್ದ ಏಳು ಮಕ್ಕಳಲ್ಲಿ ಹಿರಿಯವನಾಗಿ ೧೯೦೭ ಸೆಪ್ಟೆಂಬರ್ ೨೭ರಂದು ಈಗಿನ ಪಾಕಿಸ್ತಾನಕ್ಕೆ ಸೇರಿರುವ ಲಾಯಲ್‌ಪುರ್ ಜಿಲ್ಲೆಯ ಜರಾನ್‌ವಾಲ್ ತಾಲ್ಲೂಕಿನ ಬಾಂಗಾ ಎಂಬ ಗ್ರಾಮದಲ್ಲಿ ಭಗತ್‌ಸಿಂಗ್ ಜನಿಸಿದ.

ವೀರ ಪರಂಪರೆಯ ಕುಟುಂಬದಲ್ಲಿ ಜನಿಸಿದ ಭಗತ್‌ಸಿಂಗ್‌ನಿಗೆ ನಿಜವಾಗಿಯೂ ತಾಯಿನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಟದ ಕಿಚ್ಚು ಮೂಡಿಸಿ, ಈತನ ಅಂತರಂಗದಲ್ಲಿ ಕ್ರಾಂತಿಯ ಬೀಜ ಬಿತ್ತಿದವರೆಂದರೆ ತನ್ನ ಸ್ವಂತ ಚಿಕ್ಕಪ್ಪ ಅಜಿತ್‌ಸಿಂಗ್.

ಈತನ ಚಿಕ್ಕಪ್ಪ ಅಜಿತ್‌ಸಿಂಗ್ ಬ್ರಿಟೀಷ್ ಸರ್ಕಾರದ ವಿರುದ್ಧ ಚಳುವಳಿಗಳನ್ನು ಸಂಘಟಿಸುವುದರಲ್ಲಿ ಯಶಸ್ವಿಯಾಗಿದ್ದನೆಂದು ದಾಖಲೆಗಳಿಂದ ತಿಳಿಯುತ್ತದೆ. "ಕಳೆದೆರಡು ತಿಂಗಳುಗಳಲ್ಲಿ ಅಜಿತ್ ಸಿಂಗ್ ಹಲವಾರು ಸಭೆಗಳಲ್ಲಿ ಜನರನ್ನು ಬಂಡೇಳುವಂತೆ ಪ್ರೇರೇಪಿಸುತ್ತಾ ಬಂದಿದ್ದಾನೆ. ಆತನನ್ನು ಬಂಧಿಸಬೇಕಾದ್ದು ಅತ್ಯವಶ್ಯಕವಾಗಿದೆ...."

ಎಂದು ೧೯೦೭ರ ಸರ್ಕಾರಿ ವರದಿಯಲ್ಲಿದೆ. ಮತ್ತೊಂದು ವರದಿಯಲ್ಲಿ, "ರಾಜಕೀಯ ಸಭೆಗಳಲ್ಲಿ ಅಜಿತ್‌ಸಿಂಗ್ ಅತ್ಯಂತ ಉಗ್ರವಾದ ಭಾಷಣಕಾರನಾಗಿದ್ದಾನೆ. ಸರ್ಕಾರದ ವಿರುದ್ಧ ತೀವ್ರವಾದ ಪ್ರತಿಭಟನೆಗಳಿಗೆ ಕರೆಕೊಡುವ ಈತ ಪ್ರಮುಖವಾಗಿ ರೈತವರ್ಗ ಮತ್ತು ಸೈನಿಕರ ನಡುವೆ ಅಸಮಧಾನದ ಹೊಗೆಯಾಡಲು ಕಾರಣಕರ್ತನಾಗಿದ್ದಾನೆ" ಎಂದು ತಿಳಿದುಬರುತ್ತದೆ. ಇಂಥ ಚಿಕ್ಕಪ್ಪನಿಂದ ಭಗತ್‌ಸಿಂಗ್ ಹೋರಾಟದ ಮೊದಲ ಪಾಠ ಕಲಿತುಕೊಂಡು ತನ್ನ ವ್ಯಕ್ತಿತ್ವವನ್ನು ಹಿಗ್ಗಲಿಸಿಕೊಂಡ.

ನಮ್ಮ ಇತಿಹಾಸ ಚಿತ್ರಕ್ಕೆ ಪೂರ್ಣ ಸತ್ಯದ ಚೌಕಟ್ಟಾಗಲೀ ಕ್ಯಾನ್‌ವಾಸಾಗಲೀ ಇಲ್ಲ. ಪಾರಂಪರಿಕವಾಗಿ ಮುಕ್ಕಾಗಿಸದೆ ಪೋಷಿಸಿಕೊಂಡು ಬಂದಿದ್ದ ಏಕಮುಖ ಸಂಸ್ಕೃತಿಯ 'ಕಲಂಕಿತ ದಾಖಲೆ'ಯೇ ನಮ್ಮ ಇತಿಹಾಸ. ರಾಷ್ಟ್ರೀಯ ಪ್ರಜ್ಞೆಗಿಂತ, ಮಾನವೀಯ ಮೌಲ್ಯಗಳಿಗಿಂತ, ಸಮೂಹ ಚಿಂತನೆಗಿಂತ, ಸಮಾನತೆಯ ಒತ್ತಾಸೆಗಿಂತ, ವರ್ಗಾಸಕ್ತಿಯ ಮೊತ್ತವೇ ನಮ್ಮ ಇತಿಹಾಸ. ಇದನ್ನೇ ನಾವು ಊಳಿಗಮಾನ್ಯ ಸಂಸ್ಕೃತಿ, ಪುರೋಹಿತಶಾಹಿ ವ್ಯವಸ್ಥೆ ಎನ್ನುವುದು. ಇಂಥ ಶ್ರೇಣೀಕೃತ ವ್ಯವಸ್ಥೆಯ ನಾಡಿಗೆ ಬ್ರಿಟೀಷರು ವ್ಯಾಪಾರಕ್ಕೆಂದು ಬಂದು ಸಾಮ್ರಾಜ್ಯ ಕಟ್ಟಲು ಸಾಧ್ಯವಾಯಿತು. ಹಾಗಾಗಿ ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯ ಅಧ್ಯಯನ ಕುತೂಹಲಕರವಾಗಿದೆ. ಹಾಗೂ ಪುನರ್‌ಮೌಲ್ಯೀಕರಣಕ್ಕೆ ಒಳ್ಳೆಯ ಅವಕಾಶ ಒದಗಿಸಿಕೊಟ್ಟಿದೆ.

ವಿಭಿನ್ನ ಭಾಷೆ, ಧರ್ಮ, ಸಂಸ್ಕೃತಿಯಿಂದ ಕೂಡಿದ ಬೃಹತ್ ಭಾರತದ ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಎರಡು ವ್ಯವಸ್ಥೆಗಳಿದ್ದುವು. ಅವು ಅಲ್ಪ ಸಂಖ್ಯಾತ ವ್ಯವಸ್ಥೆಗಳಾದರೂ ತಮ್ಮದೇ ಆದ ಹಿಡಿತದಿಂದ ದೇಶದ ಬಹುಸಂಖ್ಯಾತ ಜನರಲ್ಲಿ ಬಿಕ್ಕಟ್ಟನ್ನುಂಟುಮಾಡಿ ಸಮಾಜದಲ್ಲಿ ಹಿಡಿತ ಸಾಧಿಸಿಕೊಂಡು ನಿರಾತಂಕವಾಗಿದ್ದುವು. ಆ ಎರಡು

ವ್ಯವಸ್ಥೆಗಳೆಂದರೆ ಬ್ರಿಟೀಷ್ ಸಾಮ್ರಾಜ್ಯಶಾಹಿ ವ್ಯವಸ್ಥೆ ಮತ್ತು ಈ ನೆಲದಲ್ಲೇ ಬೇರು ಬಿಟ್ಟಿದ್ದ ಊಳಿಗಮಾನ್ಯ ವ್ಯವಸ್ಥೆ. ಇವೆರಡೂ ಕೂಡ ಒಂದೇ ನಾಣ್ಯದ ಎರಡು ಮುಖಗಳಂತೆ ಸಮಾಜವನ್ನು ಒಡೆದು ಆಳುವ ಕುಟಿಲ ನೀತಿಯನ್ನು ಬೆಳೆಸಿಕೊಂಡಿದ್ದವು. ಇವುಗಳು ಒಂದ ರೊಡನೊಂದು ರಾಜೀಭಾವ ಹೊಂದಿ ಪ್ರತಿಗಾಮಿ ಶಕ್ತಿಗಳಾಗಿದ್ದವು. ಅನಕ್ಷರಸ್ಥ, ಅಸಂಘಟಿತ, ಶ್ರಮಿಕ ಜನರ ಮೇಲೆ ನಿರಂತರ ಸವಾರಿ ನಡೆಸಿದ್ದವು.

ಹೀಗೆ ಒಂದರೊಡನೊಂದು ತಳಕು ಹಾಕಿಕೊಂಡಿದ್ದ ಪ್ರತಿಗಾಮಿ ಶಕ್ತಿಗಳನ್ನು ಬೇರ್ಪಡಿಸುವುದಾಗಲೀ ವಿರೋಧಿಸುವುದಾಗಲೀ ಸಾಮಾನ್ಯ ಸಂಗತಿಯಾಗಿರಲಿಲ್ಲ. ಇಂಥ ವ್ಯವಸ್ಥೆಯ ನಡುವೆಯೂ ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಮೊಳಗಿತು. ಆದರೆ ಸೈದ್ಧಾಂತಿಕ ಭಿನ್ನಾಭಿಪ್ರಾಯದಿಂದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಎರಡು ಗುಂಪುಗಳು ರೂಪುಗೊಂಡವು. ಅವುಗಳೆಂದರೆ ಪ್ರತಿಗಾಮಿ ಶಕ್ತಿಗಳ ಜೊತೆ ರಾಜೀಮಾಡಿ ಕೊಂಡ ಸಂಧಾನ ಪಂಥ. ಮತ್ತೊಂದು ಯಾವ ಶಕ್ತಿಗಳೊಂದಿಗೂ ರಾಜಿ ಮಾಡಿಕೊಳ್ಳದೆ ವಿರುದ್ಧವಾಗಿ ನಿಂತು ಹೋರಾಡಿದ ಪಂಥ- ಸಂಧಾನಾತೀತವಾದ ಕ್ರಾಂತಿಕಾರಿ ಪಂಥ.

ಮೊದಲನೆಯದು ಮೃದುಮಾರ್ಗ ಹಿಡಿದರೆ, ಎರಡನೆಯದು ಕ್ರಾಂತಿ ಮಾರ್ಗ ಹಿಡಿಯಿತು. ಮೊದಲನೆಯದು ಗಾಂಧೀಜಿ ಪ್ರಣೀತ ಅಹಿಂಸೆ, ಸತ್ಯಾಗ್ರಹಗಳಿಂದ ಕೂಡಿದ ಕಾಂಗ್ರೇಸ್ ಪಂಥ. ಎರಡನೆಯದು ಸಾಮ್ರಾಜ್ಯಶಾಹಿಯ ನೇಣಿಗೆ ತಲೆಯೊಡ್ಡಿ ತಮ್ಮ ತನುಮನ ಧನಗಳನ್ನು ಅರ್ಪಿಸಲು ಸಿದ್ಧವಾದ ಸಂಧಾನಾತೀತ ಯುವಕರ ಪಂಥ. ಈ ಪಂಥದ ಅಸಂಖ್ಯಾತ ತರುಣರಲ್ಲಿ ಬ್ರಿಟೀಷರಿಗೆ ಧೂಮಕೇತುವಿನಂತೆ ಕಂಡ ಭಗತ್‌ಸಿಂಗ್‌ನದು ಮೇರುಸದೃಶವಾದ ವ್ಯಕ್ತಿತ್ವ.

ಆರಂಭದಲ್ಲಿ ಗಾಂಧೀಜಿ ಕರೆಗೆ ಯುವಕರೆಲ್ಲ ಓಗೊಟ್ಟು ಮನೆ, ಮಠ, ತಂದೆ, ತಾಯಿ, ಬಂಧು-ಬಳಗ ತೊರೆದು ಸ್ವಾತಂತ್ರ್ಯ ಸಂಗ್ರಾಮ

ದಲ್ಲಿ ಘೋಷಿಸಿದಂತೆ ಭಗತ್‌ಸಿಂಗ್‌ನೂ ಕೂಡ ಗಾಂಧೀಜಿಯವರ ಪ್ರಭಾವಲಯಕ್ಕೆ ಸೇರಿದ್ದ.

ಮೂಢನಂಬಿಕೆ, ಕಂದಾಚಾರ, ಬಂಡವಾಳಶಾಹಿತನದ ಊಳಿಗಮಾನ್ಯ ಪಂಥದವರ ಹೆಗಲಮೇಲೆ ಹೊರಟಿದ್ದ ಗಾಂಧೀಜಿಯವರಿಂದ ಬ್ರಿಟೀಷರನ್ನು ಓಡಿಸುವುದು ಸಾಧ್ಯವೂ ಇಲ್ಲ, ಸಾಧುವೂ ಅಲ್ಲ ಎಂಬುದನ್ನು ನಿಧಾನವಾಗಿ ಮನಗಂಡ. ಗಾಂಧೀಜಿಯವರೊಂದಿಗೆ ಸೇರಿ ಸ್ವಾತಂತ್ರ್ಯ ಪಡೆದರೆ ದೇಶವನ್ನು ಸಾಮ್ರಾಜ್ಯಶಾಹಿ ಕೈಯಿಂದ ಊಳಿಗಮಾನ್ಯ ವ್ಯವಸ್ಥೆಯ ಬಂಡವಾಳಶಾಹಿ ತೆಕ್ಕೆಗೆ ಒಪ್ಪಿಸಿದಂತಾಗುತ್ತದೆ. ಇದು ಹಾವ್ರೊಡೆದು ಹದ್ದಿಗೆ ಹಾಕಿದಂತಾಗುತ್ತದೆ ಎನ್ನುವ ಕಲ್ಪನೆ ಆಗಿನ ಯುವ ಕ್ರಾಂತಿಕಾರಿ ಗುಂಪಿಗೆ ಅರ್ಥವಾಗಿತ್ತು. ಅದಕ್ಕಾಗಿ ಯುವಕರು ತಮ್ಮದೇ ಆದ ಸಂಘರ್ಷದ ಹಾದಿಯನ್ನು ಕಂಡುಕೊಂಡು, ಕಾಂಗ್ರೆಸ್ ಸಖ್ಯದಿಂದ ದೂರ ಸರಿದರು.

ಸಂಘರ್ಷದ ಹೋರಾಟವೆಂದರೆ ಹಿಂಸೆಯ ಹೋರಾಟವಲ್ಲ. ಅಂದಿನ ಕ್ರಾಂತಿಕಾರಿ ಯುವಕರಿಗೆ ಹಿಂಸೆಯಲ್ಲಿ ನಂಬಿಕೆಯಿರಲಿಲ್ಲ. ಭಗತ್‌ಸಿಂಗ್‌ನೂ ಕೂಡ ಹಿಂಸೆಯನ್ನು ಒಪ್ಪಿರಲಿಲ್ಲ. "ಕ್ರಾಂತಿ ಆವಶ್ಯಕವಾಗಿ ರಕ್ತಪಾತದ ಕಲಹವನ್ನು ಒಳಗೊಂಡಿರಬೇಕೆಂದಲ್ಲ. ಇಲ್ಲಿ ವೈಯಕ್ತಿಕ ದ್ವೇಷ ಸಾಧನೆಗೆ ಯಾವುದೇ ಸ್ಥಾನವಿಲ್ಲ. ಕ್ರಾಂತಿ ಬಾಂಬ್. ಅಥವಾ ಪಿಸ್ತೂಲಿನ ಆರಾಧನ ಅಲ್ಲ. ಕ್ರಾಂತಿ ಎಂದರೆ ಸ್ಪಷ್ಟವಾಗಿ ಅನ್ಯಾಯದ ಮೇಲೆ ಆಧಾರಪಟ್ಟಿರುವ ಪ್ರಸಕ್ತ ವ್ಯವಸ್ಥೆಯನ್ನು ಬದಲಾಯಿಸುವುದು ಎಂಬುದು ನಮ್ಮ ಅಭಿಪ್ರಾಯ"– ಎಂದು ಭಗತ್‌ಸಿಂಗ್ ಸ್ಪಷ್ಟವಾಗಿ ಘೋಷಿಸಿದ್ದ. ಇಂಥ ಕ್ರಾಂತಿ ಮನೋಧರ್ಮದ ಹೋರಾಟಗಾರರು ಕಾಂಗ್ರೆಸ್ ಗುಂಪಿನಲ್ಲಿದ್ದು ಹೊಂದಿಕೊಳ್ಳಲಾರದೆ ಕೊನೆಗೆ ಹೊರಗೆ ಬಂದದ್ದೂ ಉಂಟು. ಅಂಥವರಲ್ಲಿ ಮುಖ್ಯವಾಗಿ ಸುಭಾಷ್ ಚಂದ್ರ ಬೋಸ್ ಒಬ್ಬರು ಎಂಬುದನ್ನು ಮರೆಯುವಂತಿಲ್ಲ.

ಭಗತ್‌ಸಿಂಗ್ ಪ್ರತಿಭಾಶಾಲಿ. ನಾಚಿಕೆ ಸ್ವಭಾವದವನಾದರೂ ಧೈರ್ಯವಂತ. ಚಿಕ್ಕವನಿರುವಾಗಲೇ ತಾನು 'ದೇಶಭಕ್ತಿ ಪಂಥ' ದವನೆಂದು ಹೇಳಿಕೊಳ್ಳುತ್ತಿದ್ದ. ಈ ಗುಣಕ್ಕೆ ತನ್ನ ತಾಯಿಯ ಪ್ರೇರಣೆ ಮತ್ತು ಪ್ರಭಾವವೂ ಕಾರಣವಾಗಿದ್ದು "ದ ಗ್ರೇಟ್ ಮ್ಯಾನ್ ಬಿಹೈಂಡ್ ದ ಗ್ರೇಟ್ ಲೇಡಿ"– ಎಂಬುದಕ್ಕೆ ಭಗತ್‌ಸಿಂಗನ ತಾಯಿ ಸಾಕ್ಷಿಯಾಗಿದ್ದರು. ೨೪ ವರ್ಷ ಹರೆಯದ ಭಗತ್‌ಸಿಂಗನಿಗೆ ಮರಣ ದಂಡನೆ ಖಚಿತವಾದಾಗ, ಕೊನೆಯ ಭೇಟಿಯಲ್ಲಿ ತಾಯಿ "ಮಗು ನಿನ್ನ ನಿಲುವನ್ನು ಯಾವ ಕಾರಣದಿಂದಲೂ ಬದಲಾಯಿಸಬೇಡ. ಎಲ್ಲರೂ ಎಂದಾದರೊಂದು ದಿನ ಸಾಯಲೇಬೇಕು. ಆದರೆ ಇಡೀ ವಿಶ್ವವೇ ಸ್ಮೃತಿಯಲ್ಲಿಡುವಂತಹ ಸಾವು ಅತ್ಯುತ್ತಮವಾದ ಸಾವು. ನನ್ನ ಮಗ ಒಂದು ಮಹಾತ್ಯಾಗ ಮಾಡುತ್ತಿದ್ದಾನೆಂದು ನನಗೆ ಹೆಮ್ಮೆಯಿದೆ. ನನ್ನ ಮಗ "ಇಂಕ್ವಿಲಾಬ್–ಜಿಂದಾಬಾದ್" ಎಂಬ ಘೋಷಣೆಯನ್ನು ಕೊನೆಯವರೆಗೂ ಕೂಗುತ್ತಿರಬೇಕೆಂಬುದೊಂದೇ ನನ್ನ ಅಭಿಲಾಷೆ. ನನ್ನ ಮಗನ ತೂಕ ಹೆಚ್ಚಬೇಕೇ ಹೊರತು ಕಡಿಮೆಯಾಗಬಾರದು" ಎಂದು ತನ್ನ ಮಗನಿಗೆ ಸಂಕಲ್ಪ ದೀಕ್ಷೆ ತೊಡಿಸಿದ್ದ ವಿದ್ಯಾದೇವಿ, ವೀರ ಪುತ್ರನಿಗೆ ತಕ್ಕ ವೀರಮಾತೆಯಾಗಿದ್ದಳು.

ಭಗತ್‌ಸಿಂಗ್ ವ್ಯಾಸಂಗಾವಧಿಯಲ್ಲೇ ಅಸಹಕಾರ ಚಳುವಳಿಯಲ್ಲಿ ತೊಡಗಿದ್ದ. ಇದಕ್ಕೆ ಮನೆಯವರ ಪರೋಕ್ಷ ಬೆಂಬಲ ಹಾಗೂ ಮಾರ್ಗದರ್ಶನವಿತ್ತು. ಹೀಗಿದ್ದರೂ ಈತನ ವ್ಯಾಸಂಗಕ್ಕೆ ತಡೆಯಾದದ್ದು ಚಳುವಳಿಯಲ್ಲ; ಮದುವೆ ಪ್ರಸಂಗ.

ತನ್ನ ಕುಟುಂಬದ ಎಲ್ಲರಿಂದಲೂ ಪ್ರೀತಿಯನ್ನು ಗಳಿಸಿದ್ದ ಈತನಿಗೆ ಅಜ್ಜಿಯ ಒತ್ತಾಸೆಯಂತೆ ತಂದೆ ತಾಯಿಗಳು ತಮ್ಮ ಕುಟುಂಬಕ್ಕೆ ಒಪ್ಪುವ ಹೆಣ್ಣನ್ನು ನೋಡಿ ಮದುವೆಗೆ ಒತ್ತಾಯಿಸಿದರು. ಆಗ ಭಗತ್‌ಸಿಂಗ್ ಎಫ್.ಎ. ಪರೀಕ್ಷೆ ಮುಗಿಸಿ ಬಿ.ಎ. ತರಗತಿಯಲ್ಲಿದ್ದ. ಮದುವೆಯ ಸುದ್ದಿ ತಿಳಿದು ತಂದೆ ಕಿಶನ್‌ಸಿಂಗ್‌ಗೆ ಪತ್ರದ ಮುಖಾಂತರ

ತನ್ನ ನಿರ್ಧಾರ ತಿಳಿಸಿದ. "ಇದು ಮದುವೆಗೆ ಕಾಲವಲ್ಲ. ದೇಶವು ನನಗೆ ಕರೆಯುತ್ತಿದೆ. ನನ್ನ ತನು ಮನ ಧನವೆಲ್ಲ ದೇಶಕ್ಕೆ ಅರ್ಪಿಸಬೇಕೆಂಬ ತೀರ್ಮಾನಕ್ಕೆ ನಾನು ಬಂದಿದ್ದೇನೆ. ಇದು ನಮ್ಮ ಕುಟುಂಬಕ್ಕೆ ಹೊಸದೇನೂ ಅಲ್ಲ. ನಮ್ಮ ಇಡೀ ಕುಟುಂಬ ದೇಶಪ್ರೇಮದಿಂದ ತುಂಬಿದೆ ನಾನು ಹುಟ್ಟಿದ ೨-೩ ವರ್ಷಗಳಲ್ಲೇ ಚಿಕ್ಕಪ್ಪ ಸ್ವರಣಸಿಂಗ್ ಜೈಲಿನಲ್ಲಿ ಸಾವನ್ನಪ್ಪಿದ. ಅಜಿತ್‌ಸಿಂಗ್ ಚಿಕ್ಕಪ್ಪ ಈಗಲೂ ವಿದೇಶಗಳಲ್ಲಿಯೇ ಉಳಿಯಬೇಕಾಗಿ ಬಂದಿದೆ. ನೀನು ಸಹ ಹಲವು ಬಾರಿ ಕಾರಾಗೃಹ ವಾಸವನ್ನನುಭವಿಸಿದ್ದೀಯೇ. ನಿಮ್ಮೆಲ್ಲರ ಹಾದಿಯನ್ನೇ ನಾನೂ ಅನುಸರಿಸುತ್ತಿದ್ದೇನೆ. ಆದ್ದರಿಂದ ನನ್ನನ್ನು ಕುಟುಂಬಕ್ಕೆ ಗಂಟು ಹಾಕಬೇಡಿ. ಬದಲು ನನ್ನ ಉದ್ದೇಶ ಸಾಧನೆಗೆ ನಿಮ್ಮ ಹರಕೆ ನೀಡಿ".

ಆದರೆ ಈತನ ನಿರ್ಧಾರಕ್ಕೆ ಮನೆಯವರು ಮಣಿಯದೆ, ಹಠದ ಮಾರ್ಗ ಹಿಡಿದು ಆಜ್ಞಾರೂಪದ ಪತ್ರ ಬರೆದರು. ಅದಕ್ಕೂ ತಾನು ಜಗ್ಗದೆ ತಂದೆಗೆ ಮಾರುತ್ತರ ನೀಡಿದ: "ನಿನ್ನ ಕಾಗದ ನೋಡಿ ನನಗೆ ಅಚ್ಚರಿ ಎನಿಸಿದೆ.... ಮೂವತ್ತು ಮೂರು ಕೋಟಿ ಜನರ ನಮ್ಮ ತಾಯಿ ಭಾರತಮಾತೆಯ ಚಿಂತೆಯನ್ನೇನಾದರೂ ನೀನು ಮಾಡಿರುವೆಯಾ ? ಅವಳ ಕಷ್ಟ ಪರಿಹಾರಕ್ಕಾಗಿ ನಮ್ಮ ಸರ್ವಸ್ವವನ್ನೂ ನಾವು ತ್ಯಾಗ ಮಾಡಬೇಕಲ್ಲವೆ ? ನನಗೆ ಗೊತ್ತು, ನೀವೆಲ್ಲಾ ಒತ್ತಾಯಮಾಡಿ ನನಗೆ ಮದುವೆ ಮಾಡಿಸುತ್ತೀರಿ. ಆದ್ದರಿಂದ ನಾನು ಈ ಊರನ್ನೇ ಬಿಟ್ಟು ಬೇರೆಲ್ಲಿಗೋ ಹೊರಟುಹೋಗುತ್ತೇನೆ."

೧೯೨೪ರಲ್ಲಿ ಮದುವೆ ಪ್ರಸಂಗದಿಂದ ಕಾಲೇಜಿನ ವ್ಯಾಸಂಗಕ್ಕೆ ಮಂಗಳಹಾಡಿ ಬಿ.ಎ. ಪರೀಕ್ಷೆಗೆ ಕೂರಲಾರದೆ, ಕಾನ್ಪುರಕ್ಕೆ ತೆರಳಿದ. ಅಲ್ಲಿಗೆ ತೆರಳುವ ಮುನ್ನ ತನ್ನ ಸಂಗಾತಿಗಳಲ್ಲಿ ತನ್ನ ದೃಢನಿರ್ಧಾರವನ್ನು ಘೋಷಿಸಿದ: "ನಾನು ಖಚಿತವಾಗಿ ನಿಮಗೆ ಹೇಳುತ್ತಿದ್ದೇನೆ. ನನ್ನ ಮದುವೆ ಏನಾದರೂ ದಾಸ್ಯದಲ್ಲಿ ತೊಳಲುತ್ತಿರುವ ಈ ಭಾರತದಲ್ಲಿ

ಆಗುವುದಿದ್ದರೆ ಅದು ಮೃತ್ಯು ಎಂಬ ಪತ್ನಿಯೊಡನೆ ಮಾತ್ರ. ನನ್ನ ಮದುವೆಯ ಮೆರವಣಿಗೆ ಶವದ ಮೆರವಣಿಗೆಯಂತೆ ಮಾತ್ರ ಸಾಧ್ಯ. ಆಗ ಮೆರವಣಿಗೆಯಲ್ಲಿ ಬರುವ ಇತರರೆಂದರೆ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿರುವ ಹುತಾತ್ಮರಷ್ಟೆ". ಹೀಗೆ ಹಿಡಿದ ಹಠ, ತಾಳಿದ ನಿಲುವಿನಲ್ಲಿ ಕಿಂಚಿತ್ತೂ ಬದಲಾಗದೆ ಹೋರಾಟವನ್ನು ಆಯ್ಕೆ ಮಾಡಿಕೊಂಡ ದೇಶ ಪ್ರೇಮಿ ಈತ.

ಅಧ್ಯಾಯ ೨

ಪ್ರಬುದ್ಧ ಚಿಂತಕ ಹಾಗೂ ಸಂಘಟಕ

ಕ್ರಾಂತಿಕಾರಿ ಯುವಕರಲ್ಲಿ ಬಂಡಾಯ ಮನೋಧರ್ಮದ ವ್ಯಕ್ತಿ ಭಗತ್‌ಸಿಂಗ್. ಈತನಿಗೆ ಕಾರ್ಮಿಕರ, ರೈತರ, ಶೋಷಿತರ ಜನರ ಸಮಸ್ಯೆಗಳನ್ನು ಸಂಪೂರ್ಣವಾಗಿ ತೊಡೆದುಹಾಕುವ ಗುರಿ ಇತ್ತು. ಅದಕ್ಕಾಗಿ, ಮುಂಚೆ ಈತ ಇಡೀ ಸಮಾಜವನ್ನೇ ಅಧ್ಯಯನ ಮಾಡಿದ. ಹಗಲಿರುಳು ಸಂಚರಿಸಿದ. ಪುಸ್ತಕಗಳನ್ನು ಮೊರೆಹೊಕ್ಕ. ಬುದ್ಧಿವಂತರನ್ನು ಎಡತಾಕಿದ. ಯುವಕರನ್ನು ಹುರಿದುಂಬಿಸಿದ. ಮುಗ್ಧರನ್ನು ಜಾಗೃತಿಗೊಳಿಸಿದ. ರೈತಕಾರ್ಮಿಕರನ್ನು ಸಂಘಟಿಸಿದ. ಹೀಗೆ ತನ್ನ ಹೋರಾಟಕ್ಕೆ ಭೂಮಿಕೆಯನ್ನು ಸಿದ್ಧಪಡಿಸಿಕೊಳ್ಳುತ್ತಲೇ ಸಮಾಜವಾದಿ ಭಾರತದ ಕನಸು ಕಂಡ.

ಪ್ರಸ್ತುತ ಭಾರತದಲ್ಲಿ ಯುವಶಕ್ತಿ ಲಗಾಮಿಲ್ಲದ ಹುಚ್ಚು ಕುದುರೆಯಂತೆ ದಿಕ್ಕುತಪ್ಪಿ ಓಡುತ್ತ ವ್ಯವಸ್ಥೆಯನ್ನು ಹಾಳುಗೆಡವುತ್ತಿದೆ. ಸ್ವಾರ್ಥ ರಾಜಕಾರಣಿಗಳ, ಧರ್ಮಾಂಧರ, ಬಂಡವಾಳಶಾಹಿಗಳ, ಸಮಾಜ ಘಾತುಕರ ಆಮಿಷಗಳಿಗೆ ಬಲಿಯಾಗಿ, ಅವರ ಪದತಲದಲ್ಲಿ ತಮ್ಮತನವನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು ಜೀವನ್ಮೃತರಂತಿರುವ ಯುವಕರ ದಂಡು ಹೆಚ್ಚು ಕಾಣುತ್ತಿದೆ. (ಈ ಅಪಾಯದಿಂದ

ಕೆಲವು ವಿದ್ಯಾರ್ಥಿ ಸಂಘಟನೆಗಳು ಹಾಗೂ ಯುವಕರು ಮುಂಚೂಣಿಯಲ್ಲಿರು ವುದು ಸಮಾಧಾನದ ಸಂಗತಿ).

ಯುವಶಕ್ತಿ ಒಂದು ಪ್ರಚಂಡ ಶಕ್ತಿ. ಅದನ್ನು ಸನ್ಮಾರ್ಗದಲ್ಲಿ ಒಗ್ಗೂಡಿಸಿ, ರಾಷ್ಟ್ರೀಯವಾಹಿನಿಯಲ್ಲಿ ಜೋಡಿಸುವ ಕಾರ್ಯ ಹಿನ್ನಡೆ ಗೊಂಡಿದೆ. ರಾಷ್ಟ್ರಪ್ರಜ್ಞೆ, ಪ್ರಗತಿ ಚಿಂತನೆ ಮುಖ್ಯವೆನಿಸದೆ, ವಿಷಯ ಲೋಲುಪರಾಗಿ, ಧರ್ಮಾಂಧರಾಗಿ, ಹೃದಯ ಹೃದಯಗಳ ಬೆಸುಗೆಗೆ ಮಾರಕವಾಗಿ ಮಾನವೀಯತೆಯನ್ನು ಛಿದ್ರಗೊಳಿಸುವ ಕಾರ್ಯದಲ್ಲಿ ಮುಂದಾಗಿದ್ದಾರೆ. ಹಲವು ಪಕ್ಷಗಳ ಸಿದ್ಧಾಂತಗಳಿಗೆ ಹರಿದು ಹಂಚಿಹೋಗಿ ವೈಚಾರಿಕತೆ, ವೈಜ್ಞಾನಿಕತೆಯಿಂದ ವಂಚಿತರಾಗಿದ್ದಾರೆ.

ವಿಶ್ವದ ಯಾವುದೇ ನಾಡಿನಲ್ಲಿ ಕ್ರಾಂತಿಕಾರಿ ತತ್ವಗಳಿಂದ ಹೋರಾಟ ನಡೆಸಿ ಹೊಸ ಬದುಕಿಗೆ, ಹೊಸ ಗಾಳಿಗೆ ಕಾರಣರಾದವರು ಯುವಕರು. ಇದನ್ನು ನಮ್ಮನ್ನಾಳುವ ಜನ ಮರೆತಿದ್ದಾರೆ. ಯುವಕರು ಅಂಧರಂತೆ ಕಣ್ಮುಚ್ಚಿ ಕುಳಿತಿದ್ದಾರೆ. ಇದಕ್ಕೆ ನಿಜವಾದ ಕಾರಣ, ಅಂದಿನ ಸ್ವಾತಂತ್ರ್ಯದ ಲಾಭ ಅನುಭವಿಸಲು ಊಳಿಗಮಾನ್ಯ ಪಂಥದವರು ಮಾಡಿದ ಹುನ್ನಾರ ಅಷ್ಟೆ.

ನಮ್ಮ ಸಮಾಜದಲ್ಲಿನ ತೀವ್ರ ಸಾಂಸ್ಕೃತಿಕ ಅಧಃಪತನವನ್ನು ಕಂಡು ಅತೀವ ಕಾಳಜಿಯಿಂದ ಕಾಮ್ರೇಡ್ ಘೋಷ್, "ಭಾರತೀಯ ಬಂಡವಾಳಶಾಹಿಗಳು ಕ್ರಾಂತಿಕಾರಿ ಚಳುವಳಿಯ ಬೆಳವಣಿಗೆಯನ್ನು ಪ್ರತಿರೋಧಿಸುವ ಮತ್ತು ಜನತೆಯ ಪ್ರತಿರೋಧ ಶಕ್ತಿಯನ್ನು ಧ್ವಂಸ ಗೊಳಿಸುವ ದುರುದ್ದೇಶದಿಂದ ಎಲ್ಲಾ ಮಾನವ ಮೌಲ್ಯಗಳನ್ನು ನಾಶ ಗೊಳಿಸಲು ಯತ್ನಿಸುತ್ತಿದ್ದಾರೆ. ದೇಶದ ನೈತಿಕ ಬೆನ್ನೆಲುಬನ್ನು ಮುರಿಯಲು ಯತ್ನಿಸುತ್ತಿದ್ದಾರೆ. ಈ ಹೀನ ಕುತಂತ್ರದ ಭಾಗವಾಗಿ ಆಳುವ ವರ್ಗವು ಕ್ರಾಂತಿಕಾರಿಗಳ ಮತ್ತು ಮಹಾನ್ ವ್ಯಕ್ತಿಗಳ ನೆನಪು ಗಳನ್ನು ಅಳಿಸಲೆತ್ನಿಸುತ್ತಿದೆ...." ಎಂದು ವ್ಯಥೆಗೊಂಡಿರುವುದು ವಾಸ್ತವಿಕವಾಗಿದೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಂದಿನ ಯುವ ಜನತೆಗೆ ಕ್ರಾಂತಿಯು ಕೆಚ್ಚು ಮೂಡಿಸಿ, ಮಹಾತ್ಮರಾದಿ ಪಂಥ ಮತ್ತು ಆಳಿಗದವನ್ನು ಪಂಥಗಳೆರಡನ್ನೂ ಏಕಕಾಲದಲ್ಲಿ ಎದುರಿಸಿದ ಯುವಕರ ಇತಿಹಾಸ ನಮ್ಮಲ್ಲಿ ಮುಚ್ಚಿಹೋಗಿದ್ದರೂ ಅದನ್ನು ಗತಕಾಲದಲ್ಲಿ ಹೂಳಿಡುವ ಕೆಲಸ ನಮ್ಮಲ್ಲಿ ವ್ಯವಸ್ಥಿತವಾಗಿ ನಡೆದಿದೆ. ಸ್ವಾತಂತ್ರ್ಯ ಗಳಿಕೆಯಲ್ಲಿ ಸಂಧಾನಾತೀತರು, ಸಂಧಾನಪರರು ಒಟ್ಟೊಟ್ಟಿಗೆ ಶ್ರಮಿಸಿದ್ದರೂ ಕೂಡ, ಸಂಧಾನಪರರಿಗೆ ಸಿಕ್ಕಿದ ಪರಾಕು ಸಂಧಾನಾತೀತರಿಗೆ ಸಿಗಲಿಲ್ಲ. ಇದನ್ನು ತುಂಬ ಎಚ್ಚರಿಕೆಯಿಂದ ಸ್ವಾತಂತ್ರ್ಯ ಲಾಭ ಪಡೆದ ಬಂಡವಾಳಶಾಹಿ ಆಳ್ವಿಕರು, ಭಗತ್‌ಸಿಂಗ್ ಮತ್ತಿತರ ಕ್ರಾಂತಿಕಾರಿ ದೇಶಪ್ರೇಮಿಗಳ ಹೆಸರುಗಳನ್ನು ಅವರ ಜೀವನ, ಧ್ಯೇಯ, ಆದರ್ಶ, ಹೋರಾಟಗಳನ್ನು ಜನತೆಯ ಮನಸ್ಸಿನಿಂದ ಅಳಿಸಿಹಾಕುವ ನೀತಿಯನ್ನು ಅನುಸರಿಸಿದರು. ಏಕೆಂದರೆ ಆ ಮಹಾನ್ ಯೋಧರ ನೆನಪುಗಳಿಂದ ಸ್ಫೂರ್ತಿ ಪಡೆದು, ನಮ್ಮ ಯುವ ಜನರು ವ್ಯವಸ್ಥೆಯ ವಿರುದ್ಧ ತಿರುಗಿ ಬಿದ್ದರೆ, ತಮ್ಮ ಬುಡಕ್ಕೆ ಕೊಡಲಿ ಪೆಟ್ಟು ಬೀಳುತ್ತದೆಂಬ ಭಯದಿಂದ. ಅದಕ್ಕಾಗಿ ಇತಿಹಾಸವನ್ನೂ ಕೂಡ ವಿರೂಪಗೊಳಿಸಿದರು. ಅದನ್ನು ಈಗ ಸರಿಪಡಿಸಬೇಕಾಗಿದೆ.

ಈಗಿನ ಯುವಜನತೆ ತಮ್ಮ ಪರಾವಲಂಬಿ ಬದುಕಿನಿಂದ ಪಾರಾಗಬೇಕಾದರೆ, ತಾಯಿನಾಡಿನ ಬಿಡುಗಡೆಗಾಗಿ ಹೋರಾಟ ಮಾಡಿ ಅಮರರಾದ ಯುವಕರ ಬದುಕನ್ನು ಅರ್ಥಮಾಡಿಕೊಂಡು ಮುನ್ನುಗ್ಗಬೇಕು. ವೈಜ್ಞಾನಿಕ, ವೈಚಾರಿಕ ಧೋರಣೆಯಿಂದ ವಸ್ತುನಿಷ್ಠವಾಗಿ ಅಧ್ಯಯನ ಮಾಡಿದರೆ ಈಗಲೂ ಸುಂದರ ಸುಖೀರಾಜ್ಯದ ನಿರ್ಮಾಣ ಯುವಕರಿಂದ ಆಗುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಈ ದೇಶ, ಹಿಂದೆ ಪರಕೀಯರ ಕಪಿಮುಷ್ಟಿಗೆ ಸಿಕ್ಕಿ ಗಂಭೀರಸ್ಥಿತಿ ತಲುಪಿದ್ದಾಗ, ಭಗತ್‌ಸಿಂಗ್ ಯುವಕರಿಗೆ ನೀಡಿದ್ದ ಕರೆ ಗಮನಾರ್ಹ :

"ಪ್ರಪಂಚದೆಲ್ಲೆಡೆ ಸ್ವಾತಂತ್ರ್ಯಕ್ಕಾಗಿನ ಸಮರದಲ್ಲಿ ವಿದ್ಯಾರ್ಥಿಗಳು ಮುಂಚೂಣಿಯಲ್ಲಿದ್ದು ಬಲಿದಾನ ಮಾಡಿದ್ದಾರೆ. ನಮ್ಮ ದೇಶದ ಈ ಪರಿಸ್ಥಿತಿಯಲ್ಲಿ ಭಾರತೀಯ ಯುವಕರು ಅದೇ ದೃಢ ಸಂಕಲ್ಪವನ್ನು ಪ್ರದರ್ಶಿಸಲು ಹಿಂತೆಗೆಯುತ್ತಾರೆಯೇ ? ಯಾವ ಕ್ರಾಂತಿ ಜನತೆಗೆ ಸ್ವಾತಂತ್ರ್ಯವನ್ನು ತಂದುಕೊಟ್ಟು ಮಾನವನಿಂದ ಮಾನವನ ಶೋಷಣೆಯನ್ನು ಅಸಾಧ್ಯಗೊಳಿಸುತ್ತದೆಯೋ ಅಂತಹ ಕ್ರಾಂತಿಯ ಸಂದೇಶವನ್ನು ಯುವ ಜನರು ದೇಶದ ಮೂಲೆ ಮೂಲೆಗೂ ಒಯ್ಯಬೇಕು. ಮಿಲಿಯಾಂತರ ಜನತೆಗೆ, ಕೈಗಾರಿಕೆ, ಕೊಳಗೇರಿ ಗುಡಿಸಲುಗಳಿಗೆ ತಲುಪಿಸಬೇಕು."

ಇಂಥ ದೂರದೃಷ್ಟಿಯುಳ್ಳ ಭಗತ್‌ಸಿಂಗ್ ಅಂದು ಸಿಡಿಲಮರಿಯಾಗಿ, ಚಿಂತನೆಯ ಚಿಲುಮೆಯಾಗಿ, ಯುವಕರನ್ನು ಹುರಿದುಂಬಿಸಿದ್ದು, ಸಂಘಟನೆಗಳನ್ನು ಅಸ್ತಿತ್ವಕ್ಕೆ ತಂದಿದ್ದು, ಹೋರಾಟಕ್ಕೆ ರೂಪರೇಷೆಗಳನ್ನು ಒದಗಿಸಿದ್ದು, ಸವಾಲುಗಳಿಗೆ ಸೆಟೆದು ನಿಂತದ್ದು, ಎದುರಾದ ಗಂಡಾಂತರಗಳಿಂದ ಪಾರಾದದ್ದು ಈತನ ಪ್ರಬುದ್ಧ ಚಿಂತನೆ ಹಾಗೂ ಸಂಘಟನಾ ಶಕ್ತಿಗೆ ನಿದರ್ಶನವಾಗಿದೆ.

ಹೋರಾಟದ ವಂಶವಾಹಿನಿಯಲ್ಲಿ ಹುಟ್ಟಿಬಂದಿದ್ದ ಭಗತ್‌ಸಿಂಗ್‌ಗೆ ವಿದ್ಯಾರ್ಥಿಯಾಗಿದ್ದಾಗಲೇ ಜಲಿಯನ್‌ವಾಲಾಬಾಗ್ ಪ್ರಕರಣ ನಡೆದು ಸುಪ್ತವಾಗಿದ್ದ ಹೋರಾಟ ಪ್ರಜ್ಞೆ ಜಾಗೃತಗೊಂಡಿತ್ತು. ಇದಕ್ಕೆ ೧೮೫೭ರಲ್ಲಿ ನಡೆದ ಸಿಪಾಯಿ ದಂಗೆ – ಕಾರ್ಲ್ ಮಾರ್ಕ್ಸ್ ಅದನ್ನು 'ಭಾರತದ ಪ್ರಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆದರು–ಯ ಉದ್ಭವ ಮತ್ತು ಅದರ ಕೊಡುಗೆ ಪ್ರೇರಣೆ ನೀಡಿತ್ತು. ರೌಲಟ್‌ಶಾಸನದ ವಿರುದ್ಧದ ಆಂದೋಳನ, ಖಿಲಾಫತ್ ಪ್ರಶ್ನೆಗಳು ಚಿಂತನೆಗೆ ಪ್ರಚೋದಿಸಿದವು. ಜೊತೆಗೆ ಡಿ.ಎ.ವಿ.ಕಾಲೇಜಿನಲ್ಲಿರುವಾಗ ಈತನಿಗೆ ರಾಜಕೀಯ ಗುರುಗಳಾಗಿ ಜೈಚಂದ್ ವಿದ್ಯಾಲಂಕಾರ್ ಮತ್ತು ಭಾಯಿ ಪರಮಾನಂದರು ದೊರೆತರು, ಈತನಲ್ಲಿ ಅಂತರ್ಗತವಾಗಿದ್ದ ಹೋರಾಟ ಪ್ರಜ್ಞೆಗೆ ಚಾಲನೆ ನೀಡಿದರು. ಇದರಿಂದಾಗಿ ಈತ ಕಾಲೇಜು

ವಿದ್ಯಾರ್ಥಿ ಸಮುದಾಯದ ಮುಖಂಡನಾದದ್ದು ಮಾತ್ರವಲ್ಲ; ವಿದ್ಯಾರ್ಥಿ ಸಂಘಟನೆಗೆ ಕಾರಣಕರ್ತನಾದ.

ಅದೇ ವೇಳೆಗೆ ೧೯೨೦ರಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿಗೆ ಕರೆಕೊಟ್ಟರು. ಆಗ ಡಿ.ಎ.ವಿ. ಕಾಲೇಜು ತೊರೆದು ನ್ಯಾಷನಲ್ ಕಾಲೇಜಿಗೆ ಸೇರಿಕೊಂಡ. ಅಲ್ಲಿಯೇ ಈತನಿಗೆ ಭಗವತಿ ಚರಣ್, ಸುಖದೇವ್, ಯಶಪಾಲ್‌ರಂಥ ಗೆಳೆಯರು ದೊರೆತರು.

ನಾಯಕತ್ವದ ಲಕ್ಷಣ ಈತನಲ್ಲಿತ್ತು. ತಾನು ಗಳಿಸಿಕೊಂಡಿದ್ದ ಅಸಾಧಾರಣ ಜ್ಞಾನ ಹಾಗೂ ವಿನಯ ಪ್ರಜ್ಞೆ ಜೊತೆಗೆ ಎಲ್ಲರೊಂದಿಗೂ ಬೆರೆತು ಮುಕ್ತವಾಗಿ ಚರ್ಚಿಸುವ ಗುಣ ಹೊಂದಿದ್ದ. ತನ್ನ ತೀರ್ಮಾನಗಳನ್ನು ಬಲಾತ್ಕಾರವಾಗಿ ಬೇರೆಯವರ ಮೇಲೆ ಹೇರುವುದಾಗಲಿ, ಯುವಕರು ಮಾಡಿದ ತಪ್ಪುಗಳನ್ನು ಎತ್ತಾಡಿ ದಂಡಿಸುವುದನ್ನಾಗಲಿ ಮಾಡುತ್ತಿರಲಿಲ್ಲ. ಯಾವ ಕೆಲಸವಾದರೂ ಎಲ್ಲರೊಂದಿಗೆ ಚರ್ಚಿಸದೆ ಕೈಗೆತ್ತಿಕೊಳ್ಳುತ್ತಿರಲಿಲ್ಲ. ಅರ್ಹತೆಗೆ ತಕ್ಕಂತೆ ಮಿತ್ರರಿಗೆ ಹೊಣೆಗಾರಿಕೆಯನ್ನು ನೀಡುತ್ತಿದ್ದ. ಈ ಗುಣಗಳಿಂದಲೇ ಈತ ಎಲ್ಲರಿಗೂ ಅಚ್ಚುಮೆಚ್ಚಿನ ಗೆಳೆಯನಾಗಿ, ಎಲ್ಲರ ನಾಯಕನಾಗಿದ್ದ.

ಪ್ರಾರಂಭದಲ್ಲಿ ಗಾಂಧೀಜಿಯವರ ಅಸಹಕಾರ ಚಳುವಳಿಯಲ್ಲಿ ದುಡಿದರೂ ಕಾಂಗ್ರೆಸ್ಸಿಗರ ಸಂಧಾನ ಧೋರಣೆ ಹಾಗೂ ತತ್ವಕ್ಕೆ ಬೇಸತ್ತು ಆ ಪಂಥ ಬಿಟ್ಟು ಕ್ರಾಂತಿಕಾರಿ ಪಂಥಕ್ಕೆ ಕಾಲಿಟ್ಟ. ಲಾಹೋರನ್ನು ಬಿಟ್ಟು ದೆಹಲಿಗೆ ಬಂದು 'ಕೀರ್ತಿ ಕಿಸಾನ್' ಪಕ್ಷದೊಡನೆ ಸಂಪರ್ಕ ಪಡೆದ. ಇದರ ಸಂಘಟಕರಾಗಿದ್ದ ಸೋಹನ್‌ಸಿಂಗ್ ಜೋಷಿ-ಯವರು ಹಲವು ದಶಕಗಳ ಕಾಲ ಭಾರತ ಕಮ್ಯುನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ದುಡಿದು ೧೯೮೨ರಲ್ಲಿ ತೀರಿಕೊಂಡರು-ನಡೆಸುತ್ತಿದ್ದ 'ಕೀರ್ತಿ' ಪತ್ರಿಕೆಗೆ ಭಗತ್‌ಸಿಂಗ್ ಹಲವಾರು ಲೇಖನಗಳನ್ನು ಬರೆದ. ಉತ್ತರ ಪ್ರದೇಶದಲ್ಲಿ ಸಂಚರಿಸಿ ಕ್ರಾಂತಿಕಾರಿಗಳ ಸಂಪರ್ಕ ಪಡೆದುಕೊಂಡ. ಅದೇ ವೇಳೆಗೆ "ಹಿಂದೂಸ್ತಾನ್ ಗಣತಂತ್ರವಾದಿ ಸಂಘಟನೆ"ಯು ಕೆಲವು ಮಹೋದ್ದೇಶಯುಕ್ತ ಲಕ್ಷ್ಯಗಳ ಹೊಂದಿದ್ದು ರೈಲೊಂದನ್ನು ಕಾಕೋರಿ

ನಿಲ್ದಾಣದ ಒಂದು ಮೈಲಿ ಹಿಂದೆ ತಡೆದುನಿಲ್ಲಿಸಿ, ಸರ್ಕಾರಿ ಖಜಾನೆಗೆ ರವಾನಿಸಲಾಗುತ್ತಿದ್ದ ಸುಮಾರು ೪.೭೦೦ರೂ.ಗಳಿದ್ದ ತಿಜೋರಿಯನ್ನು ಅಪಹರಿಸಿದರು. ಅವರಲ್ಲಿ ಕೆಲವರು ಪೋಲೀಸರ ಬಂಧಿಗಳಾದರು. ಅವರನ್ನು ಬಿಡುಗಡೆಗೊಳಿಸಲು ಈತ ಕಾನ್ಪುರಕ್ಕೆ ಹೋಗಿ ಪ್ರಯತ್ನಿಸಿ ವಿಫಲನಾಗಿ ಹಿಂದಿರುಗಿದ. ಆದರೆ ಹೇಗೆ ಬಿಡಿಸಬೇಕೆಂಬ ಯೋಜನೆಯನ್ನು ತಯಾರಿಸಿದ.

ಹೀಗೆ ಪ್ರಾರಂಭದಲ್ಲಿ ಸಂಘಟನೆಗಳೊಂದಿಗೆ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಅನೇಕ ಯುವಜನರನ್ನೂ ವಿದ್ಯಾರ್ಥಿಗಳನ್ನೂ ತನ್ನ ಕಡೆ ಸೆಳೆದುಕೊಂಡು. ಲಾಹೋರಿನಲ್ಲಿ ಎಲ್ಲರೊಂದಿಗೆ ಚರ್ಚಿಸಿ ೧೯೨೬ರ ಮಾರ್ಚಿಯಲ್ಲಿ 'ನೌಜವಾನ್ ಭಾರತ್ ಸಭಾ' ಎಂಬ ಸಂಘಟನೆಯನ್ನು ಪ್ರಪ್ರಥಮವಾಗಿ ಸಂಘಟಿಸಿದ. ಆ ಸಂಘಟನೆಗೆ ರಾಮ್ ಕಿಶನ್‌ರನ್ನು ಅಧ್ಯಕ್ಷರನ್ನಾಗಿ ಮಾಡಿ ತಾನು ಕಾರ್ಯದರ್ಶಿಯಾದ.

"ನೌಜವಾನ್ ಭಾರತ್ ಸಭಾ"ದಲ್ಲಿದ್ದ ಸದಸ್ಯರೆಲ್ಲರೂ ಸಮಾನ ಮನಸ್ಕರೂ ರಾಜಕೀಯ ಅಭಿಪ್ರಾಯದಲ್ಲೂ ಸಹಮತ ಉಳ್ಳವರಾಗಿದ್ದರು. ಈ ಸಭಾದಲ್ಲಿ ಪ್ರಾರಂಭದಲ್ಲಿ ನೈತಿಕ, ಸಾಹಿತ್ಯಿಕ ಮತ್ತು ಸಾಮಾಜಿಕ ಚಿಂತನೆಗೆ ಮಾತ್ರ ಆದ್ಯತೆ ನೀಡಲಾಗಿತ್ತು.

ಕ್ರಮೇಣ ರಾಷ್ಟ್ರೀಯ ಪ್ರಜ್ಞೆ, ಸ್ವದೇಶೀ ವಸ್ತುಗಳ ಮೋಹ, ಜಾತಿ, ಧರ್ಮರಹಿತ ಸರಳ ಬದುಕು, ದೈಹಿಕ ಮತ್ತು ಮಾನಸಿಕ ಶಕ್ತಿ ಬೆಳೆಸಿಕೊಳ್ಳುವುದನ್ನು ಇದರಲ್ಲಿ ಹೇಳಿಕೊಡಲಾಯಿತು. 'ನೌಜವಾನ್ ಭಾರತ್ ಸಭಾ' ಒಪ್ಪಿಕೊಂಡ ರಾಜಕೀಯ ಉದ್ದೇಶಗಳಾದರೋ ತುಂಬಾ ಭಿನ್ನವೂ ನೂತನವೂ ಆಗಿದ್ದವು.

೧) ಇಡೀ ಭಾರತದ ಶ್ರಮಿಕರು ಮತ್ತು ರೈತರನ್ನು ಒಳಗೊಂಡಂತೆ ಸಂಪೂರ್ಣವಾಗಿ ಸ್ವತಂತ್ರವಾದ ಗಣರಾಜ್ಯವೊಂದನ್ನು ಸ್ಥಾಪಿಸುವುದು;

೨) ಐಕ್ಯದಿಂದಿರುವ ಭಾರತ ರಾಷ್ಟ್ರವನ್ನು ಕಟ್ಟಲು ಅಗತ್ಯವಾದ ದೇಶಪ್ರೇಮವನ್ನು ಯುವ ಜನಾಂಗದಲ್ಲಿ ಪ್ರಚಾರ ಮಾಡುವುದು ಮತ್ತು ಮೂಡಿಸುವುದು:

3) ಸಂಪೂರ್ಣವಾಗಿ ಸ್ವತಂತ್ರವಾದ ಶ್ರಮಿಕರ ಮತ್ತು ರೈತರ ಗಣರಾಜ್ಯವನ್ನು ಸ್ಥಾಪಿಸುವ ಗುರಿಯತ್ತ ನಮ್ಮನ್ನು ಕೊಂಡೊಯ್ಯುವಂತಹ ಆರ್ಥಿಕ ಔದ್ಯಮಿಕ ಮತ್ತು ಸಾಮಾಜಿಕ ಚಳುವಳಿಗೆ-ಅವು ಧಾರ್ಮಿಕ ಭಾವನೆಗಳಿಂದ ಪ್ರೇರಿತವಾಗಿಲ್ಲದಿದ್ದಲ್ಲಿ-ಸಹಾನುಭೂತಿ ತೋರುವುದು ಮತ್ತು ಬೆಂಬಲ ನೀಡುವುದು;

೪) ಕಾರ್ಮಿಕರನ್ನು ಮತ್ತು ರೈತರನ್ನು ಸಂಘಟಿಸುವುದು.

ಇಂಥ ವೈಜ್ಞಾನಿಕ ಮತ್ತು ವೈಚಾರಿಕ ನೆಲಗಟ್ಟಿನ ಮೇಲೆ ಸಮಾಜವಾದವನ್ನು ಕಟ್ಟುವ ಕನಸು ಕಂಡಿದ್ದವನು ಭಗತ್‌ಸಿಂಗ್. ಇಂಥ ಸಿದ್ಧಾಂತ ಎಲ್ಲ ಯುವಕರನ್ನು ಸೆಳೆದಿದ್ದರಿಂದಲೂ ಅದೇ ವೇಳೆಗೆ ರಷ್ಯಾದಲ್ಲಿ ಯಶಸ್ವಿಯಾಗಿ ಜರುಗಿದ್ದ ಸಮಾಜವಾದಿ ಕ್ರಾಂತಿಯ ಗಾಳಿ ಭಾರತದಲ್ಲಿ ಬೀಸಿದ್ದರಿಂದಲೂ ಯುವಕರಲ್ಲಿ ಉತ್ಸಾಹ ಹೆಚ್ಚಾಯಿತು. ಅವರಿಂದ ಈ ಸಭಾದ ಘಟಕಗಳು ಅಮೃತಸರ, ಜಾಲಂಧರ್, ಲೂಧಿಯಾನ, ಮಾಂಟುಗೋಮರಿ, ಮುಲ್ತಾನ್, ಸರ್ಗೋಧಾ, ಸಿಯಾಲ್‌ಕೋಟ್, ಕರಾಚಿ ಮತ್ತು ಪೇಶಾವಾರ್‌ಗಳಲ್ಲಿ ಅಸ್ತಿತ್ವಕ್ಕೆ ಬಂದವು.

ಈ 'ನೌ ಜವಾನ್ ಭಾರತ್ ಸಭಾ' ತುಂಬಾ ಕ್ರಿಯಾಶೀಲವಾಗಿದ್ದುಕೊಂಡು "ಕೀರ್ತಿ ಕಿಸಾನ್" ಪಕ್ಷದೊಡನೆ ನಿಕಟ ಸ್ನೇಹಹೊಂದಿ, ಉಪಯುಕ್ತವಾದ ಅನೇಕ ಕಿರುಹೊತ್ತಿಗೆಗಳನ್ನು ಪ್ರಕಟಿಸಿತು. ಹರದಯಾಳರ "ರಾಷ್ಟ್ರಗಳ ಸಂಪತ್ತು", ಅಂಗೆಸ್ ಸ್ಮೆಡ್ಲೆಯವರ "ಭಾರತ ಮತ್ತು ಮುಂದಿನ ಯುದ್ಧ", ಛಬೀಲ್‌ದಾಸ್‌ರವರ "ಭಾರತ ಮಾತೆಯ ದರ್ಶನ" ಪ್ರಮುಖವಾದವು.

ಸಭಾದ ಈ ಚಟುವಟಿಕೆ ಗಮನಿಸಿದ ಬ್ರಿಟೀಷ್ ಸರ್ಕಾರ ೧೯೩೦ ರಲ್ಲಿ ಒಂದು ಆಜ್ಞೆ ಹೊರಡಿಸಿ, ಸಭಾ ಒಂದು ಕಾನೂನು ಬಾಹಿರ ಸಂಸ್ಥೆ ಎಂದು ಘೋಷಿಸಿತು.

ಕಾಕೋರಿ ಲೂಟಿಯ ಖಟ್ಲೆಯಲ್ಲಿ ಅಪಾದಿತರಾಗಿದ್ದವರನ್ನು ಬ್ರಿಟೀಷ್ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿದಾಗ, ಸಭಾದ ಆಶ್ರಯ ದಲ್ಲಿ ಭಗತ್‌ಸಿಂಗ್ ತನ್ನ ವಿವೇಚನಾಪೂರ್ಣ ಸಹೃದಯತೆಗೆ ಸಾಕ್ಷಿಯಾಗಿ ಹುತಾತ್ಮರ ದಿನಾಚರಣೆ ಆಚರಿಸಿ ಪ್ರಮುಖ ಭಾಷಣ ಮಾಡಿದ.

ಸಭಾದ ಆಶ್ರಯದಲ್ಲಿ ಅನೇಕ ಬಾರಿ ಹಿಂದೂ, ಮುಸಲ್ಮಾನ್ ಮತ್ತು ಅಸ್ಪೃಶ್ಯರ ಸಾಮೂಹಿಕ ಭೋಜನ ಕೂಟಗಳನ್ನು ಏರ್ಪಡಿಸಿ ಜಾತಿ, ಮತ, ಪಂಥಗಳ ಗೋಡೆ ಕೆಡವಿ, ಮಾನವೀಯತೆಗೆ ಆದ್ಯತೆ ನೀಡಿ ಭಾವೈಕ್ಯತೆಯನ್ನು ಅನುಷ್ಠಾನಗೊಳಿಸಿದ ಕೀರ್ತಿಯೂ ಈತನದೆ. ಇದರ ಜೊತೆಗೆ ನಮ್ಮಲ್ಲಿ ಅಸ್ತಿತ್ವದಲ್ಲಿದ್ದ– ಈಗಲೂ ಪಾರ್ಥೇನಿಯಂ ಕಳೆಯಂತೆ ಹೆಚ್ಚುತ್ತಿರುವ–ಧರ್ಮಗಳ ಗೊಡ್ಡು ಸಂಪ್ರದಾಯ, ಆಚಾರ, ವಿಚಾರಗಳ ಪಿಡುಗಿನ ದುರಂತ ಎಲ್ಲರಿಗೂ ತಲುಪಿ ಅವು ಗಳಿಂದ ಮುಕ್ತರಾಗದಿದ್ದರೆ ಭಾರತ ಅವನತಿ ಹೊಂದುತ್ತದೆ ಎಂದು ಸಾರುವ ಅನೇಕ ಕಿರು ಹೊತ್ತಿಗೆಗಳನ್ನು ಸಂಬಂಧಿಸಿದ ಜಾತಿಯ ಜನ ರಿಂದಲೇ ಬರೆಸಿ ಪ್ರಕಟಿಸಿದ್ದೂ ಆಗಿನ ಕಾಲಕ್ಕೆ ಒಂದು ಮಹಾನ್ ಸಾಧನೆ.

ಭಗತ್‌ಸಿಂಗ್ ನಿರಂತರ ಓಡಾಟದಲ್ಲಿ ತೊಡಗಿ, ಯುವಕರನ್ನು ಹೆಚ್ಚು ಹೆಚ್ಚು ಜಾಗೃತಗೊಳಿಸಿದಂತೆಲ್ಲ ತನ್ನ ಆಲೋಚನೆಯಲ್ಲಿ ಬದಲಾವಣೆ ಮಾಡಿಕೊಂಡ. ಬ್ರಿಟೀಷ್ ವಸಾಹತುಶಾಹಿಯಿಂದ ಭಾರತವನ್ನು ಬಿಡುಗಡೆಗೊಳಿಸಿ ರಾಜಕೀಯ ಸ್ವಾತಂತ್ರ್ಯ ತಂದುಕೊಡು ವುದು ಕ್ರಾಂತಿಕಾರಿ ಹೋರಾಟದ ಸಾಫಲ್ಯವಲ್ಲವೆಂದು ಮನಗಂಡು, ಸಮಾಜವಾದಿ ರಾಷ್ಟ್ರ ರಚಿಸಬೇಕೆಂಬ ದಿಟ್ಟ ನಿಲುವು ತಾಳಿದ.

೧೯೨೮ರಲ್ಲಿ ಬೇರೆ ಬೇರೆ ಪ್ರಾಂತ್ಯದ ಕ್ರಾಂತಿಕಾರಿಗಳೆಲ್ಲ ದೆಹಲಿಯಲ್ಲಿ ಗುಪ್ತ ಸಭೆ ಸೇರಿದರು. ಆಗ ಭಗತ್‌ಸಿಂಗ್ ಭವಿಷ್ಯದ ಭಾರತ ಹೇಗಿರಬೇಕೆಂದು ಸಭೆಯ ಮುಂದಿಟ್ಟ. ನಂತರ ಚಂದ್ರಶೇಖರ್ ಆಜಾದ್ ಮಾತನಾಡಿ, "ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಬದಲಾವಣೆಯುಂಟಾಗಿದೆ. ಇಡೀ ರಾಷ್ಟ್ರದಲ್ಲಿ ಬಿಗಡಾಯಿಸಿದ ವಾತಾವರಣವಿದೆ. ಏನಾದರೊಂದು ಕೃತ್ಯದಲ್ಲಿ ತೊಡಗಲು ಸಮಯ ಪಕ್ವವಾಗಿದೆ. ಕಾಂಗ್ರೆಸ್ ಪಕ್ಷದ ನೀತಿಯಿಂದ ರಾಷ್ಟ್ರವು ಸ್ವತಂತ್ರ್ಯವಾಗಲಾರದು. ದಿನ ಬೆಳಗಾದರೆ ಒಂದಲ್ಲ ಒಂದು ಒಪ್ಪಂದ ಮಾಡಿಕೊಳ್ಳುವುದೇ ಅವರ ಪರಿಪಾಟವಾಗಿದೆ. ತೋಳು ಮಡಿಸಿ ಸಮರಕ್ಕಿಳಿಯಲು ಯುವಕರಿಂದು ಸನ್ನದ್ಧರಾಗಬೇಕು. ನಮ್ಮ ಸಂಘಟನೆಯನ್ನು ಈ ದೃಷ್ಟಿಯಿಂದ ಮಿಲಿಟರಿಯ ಪದ್ಧತಿಯಲ್ಲಿ ಬೆಳೆಸಬೇಕಾಗುತ್ತದೆ" ಎಂದು ವಿವರಿಸಿದ.

ಹೀಗೆ ಭಗತ್‌ಸಿಂಗ್ ತಾನು ತನ್ನ ಅನಿಸಿಕೆಗಳನ್ನು ಸಂಗಾತಿಗಳೊಂದಿಗೆ ತೆರೆದಿಟ್ಟು, ಅವರ ಅನಿಸಿಕೆಗಳಿಗೂ ಅವಕಾಶವೀಯುತ್ತ, ಎಲ್ಲರಿಗೂ ಸರ್ವ ಸಮ್ಮತವಾದ ತತ್ವವನ್ನು ರೂಪಿಸುವ ನಾಯಕ ಆಗಿದ್ದ.

ಆ ಸಭೆಯಲ್ಲಿ, ರಷ್ಯನ್ ಕ್ರಾಂತಿ ಮತ್ತು ಮಾರ್ಕ್ಸ್‌ವಾದಗಳಿಗೆ ಮಾರು ಹೋಗಿದ್ದ ಈತ ಅವರೆಗೂ ಕ್ರಾಂತಿಕಾರಿ ಗುಪ್ತ ಸಂಘಟನೆಯಾದ 'ಹಿಂದೂಸ್ಥಾನ್ ರಿಪಬ್ಲಿಕ್ ಅಸೋಸಿಯೇಷನ್'ನ ಹೆಸರನ್ನು "ಹಿಂದೂಸ್ಥಾನ್ ಸೋಸಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್" ಎಂದು ಬದಲಾಯಿಸಬೇಕೆಂದು ವಾದಿಸಿ ಜಯಗಳಿಸಿದ. ಅದರಲ್ಲಿಯೇ ಸಶಸ್ತ್ರ ಪಡೆಯಾಗಿ ಕೆಲಸ ಮಾಡಲು "ಹಿಂದೂಸ್ಥಾನ್ ಸಮಾಜವಾದಿ ಗಣತಂತ್ರ ಸೈನ್ಯ"ವೆಂಬ ಇನ್ನೊಂದು ಸಂಘಟನೆಯನ್ನು ರೂಪಿಸಿ, ಚಂದ್ರಶೇಖರ್ ಆಜಾದ್‌ನನ್ನು ಸೈನ್ಯದ ದಂಡನಾಯಕನನ್ನಾಗಿ ನೇಮಿಸಲಾಯಿತು. ವಿವಿಧ ಪ್ರಾಂತ್ಯಗಳಲ್ಲಿ ಸಂಘಟನೆಯ ಕ್ರಿಯೆ ತೀವ್ರವಾಗಲು ಉಪಸಮಿತಿ ರಚಿಸಿ ಅದಕ್ಕೆ ಬಿಜೋಯ್ ಕುಮಾರ್ ಸಿನ್ಹ

ನೊಂದಿಗೆ ತಾನೂ ಸೇರಿಕೊಂಡು, ಇಡೀ ಸಂಘಟನೆಯ ಸದಸ್ಯರೆಲ್ಲರೂ ತಮ್ಮ ತಮ್ಮ ಜವಾಬ್ದಾರಿಯುತ ಕಾರ್ಯದಲ್ಲಿ ಮಗ್ನರಾಗಲು ಅವಕಾಶ ಮಾಡಿಕೊಟ್ಟು, ಅಧಿಕಾರ ವಿಕೇಂದ್ರೀಕರಣಕ್ಕೆ ಮೇಲ್ಪಂಕ್ತಿ ಹಾಕಿ ಕೊಟ್ಟ.

"ಹಿಂದೂಸ್ಥಾನ್ ಸೋಸಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೆಷನ್ನಿ"ನ ಕಾರ್ಯಕರ್ತರು ಉತ್ಸುಕರಾಗಿ ಹಲವು ಹನ್ನೊಂದು ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡರು. ನೂತನ ಕಾರ್ಯಕರ್ತರನ್ನು ರೂಪಿಸುವುದು, ಹಣ ಸಂಗ್ರಹಿಸುವುದು, ಕಾರ್ಯಕರ್ತರ ವಾಸಕ್ಕೆ ಗೂಢವಾದ ಸ್ಥಳ ವ್ಯವಸ್ಥೆ ಮಾಡುವುದು, ಪ್ರಚಾರ ಮಾಡುವುದು ಮುಖ್ಯವಾಗಿದ್ದವು.

ಆ ವೇಳೆಯಲ್ಲಿ ಭಾರತವು ಸ್ವರಾಜ್ಯವನ್ನು ಗಳಿಸಲು ಅರ್ಹವಾಗಿದೆಯೆ ? ಆಗಿದ್ದರೆ ಎಷ್ಟರಮಟ್ಟಿಗೆ ಆಗಿದೆ ? ಎಂಬುದರ ತನಿಖೆ ಹೆಸರಿನಲ್ಲಿ ಸ್ವಾತಂತ್ರ್ಯ ಹೋರಾಟವನ್ನು ನಿಷ್ಕ್ರಿಯೆಗೊಳಿಸಿ, ರಾಷ್ಟ್ರೀಯ ವಾದವನ್ನು ನಿರ್ನಾಮಗೊಳಿಸುವ ಸಂಚಿನಿಂದ, ಬ್ರಿಟೀಷ್ ಸರ್ಕಾರ 'ಸೈಮನ್ ಕಮಿಷನ್'ರಚಿಸಿತು. ಈ ಕಮಿಷನ್ ೧೯೨೮ ಅಕ್ಟೋಬರ್ ೩೦ರಂದು ಲಾಹೋರಿಗೆ ಬರುವುದಿತ್ತು. ಈ ಆಯೋಗಕ್ಕೆ ಬಹಿಷ್ಕಾರ ಹಾಕಬೇಕೆಂದು ಕಾಂಗ್ರೆಸ್ ಕಲ್ಕತ್ತಾ ಅಧಿವೇಶನದಲ್ಲಿ, "ಭಾರತಕ್ಕೆ ಗೌರವಯುತವಾದ ಒಂದೇ ಮಾರ್ಗವೆಂದರೆ ಈ ಆಯೋಗವನ್ನು ಎಲ್ಲಾ ಹಂತಗಳಲ್ಲೂ ಮತ್ತು ಸ್ವರೂಪದಲ್ಲೂ ಬಹಿಷ್ಕರಿಸುವುದು ಮಾತ್ರ" ಎಂದು ನಿರ್ಣಯ ಕೈಗೊಂಡಿತು.

ಇದೇ ನಿಲುವನ್ನು ಹಿಂದೂಸ್ಥಾನ್ ಸೋಸಿಯಲಿಷ್ಟ್ ರಿಪಬ್ಲಿಕನ್ ಅಸೋಸಿಯೇಷನ್ ತಾಳಿ, ಕಾಂಗ್ರೆಸಿಗಿಂತ ಭಿನ್ನವಾದ ಕಾರ್ಯತಂತ್ರ ರೂಪಿಸಿತು. ಸೈಮನ್ ಆಯೋಗ ಪ್ರಯಾಣಿಸುವ ರೈಲಿನ ಮೇಲೆ ಬಾಂಬ್ ದಾಳಿ ನಡೆಸುವ ಯೋಜನೆ ಅವರದ್ದೊಂದು. ಅದಕ್ಕಾಗಿ

ಭಗತ್‌ಸಿಂಗ್ ದೆಹಲಿಯಿಂದ ಲಾಹೋರಿಗೆ ಪೂರಾವೇಶದಲ್ಲಿ ಬಂದು ತಲುಪಿದ.

ಸೈಮನ್ ಆಯೋಗವನ್ನು ಪ್ರತಿಭಟಿಸಲು ಲಾಹೋರಿನ ರೈಲು ನಿಲ್ದಾಣದಲ್ಲಿ ಲಾಲಾಲಜಪತರಾಯ್ ಮತ್ತು ಮದನಮೋಹನ ಮಾಳವೀಯ ನಾಯಕತ್ವದಲ್ಲಿ ಎಲ್ಲಾ ಪಕ್ಷಗಳೂ ಕಲೆತವು. ಕಪ್ಪುಬಾವುಟ ಮತ್ತು ಘೋಷಣೆಗಳ ಅನೇಕ ಫಲಕಗಳೊಂದಿಗೆ ಸೇರಿ, "ಸೈಮನ್ ನೀನು ಹಿಂದಿರುಗು, ನಮಗೆ ಬೇಕು ಸ್ವಾತಂತ್ರ್ಯ" 'ಪರಕೀಯ ಆಳ್ವಿಕೆ ಎಂಬುದೊಂದು ಶಾಪ". "ಜನಹಿತವಿರೋಧಿ ಸರ್ಕಾರವಿರುವವರೆಗೆ ಕ್ಷಾಮ ತಪ್ಪುವುದಿಲ್ಲ"– ಎಂಬ ಫಲಕಗಳೊಂದಿಗೆ ಘೋಷಣೆ ಕೂಗಿದಾಗ, ಭಗತ್‌ಸಿಂಗ್ ತನ್ನ ಗೆಳೆಯರೊಂದಿಗೆ ಮುಂಚೂಣಿಯಲ್ಲಿದ್ದ.

ಜನ ಪೋಲೀಸರ ಕಡೆ ಲೆಕ್ಕಿಸದೆ ಮೈದುಂಬಿದವರಂತೆ "ನಾವು ಭಾರತೀಯರು ಈ ಭಾರತ ನಮ್ಮದು." "ನೀನೆಲ್ಲಿಂದ ಬಂದೆಯೋ ಅಲ್ಲಿಗೆ ಈಗಲೇ ಹೊರಡು ಸೈಮನ್"– ಎಂದು ಹಾಡುತ್ತಾ ಮುನ್ನುಗ್ಗಿದರು. ಆಗ ಪೋಲೀಸ್ ಮುಖ್ಯಾಧಿಕಾರಿ ಎಸ್.ಪಿ. ಸ್ಕಾಟ್‌ನ ಮುಂದಾಳತ್ವದಲ್ಲಿ ಪೋಲೀಸರು ಮೆರವಣಿಗೆಕಾರರ ಮೇಲೆ ಲಾಠಿಯಿಂದ ಚಚ್ಚಿದರು. ಸ್ವತಃ ಸ್ಕಾಟನೇ ಲಾಲಾ ಲಜಪತರಾಯ್ ಅವರ ಮೇಲೆ ಲಾಠಿ ಬೀಸಿದ. ಪರಿಣಾಮವಾಗಿ ಆಸ್ಪತ್ರೆಯಲ್ಲಿ ನೋವನ್ನನುಭವಿಸಿ ನವೆಂಬರ್ ೧೭ರಂದು ಲಾಲಾಜಿ ಇನ್ನಿಲ್ಲವಾದರು.

ವೈದ್ಯರಿಬ್ಬರು "ಅಕ್ಟೋಬರ್ ೩೦ ರಂದು ಲಾಲಾಜಿ ತಿಂದಿದ್ದ ಪೆಟ್ಟುಗಳು ಅವರನ್ನು ಸಾವಿನತ್ತ ಧಾವಿಸುವಂತೆ ಮಾಡಿದ್ದವು" ಎಂದು ಹೇಳಿದರು. ಆದರೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ, "ಆ ಸಂದರ್ಭದಲ್ಲಿ ಬಿದ್ದ ಪೆಟ್ಟುಗಳ ಪರಿಣಾಮವಾಗಿ ಲಾಲಾ ಲಜಪತರಾಯ್ ಗತಿಸಿದ್ದರೆಂಬುದಕ್ಕೆ ಯಾವ ಪುರಾವೆಯೂ ಸಿಕ್ಕಿಲ್ಲ" ಎಂಬ ವಿರೋಧಾಭಾಸದ ಹೇಳಿಕೆ ಹೊರಬಿತ್ತು.

ಈ ಕೃತ್ಯ ಬ್ರಿಟೀಷರು ರಾಷ್ಟ್ರಕ್ಕೆ ಎಸಗಿದ ಹೇಯ ಅಪಮಾನ ವೆಂದು ಭಗತ್‌ಸಿಂಗ್ ಬಗೆದು, ಅದಕ್ಕೆ ತಕ್ಕ ಪ್ರತೀಕಾರ ಕ್ರಮಗಳನ್ನು ಕೈಗೊಳ್ಳಲು ತನ್ನ ಗೆಳೆಯರೊಂದಿಗೆ ನಿರ್ಧರಿಸಿದ. "ರಕ್ತ ಧಾರೆಗೆ ಪ್ರತಿಯಾಗಿ ರಕ್ತಧಾರೆ", "ಒಬ್ಬ ಪಂಜಾಬಿನ ನಾಯಕನ ಕೊಲೆಗೆ ಪ್ರತಿಯಾಗಿ ಹತ್ತು ಮಂದಿ ಬ್ರಿಟೀಷರ ಕೊಲೆಗೆಯ್ಯುತ್ತೇವೆ" ಎಂಬ ಸಂಕಲ್ಪ ಘೋಷಣೆ ಮೊಳಗಿತು. ತತ್ಪರಿಣಾಮವಾಗಿ ೧೯೨೮ರ ಡಿಸೆಂಬರ್ ೧೦ ರಂದು ರಾತ್ರಿ ಸಭೆ ಸೇರಿ ಪ್ರತೀಕಾರದ ಕಾರ್ಯಕ್ರಮ ವೊಂದನ್ನು ರೂಪಿಸಿದರು. ಆ ಸಭೆಯಲ್ಲಿ ಭಗತ್‌ಸಿಂಗ್, ಸುಖದೇವ್, ಜಯಗೋಪಾಲ್, ಕಿಶೋರಿಲಾಲ್ ಮತ್ತು ದುರ್ಗಾದೇವಿಯರಿದ್ದರು. ಸೈಮನ್ ಆಯೋಗದ ಹಿಂದೆ ಬ್ರಿಟೀಷರ ತಳಮಳವನ್ನು, ಅಸಹಾಯ ಕತೆಯನ್ನು ಗುರುತಿಸಿದ ಭಗತ್‌ಸಿಂಗ್, "ಇಡೀ ರಾಷ್ಟ್ರದಲ್ಲಿ ಉತ್ಕಟ ವಾದ ಪರಿಸ್ಥಿತಿ ಇದೆ. ನಮ್ಮ ಪಕ್ಷದ ಬಂಗಾಳದ ಶಾಖೆ ಒಳ್ಳೆಯ ಕೆಲಸ ಮಾಡಿದೆ. ಕೆಲವು ಅಧಿಕಾರಿಗಳನ್ನು ಮುಗಿಸುವುದೇ ಆ ಕೆಲಸ. ಇಂಗ್ಲೀಷ್ ಅಧಿಕಾರಿಗಳು ಭಯಭೀತರಾಗಿ ತಮ್ಮ ಕುಟುಂಬಗಳನ್ನು ಆಗಲೇ ಸ್ವದೇಶಕ್ಕೆ ರವಾನಿಸುತ್ತಿದ್ದಾರೆ. ಕೆಲ ಕಾಲಾ ನಂತರ ನಮ್ಮ ಭಾರತ ತಮ್ಮ ಅಧೀನದಲ್ಲಿ ಇರುವುದಿಲ್ಲ ಎಂಬುದನ್ನು ಅವರು ಮನ ಗಾಣುತ್ತಾರೆ. ಕಾಂಗ್ರೆಸ್ ಸದಸ್ಯರ ಹೃದಯಗಳೂ ಸಹ ಲಾಲಾಜಿ ಯವರ ಮೃತ್ಯುವಿನಿಂದ ಕಲಕಿಹೋಗಿವೆ. ಮುಂದಿನ ಕಾಂಗ್ರೆಸ್ ಅಧಿ ವೇಶನದಲ್ಲಿ ಈ ಬಗ್ಗೆ ಕಾರ್ಯಕ್ರಮವೊಂದನ್ನು ಮಂಡಿಸಲು ಜವಾಹರ ಲಾಲ್ ನೆಹರು ಸಿದ್ಧರಾಗುತ್ತಿದ್ದಾರೆಂದು ತಿಳಿದು ಬಂದಿದೆ. ಆದರೆ ಅವರೆಲ್ಲ ಏನಾದರೊಂದು ನಿಶ್ಚಿತ ಕಾರ್ಯಕ್ರಮದಲ್ಲಿ ತೊಡಗುವುದರ ಬಗ್ಗೆ ನನಗೆ ಬಹಳ ಸಂದೇಹವಿದೆ. ಆದರೆ ಯುವಜನರ ರಕ್ತ ಕುದಿ ಯುತ್ತಿದೆ ಎಂಬುದಂತೂ ಸಂಪೂರ್ಣವಾಗಿ ಸತ್ಯ" ಎಂದು ಹೇಳಿ ಸ್ಕಾಟನನ್ನು ಕೊಲ್ಲುವುದಕ್ಕಾಗಿ ಆತನ ಚಲನವಲನದ ವರದಿ ನೀಡಲು ಜಯಗೋಪಾಲನಿಗೆ ವಹಿಸಿದರು.

ಮತ್ತೊಮ್ಮೆ ಡಿಸೆಂಬರ್ ೧೫ರ ಮಧ್ಯಾಹ್ನ ಸಭೆ ಸೇರಿ, "ನಾವು ಕೊಲ್ಲಬೇಕಾಗಿರುವುದು ಒಬ್ಬ ಸ್ಕಾಟನನ್ನಲ್ಲ ಅನೇಕ ಬ್ರಿಟೀಷರನ್ನು. ಗೌವರ್ನರನ್ನು ಸಹ ಜೀವಂತ ಬಿಡಬಾರದು. ಒಬ್ಬ ಭಾರತೀಯನ ಕೊಲೆಗೆ ಹತ್ತು ಜನ ಬ್ರಿಟೀಷರ ಆಹುತಿ ತೆಗೆದುಕೊಂಡರೆ ಶತ್ರುವಿಗೆ ಸ್ವಲ್ಪ ಬುದ್ಧಿ ಬರಬಹುದು" ಎಂದು ತನ್ನ ಕೈಯಿಂದಲೇ ಸ್ಕಾಟನ ಕೊಲೆಯಾಗಬೇಕೆಂದು ಸದಸ್ಯರುಗಳಿಗೆ ಒಪ್ಪಿಸಿ ಅವರ ಪೂರ್ಣ ಸಹಕಾರ ಪಡೆದು ಭಗತ್‌ಸಿಂಗ್ ಯೋಜನೆ ರೂಪಿಸಿದ. ಜಯಗೋಪಾಲ್, ಸ್ಕಾಟನು ತನ್ನ ಕಚೇರಿಯಿಂದ ಹೊರ ಬಂದಾಗ ಕರವಸ್ತ್ರದಿಂದ ಸೂಚನೆ ನೀಡುವುದು. ಆಗ ಭಗತ್‌ಸಿಂಗ್ ಮತ್ತು ರಾಜಗುರು ಗುಂಡು ಹಾರಿಸುವುದು, ಆಜಾದ್ ಚಂದ್ರಶೇಖರ್ ಮತ್ತು ಸುಖದೇವ್ ಹಿಂಬದಿಯಲ್ಲಿದ್ದು ಗೆಳೆಯರಿಗೆ ರಕ್ಷಣೆ ನೀಡಬೇಕು— ಎಂದು ಈ ಕ್ರಾಂತಿಕಾರಿಗಳು ರೂಪಿಸಿಕೊಂಡ ಯೋಜನೆ.

ಜಯಗೋಪಾಲ್ ನೀಡಿದ ವರದಿಯಂತೆ ಸ್ಕಾಟನ ಹತ್ಯೆಗೆ ೧೯೨೮ರ ಡಿಸೆಂಬರ್ ೧೭ ರಂದು ದಿನಾಂಕ ಗೊತ್ತು ಮಾಡಿಕೊಂಡು, ನಿಗದಿಯಾದ ಕಾಲಕ್ಕೆ, ನಿಗದಿಯಾದ ಸ್ಥಳದಲ್ಲಿ ಯೋಜಿಸಿದಂತೆ ಎಲ್ಲರೂ ಸೇರಿದರು. ಸ್ವಲ್ಪ ಸಮಯದ ನಂತರ ಬ್ರಿಟಿಷ್ ಅಧಿಕಾರಿಯೊಬ್ಬ ಕಚೇರಿಯಿಂದ ಹೊರ ಬಂದ. ಜಯಗೋಪಾಲ್ ತನ್ನ ಕರವಸ್ತ್ರದಿಂದ ಸೂಚನೆ ನೀಡಿದ. ಬ್ರಿಟೀಷ್ ಅಧಿಕಾರಿ ಕಚೇರಿಯ ಗೇಟನ್ನು ಮೋಟಾರ್ ಸೈಕಲ್ ಮೇಲೆ ದಾಟಿ ಬರುವಷ್ಟರಲ್ಲಿ ರಾಜಗುರು ಆತನ ಕುತ್ತಿಗೆಗೆ ಗುರಿಇಟ್ಟು ಗುಂಡು ಹಾರಿಸಿ ತತ್ತರಿಸಿ ಕೆಳಗೆ ಬೀಳುವಂತೆ ಮಾಡಿದ. ಹಿಂದೆಯೇ ಭಗತ್‌ಸಿಂಗ್ ೪–೫ ಗುಂಡುಗಳನ್ನು ಹಾರಿಸಿ, ಸತ್ತನೆಂದು ಖಾತ್ರಿಯಾದ ಮೇಲೆ ಎಲ್ಲರೂ ಅಲ್ಲಿಂದ ಪರಾರಿಯಾದರು. ಆದರೆ ಕಚೇರಿಯಿಂದ ಹೊರಬಂದು ಈ ಕ್ರಾಂತಿಕಾರಿಗಳ ಗುಂಡಿಗೆ ಬಲಿಯಾದವನು ಸ್ಕಾಟನಾಗಿರದೆ, ಪೋಲೀಸ್ ಸಹಾಯಕ ಸೂಪ

ರಿಂಟೆಂಡೆಂಟ್ ಜೆ.ಪಿ. ಸಾಂಡರ್ಸ್ ಆಗಿದ್ದ. ಜಯಗೋಪಾಲ ತನ್ನ ಕರ್ತವ್ಯದಲ್ಲಿ ಸ್ವಲ್ಪ ಎಚ್ಚರ ತಪ್ಪಿದ್ದ.

ಭಗತ್‌ಸಿಂಗ್, ರಾಜಗುರು, ಸುಖದೇವ್ ಮತ್ತು ಚಂದ್ರಶೇಖರ್ ಆಜಾದ್ ನ್ಯಾಯಾಲಯದ ರಸ್ತೆಯಲ್ಲಿ ಓಡಿ, ಡಿ.ಎ.ವಿ. ಕಾಲೇಜಿನ ಆವರಣಕ್ಕೆ ನುಗ್ಗಿದರು. ಆ ವೇಳೆಗೆ ಬೆನ್ನಟ್ಟಿದ ಪೋಲಿಸ್ ಪೇದೆ ಚನನ್‌ಸಿಂಗ್‌ನನ್ನು ಬಲಿ ತೆಗೆದುಕೊಂಡು ಇವರು ಹೇಗೋ ಪಾರಾದರು.

ಸ್ಕಾಟನನ್ನು ಕೊಲ್ಲುವ ಕಾರ್ಯದಲ್ಲಿ ಎಡವಿದರೂ ಅವನಷ್ಟೇ ಕ್ರೂರಿಯಾಗಿದ್ದ ಸಾಂಡರ್ಸ್‌ನನ್ನು ಕೊಂದು ಬ್ರಿಟೀಷ್ ಪೊಲೀಸರ ಕೆಂಗಣ್ಣಿಗೆ ಕಾರಣನಾದ ಭಗತ್‌ಸಿಂಗ್ ಲಾಹೋರನ್ನು ಬಿಡಲೇ ಬೇಕಾಗಿತ್ತು. ಆದಕ್ಕಾಗಿ ತಮ್ಮ ಕ್ರಾಂತಿಕಾರಿ ಬಳಗಕ್ಕೆಲ್ಲ 'ಅತ್ತಿಗೆ' ಯಾಗಿದ್ದ ದುರ್ಗಾದೇವಿಯ ಸಹಾಯ ಯಾಚಿಸಿ ವೇಷ ಮರೆಸಿಕೊಂಡು ಕಲ್ಕತ್ತೆ ಸೇರಿದ.

ಹೊಡೆತ ತಿಂದ ಹೆಬ್ಬುಲಿಯಂತಾಗಿದ್ದ ಬ್ರಿಟೀಷ್ ಸರ್ಕಾರ, ಕ್ರಾಂತಿಕಾರಿಗಳ ಬಗ್ಗೆ ನಿಗಾ ಇಟ್ಟು ಚಟುವಟಿಕೆಗಳನ್ನು ಹತ್ತಿಕ್ಕುವ ಕಾರ್ಯ ಮುಂದುವರೆಸಿತು. ಇದರಿಂದ ಯುವಕರ ಸ್ವಾಭಿಮಾನ ಕೆಣಕಿದಂತಾಯಿತು. ಇದೇ ವೇಳೆಗೆ ಕಾಂಗ್ರೆಸ್‌ನ ದ್ವಿಮುಖ ನೀತಿ ಯಿಂದ "ದೆಹಲಿ ಘೋಷಣೆ" ಯುವಕರನ್ನು ತಮ್ಮ ಹೋರಾಟದಲ್ಲಿ ಚುರುಕಾಗುವಂತೆ ಕೆರಳಿಸಿತು. ಆಗ ಯುವಕರು ಉಗ್ರಗಾಮಿ ಚಟು ವಟಿಕೆಯಲ್ಲಿ ತೊಡಗಲು ಪೂರ್ವ ತಯಾರಿ ಮಾಡಿಕೊಂಡರು. ಬಾಂಬು ಗಳ ತಯಾರಿಕೆ ಮತ್ತು ಬಂದೂಕು ಬಳಸುವುದನ್ನು ಕಲಿತರು. ಇದೇ ವೇಳೆಗೆ ಬ್ರಿಟೀಷ್ ಸರ್ಕಾರ ಕಾರ್ಮಿಕ ವಿವಾದ ಕಾಯಿದೆಯನ್ನು ಶಾಸನ ಸಭೆಯಲ್ಲಿ ತರುವ ಪ್ರಯತ್ನ ಮಾಡಿತು. ತತ್ಪರಿಣಾಮವಾಗಿ ಕಾರ್ಮಿಕ ಸಂಘಟನೆಗಳು ಶಾಸನವನ್ನು ಉಗ್ರವಾಗಿ ಪ್ರತಿಭಟಿಸಿದವು. ಆಗ ಸರ್ಕಾರ ರಾಷ್ಟ್ರಾದ್ಯಂತ ೩೨ ಪ್ರಮುಖ ಕಮ್ಯುನಿಷ್ಟ್ ನಾಯಕರನ್ನು ಬಂಧಿಸಿ, ತನ್ನ ದಮನಕಾರಿತನ ಮುಂದುವರೆಸಿತು. ಇದರ ಹಿನ್ನೆಲೆ

ಯಲ್ಲಿ "ಹಿಂದುಸ್ಥಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್" ಗುಪ್ತಸಭೆ ಆಗ್ರಾದಲ್ಲಿ ಸೇರಿತು. ಆ ಸಭೆಯಲ್ಲಿ ಭಗತ್ ಸಿಂಗ್ ಬ್ರಿಟೀಷ್ ಸರ್ಕಾರದ ಸಾರ್ವಜನಿಕ ರಕ್ಷಣಾಕಾಯಿದೆ ಮತ್ತು ಕಾರ್ಮಿಕ ವಿವಾದಗಳ ಕಾಯಿದೆಯಿಂದಾಗುವ ಅನಾಹುತವನ್ನು ವಿವರವಾಗಿ ಮಂಡಿಸಿದ :

"ಬ್ರಿಟೀಷ್ ಸಾಮ್ರಾಜ್ಯಶಾಹಿಯಲ್ಲಿ ನ್ಯಾಯಕ್ಕೆ ಎಳ್ಳಷ್ಟು ಸ್ಥಾನವಿಲ್ಲ. ಭಾರತೀಯರ ಮಾನ ಇಂದಿನಿಂದ ಉಳಿಯಲಾರದು. ಅವರಿಗೆ ನಿಟ್ಟುಸಿರು ಬಿಡಲು ಅವಕಾಶವಾಗದಂತೆ ಬ್ರಿಟೀಷ್ ಸರ್ಕಾರವು ಅವರನ್ನು ಮರ್ದಿಸಿ ಕಿರುಕುಳಕೊಟ್ಟು, ಅವರ ಮೇಲೆ ದಬ್ಬಾಳಿಕೆಯನ್ನು ಹೇರುತ್ತಿದೆ. ಭಾರತೀಯರನ್ನು ಲೂಟಿ ಮಾಡಿ ಕೊಲ್ಲುವ ಈ ಬ್ರಿಟೀಷ್ ಸರ್ಕಾರವು ನಮ್ಮನ್ನು ದಾಸ್ಯಕ್ಕೆ ಗುರಿಪಡಿಸಿದೆ. ನಮ್ಮನ್ನು ಅನಾಯಾಸವಾಗಿ ಬಂಧನದಲ್ಲಿಡಲು ಇನ್ನೂ ಕ್ರೂರವಾದ ಶಾಸನಗಳನ್ನು ಬರುವ ದಿನಗಳಲ್ಲಿ ಬ್ರಿಟೀಷ್ ಸರ್ಕಾರ ನಮ್ಮ ಮೇಲೆ ಹೇರಲಿದೆ. ನಾವು ಉಸಿರೆತ್ತಿದರೆ ನಮ್ಮನ್ನು ಕೊಲ್ಲಲಾಗುತ್ತದೆ.... ಈ ಸನ್ನಿವೇಶದಲ್ಲಿ ನಮ್ಮ ತ್ಯಾಗ ಬಲಿದಾನಗಳಿಂದ ಕೇಂದ್ರ ಶಾಸನಸಭೆಯ ಬ್ರಿಟೀಷ್ ಮತ್ತು ಭಾರತೀಯ ಸದಸ್ಯರ ಕಣ್ತೆರೆಸಬೇಕಾದ್ದು ನಮ್ಮ ಕರ್ತವ್ಯ. ಇದಕ್ಕಾಗಿ ಶಾಸನಸಭೆಯಲ್ಲಿ ಜನವಿರೋಧಿ ಶಾಸನವನ್ನು ಮಂಡಿಸುವಾಗ ನಾವು ಬಾಂಬುಗಳನ್ನು ಸಿಡಿಸಿ "ಇಂಕ್ವಿಲಾಬ್-ಜಿಂದಾಬಾದ್" ಎಂದು ಘೋಷಣೆ ಕೂಗಿ ಭಾರತದ ಯುವಕರು ಎಚ್ಚರದಿಂದ್ದಾರೆ ಎಂಬುದನ್ನು ತೋರಿಸಿಕೊಡಬೇಕು. ಮುಯ್ಯಿಗೆ ಮುಯ್ಯಿ ನಮ್ಮ ಉತ್ತರವಾಗಬೇಕು" ಎಂದು ನಿರ್ಣಯ ಕೈಗೊಂಡರು.

ಸಾಂಡರ್ಸ್‌ನ ಹತ್ಯೆಯಲ್ಲಿ ಭಗತ್‌ಸಿಂಗ್ ಭಾಗಿಯಾಗಿದ್ದಾನೆಂಬುದು ಬ್ರಿಟೀಷ್ ಪೋಲೀಸರಿಗೆ ತಿಳಿದಿರುವುದರಿಂದ ಈ ಕಾರ್ಯವನ್ನು ಭಗತ್‌ಸಿಂಗ್ ಮಾಡುವುದು ಸರಿಯಲ್ಲವೆಂದು ಆಜಾದ್ ಚಂದ್ರಶೇಖರ್ ವಿರೋಧಿಸಿದರೂ ಪಟ್ಟುಬಿಡದೆ ಆ ಗುರುತರ

ಕಾರ್ಯ ನಾನೇ ಮಾಡಬೇಕೆಂದು ಈತ ವಹಿಸಿಕೊಂಡು, ನೆರವಿಗೆ ಬಿ.ಕೆ. ದತ್ತನನ್ನು ಸೇರಿಸಿಕೊಂಡು ೧೯೨೯, ಏಪ್ರಿಲ್ ೮ರಂದು ಕೇಂದ್ರ ಶಾಸನ ಸಭೆಯಲ್ಲಿ ಬ್ರಿಟೀಷ್ ಸರ್ಕಾರ ಕಾರ್ಮಿಕ ವಿವಾದಗಳ ಕಾಯಿದೆಯನ್ನು ಮಂಡಿಸುವಾಗ ಪ್ರೇಕ್ಷಕರ ಗ್ಯಾಲರಿಗೆ ಪ್ರವೇಶವನ್ನು ಕೇಂದ್ರ ಶಾಸನ ಸಭೆಯ ಭಾರತೀಯ ಸದಸ್ಯರೊಬ್ಬರ ಮುಖಾಂತರ ಪಡೆದುಕೊಂಡು ಪೂರುವೇಷವಲ್ಲಿ ಯಾರಿಗೂ ಗುರುತಾಗಿಬಾರದಂತೆ ಗ್ಯಾಲರಿಯಲ್ಲಿ ಕುಳಿತನು.

ಕಾಯಿದೆ ಬಗ್ಗೆ ಚರ್ಚೆ ಪ್ರಾರಂಭವಾಯಿತು. ಒಬ್ಬ ಸದಸ್ಯ ಎದ್ದು "ನಾನು ಮತ್ತು ನನ್ನಂತೆ ಇತರ ಅನೇಕ ಸದಸ್ಯರು ಈ ಕಾಯಿದೆಯನ್ನು (ಅಂದರೆ, ಕಾರ್ಮಿಕ ವಿವಾದಗಳ ಕಾಯಿದೆಯನ್ನು) ಸರ್ವಥಾ ಸಮರ್ಥಿಸುವವರಾಗಿದ್ದೇವೆ. ಇದನ್ನು ಅಂಗೀಕರಿಸಬೇಕಾದ್ದು ಈ ಸಭೆಯ ಜರೂರು ಕರ್ತವ್ಯ. ಏಕೆಂದರೆ ಭಾರತದ ಅನೇಕ ಅನಕ್ಷರಸ್ಥ ಯುವಕರು ಇಂದು ರಷ್ಯನ್ನರಿಂದಾಗಿ ದುರ್ಮಾರ್ಗಕ್ಕೆ ಇಳಿದಿದ್ದಾರೆ. ಅವರು ಕಮ್ಯುನಿಷ್ಟರಾಗುತ್ತಿದ್ದಾರೆ. ಬ್ರಿಟಿಷರ ವಿರುದ್ಧ ದಂಗೆಯೇಳಲು ಅವರು ಸಜ್ಜಾಗುತ್ತಿದ್ದಾರೆ" ಎಂದು ಏನೇನೋ ಹೇಳಿದ. ಕೊನೆಗೆ ಶಾಸನಸಭೆ ಕಾಯಿದೆಯ ಬಗ್ಗೆ ತೀರ್ಮಾನವನ್ನು ಘೋಷಿಸಿ, ಸಭಾಧ್ಯಕ್ಷರು ರೂಲಿಂಗ್ ನೀಡಬೇಕೆನ್ನುವಷ್ಟರಲ್ಲಿ ಭಗತ್‌ಸಿಂಗ್ ತಾನು ಕುಳಿತಲ್ಲಿಯೇ ಎದ್ದುನಿಂತು ಯಾವ ಸದಸ್ಯರಿಗೂ ಪ್ರಾಣಾಪಾಯವಾಗಬಾರದೆಂಬ ಉದ್ದೇಶದಿಂದ ಬಾಂಬ್‌ನ್ನು ಸಭೆಯತ್ತ ಒಗೆದ. ಆ ಸಭೆಯಲ್ಲಿ ಸಭಾಧ್ಯಕ್ಷ ವಿಠಲಭಾಯಿ ಪಟೇಲ್ ಮತ್ತು ಮೋತಿಲಾಲ್‌ನೆಹರು ಪರಸ್ಪರ ಹತ್ತಿರದಲ್ಲಿಇದ್ದರು. ಇಡೀ ಸಭೆ ಕಂಪಿಸಿತು. ಭಗತ್‌ಸಿಂಗ್ ಮತ್ತೊಂದು ಬಾಂಬ್‌ಒಗೆದ. ಇಡೀ ಸಭೆ ದಿಗ್ಭ್ರಮೆಗೊಂಡಿತು. ಸದಸ್ಯರು, ಬಾತ್ಮೀದಾರರು, ಪ್ರೇಕ್ಷಕರು ಪ್ರಾಣಕ್ಕೆ ಹೆದರಿ ತಲೆತಪ್ಪಿಸಿಕೊಳ್ಳಲು ತಾರಾಡಿದರು. ಆದರೆ ನಿಂತಲ್ಲಿಯೇ ನಿಂತ ಭಗತ್ ಸಿಂಗ್ ಮತ್ತು ಬಿ. ಕೆ. ದತ್ತ "ಇಂಕ್ವಿಲಾಬ್–ಜಿಂದಾಬಾದ್", "ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಧಿಕ್ಕಾರ" ಕೂಗುತ್ತಾ ಕರಪತ್ರಗಳನ್ನು ತೂರಿದರು.

ತಕ್ಷಣ ಬ್ರಿಟಿಷ್ ಸರ್ಕಾರ ಇಡೀ ಕರಪತ್ರಗಳನ್ನು ನಿಷೇಧಿಸಿ, ಕಸಿದು ಕೊಂಡಿತು. ಆಗ ಈ ಕ್ರಾಂತಿಕಾರಿಗಳಿಬ್ಬರೂ ಕೂಡ ತಪ್ಪಿಸಿಕೊಳ್ಳದೆ ಘೋಷಣೆ ಕೂಗುತ್ತಾ, ನಗುಮುಖದಿಂದ ತಾವೇ ಪೋಲೀಸರ ಬಂಧಿ ಯಾದರು.

ಬ್ರಿಟಿಷ್ ಸರ್ಕಾರ ಮುಟ್ಟುಗೋಲು ಹಾಕಿಕೊಂಡು, ನಿಷೇಧಿಸಿದ್ದ ಕರಪತ್ರವನ್ನು 'ದಿ ಹಿಂದೂಸ್ಥಾನ್ ಟೈಮ್ಸ್' ಹೇಗೂ ಸಂಪಾದಿಸಿ ಅಂದೇ ಮಧ್ಯಾಹ್ನದ ವಿಶೇಷ ಸಂಪುಟದಲ್ಲಿ ಪೂರ್ಣ ಪಾಠವನ್ನು ಹೊರತಂದಿತು. ಆ ಕರಪತ್ರ ಹಿಂದೂಸ್ಥಾನ್ ಸೋಷಿಯಲಿಸ್ಟ್ ಅಸೋಸಿಯೇಷನ್ ಪ್ರಣಾಳಿಕೆಯಂತಿತ್ತು :

"ಕಿವುಡರೊಬ್ಬನಿಗೆ ಕೇಳಿಸುವಂತೆ ಹೇಳಬೇಕಾದರೆ ಗಟ್ಟಿಯಾಗಿ ಕೂಗಿ ಹೇಳಬೇಕಾಗುತ್ತದೆ". ಫ್ರಾನ್ಸಿನ ಅರಾಜಕತಾವಾದಿ ಹುತಾತ್ಮ ವೈಲ್ಯಾಂತ್ ಹೇಳಿದ್ದ ಈ ಅಮರವಾಣಿಯಿಂದ ನಮ್ಮ ಇಂದಿನ ಕೃತ್ಯವನ್ನು ನಾವು ಬಲವಾಗಿ ಸಮರ್ಥಿಸಿಕೊಳ್ಳುತ್ತೇವೆ.

ಮಾಂಟೆಗೋ-ಚೆಲ್ಮ್ಸ್‌ಫರ್ಡ್ ಸುಧಾರಣೆಗಳಿಂದ ಹಿಡಿದು ಇಲ್ಲಿಯ ವರೆಗೆ ಕಳೆದ ಹತ್ತು ವರ್ಷಗಳಲ್ಲಿ ಬಂದಿರುವ ಸುಧಾರಣೆಗಳು ಹೇಗೆ ಕಾರ್ಯಗತವಾಗುತ್ತಿವೆಯೆಂಬುದರ ಅಪಮಾನಕರ ಇತಿಹಾಸವನ್ನು ನಾವಿಲ್ಲಿ ಪುನರಾವರ್ತನೆ ಮಾಡಲಿಚ್ಛಿಸುವುದಿಲ್ಲ. ಈ ಶಾಸನ ಸಭೆಯು ಭಾರತರಾಷ್ಟ್ರದತ್ತ ಈ ವರ್ಷಗಳಲ್ಲಿ ಎಂತೆಂತಹ ನಿಂದಕಾಸ್ತ್ರಗಳನ್ನು ಎಸೆದಿದೆಯೆಂಬುದನ್ನೂ ನಾವಿಲ್ಲಿ ಪ್ರಸ್ತಾಪಿಸುವುದಿಲ್ಲ. ಈ ಸಭೆಯನ್ನು ಭಾರತದ ಪಾರ್ಲಿಮೆಂಟ್ ಎಂದು ಕರೆಯುವುದೇ ಒಂದು ನಾಚಿಕೆಗೇಡಿನ ಪ್ರಸಂಗ. ನಾವಿಲ್ಲಿ ಹೇಳಬಯಸುವುದಿಷ್ಟೆ : ಸೈಮನ್ ಆಯೋಗದಿಂದ ಕೆಲವರು ಇನ್ನಷ್ಟು ರೊಟ್ಟಿಯ ತುಣುಕುಗಳ ಸ್ವರೂಪದ ಸುಧಾರಣೆಗಳನ್ನು ಅಪೇಕ್ಷಿಸುತ್ತಿದ್ದಾರೆ ಮತ್ತು ನಿರೀಕ್ಷಿಸಲಾಗುತ್ತಿರುವ ಎಲುಬಿನ ತುಂಡುಗಳನ್ನು ಹೇಗೆ ಹಂಚಿಕೊಳ್ಳಬೇಕೆಂದು ಜಗಳ ಮಾಡಿಕೊಳ್ಳುತ್ತಿದ್ದಾರೆ. ಹೀಗಿರುವಾಗ ಸರ್ಕಾರವು ಹೊಸ ದಮನಕಾರಿ

ಕ್ರಮಗಳನ್ನು ನಮ್ಮ ಮೇಲೆ ಹೇರುತ್ತಿದೆ. ಸಾರ್ವಜನಿಕ ರಕ್ಷಣಾ ಕಾಯಿದೆ ಮತ್ತು ಕಾರ್ಮಿಕ ವಿವಾದಗಳ ಕಾಯಿದೆಗಳು ಅಂತಹವು. ಮುಂದಿನ ಅಧಿವೇಶನದಲ್ಲಿ ಪತ್ರಿಕಾ ಸ್ವಾತಂತ್ರ್ಯ ಹರಣದ ಕಾಯಿದೆಯನ್ನು ಮಂಡಿಸಲಾಗುತ್ತದೆ. ಕಾರ್ಮಿಕ ನಾಯಕರ ದಸ್ತಗಿರಿಯ ಅವಿವೇಕತನವನ್ನೂ ನಾವು ನೋಡಿದ್ದೇವೆ. ಈ ನಾಯಕರಾದರೋ ಬಹಿರಂಗವಾಗಿಯೇ ಕೆಲಸ ಮಾಡುತ್ತಿದ್ದಂತಹವರು. ಗಾಳಿ ಎತ್ತ ಕಡೆ ಬೀಸುತ್ತಿದೆಯೆಂಬುದು ಇವೆಲ್ಲದರಿಂದಲೂ ಸೂಚಿತವಾಗುತ್ತಿದೆ.

ಇಂತಹ ಉದ್ವೇಗಕಾರಿ ಸಂದರ್ಭದಲ್ಲಿ ಹಿಂದೂಸ್ತಾನ್ ಸಮಾಜವಾದಿ ಗಣತಂತ್ರ ಸಂಘಟನೆಯು ತನ್ನ ಹೊಣೆಯನ್ನು ಜವಾಬ್ದಾರಿಯುತವಾಗಿ ಮನಗಂಡು ಈ ಕೃತ್ಯವನ್ನೆಸಗಲು ತನ್ನ ಸೈನ್ಯಕ್ಕೆ ಆದೇಶವಿತ್ತಿದೆ. ಅಪಮಾನಕರ ಪ್ರಹಸನಗಳು ಇನ್ನಾದರೂ ಕೊನೆಗೊಳ್ಳಲಿ ಎಂಬುದು ಇದರ ಹಿಂದಿನ ಆಶಯ. ಪರದೇಶಿ ಅಧಿಕಾರದ ಗುಂಗಿನಲ್ಲಿರುವ ಶೋಷಕರು ತಮ್ಮ ಮನಬಂದಂತೆ ನಡೆದುಕೊಳ್ಳಲಿ. ಆದರೆ ಹೀಗೆ ಮಾಡುವ ಅವರನ್ನು ಬೆತ್ತಲೆಯಾಗಿಸಿ ಸಾರ್ವಜನಿಕರ ಕಣ್ಣೆದುರು ನಿಲ್ಲಿಸಬೇಕಾದ್ದು ಅಗತ್ಯವಾಗಿದೆ.

ಜನರ ಪ್ರತಿನಿಧಿಗಳು ತಮ್ಮ ತಮ್ಮ ಚುನಾವಣಾ ಕ್ಷೇತ್ರಗಳಿಗೆ ಹಿಂದಿರುಗಿ, ಬರಲಿರುವ ಕ್ರಾಂತಿಗೆ ಜನರನ್ನು ಸನ್ನದ್ಧಗೊಳಿಸಲಿ; ಮತ್ತು ಸಾರ್ವಜನಿಕ ರಕ್ಷಣಾ ಕಾಯಿದೆ, ಕಾರ್ಮಿಕವಿವಾದಗಳ ಕಾಯಿದೆ, ಲಾಲಾ ಲಜಪತ್ ರಾಯ್ ಅವರ ಹೇಯವಾದ ಹತ್ಯೆ ಇತ್ಯಾದಿಗಳ ವಿರುದ್ಧ ಅಸಹಾಯಕ ಭಾರತ ಜನಸಮುದಾಯದ ಪರವಾಗಿ ಪ್ರತಿಭಟನೆಯನ್ನು ಸಲ್ಲಿಸುತ್ತಿರುವ ಈ ಸಂದರ್ಭದಲ್ಲಿ ನಾವು ಒತ್ತಿ ಒತ್ತಿ ಹೇಳುತ್ತೇವೆ- ಹಲವು ವ್ಯಕ್ತಿಗಳನ್ನು ಸಾಯಿಸುವುದು ಸಾಧ್ಯವಿದೆ, ಆದರೆ ಭಾವನೆಗಳನ್ನು ನೀವು ಸಾಯಿಸಲಾರಿರಿ. ಇದು ಇತಿಹಾಸದ ಪುಟ ಪುಟದಲ್ಲೂ ಅನುರಣಿತವಾಗಿದೆ. ದೊಡ್ಡ ದೊಡ್ಡ ಸಾಮ್ರಾಜ್ಯಗಳು ಉರುಳಿ

ಹೋದವು. ಆದರೆ ಭಾವನೆಗಳು ಚಿರನೂತನವಾಗಿ ಉಳಿದಿವೆ. ಬೂರ್ಬನರು, ತ್ಸಾರರು, ಎಲ್ಲಾ ಮುಳುಗಿಹೋಗಿದ್ದಾರೆ.

ಮಾನವ ಜೀವನಕ್ಕೆ ನಾವು ಅತ್ಯಂತ ಹೆಚ್ಚಿನ ಮಹತ್ವವನ್ನು ನೀಡುತ್ತೇವೆ. ಭವ್ಯ ಭವಿಷ್ಯದ ಕನಸನ್ನು ಕಾಣುತ್ತೇವೆ. ಆ ಭವಿಷ್ಯದಲ್ಲಿ ಮಾನವ ಸಂಪೂರ್ಣ ಶಾಂತಿ ಮತ್ತು ಸ್ವಾತಂತ್ರ್ಯಗಳನ್ನು ಅನುಭೋಗಿಸುತ್ತಾನೆ. ಇಂತಹ ನಂಬಿಕೆಯುಳ್ಳ ನಾವು ಮಾನವನ ರಕ್ತ ಹರಿಸಬೇಕಾಗಿ ಬಂದುದಕ್ಕೆ ವ್ಯಥಿಸುತ್ತೇವೆ. ಆದರೆ ಸರ್ವರಿಗೂ ಸ್ವಾತಂತ್ರ್ಯವನ್ನು ದಕ್ಕಿಸಿಕೊಟ್ಟು ಮಾನವನಿಂದ ಮಾನವನ ಶೋಷಣೆಯು ಅಸಾಧ್ಯವನ್ನಾಗಿಸುವ ಮಹಾನ್ ಕ್ರಾಂತಿಯ ಬಲಿಪೀಠದಲ್ಲಿ ಇದು ಅನಿವಾರ್ಯವಾಗಿದೆ".

"ಕಾಂತ್ರಿ ಚಿರಾಯುವಾಗಲಿ".

ಈ ಕರಪತ್ರವನ್ನು ಹಿಂದೂಸ್ತಾನ್ ಸಮಾಜವಾದಿ ಗಣತಂತ್ರ ಸಂಘಟನೆಯ ಸೈನ್ಯದ ದಂಡನಾಯಕ ಬಲರಾಜ್ ಹೆಸರಿನಲ್ಲಿ ಹೊರಡಿಸಲಾಗಿತ್ತಾದರೂ ಇದಕ್ಕೆ ರೂಪು ಕೊಡುವುದರಲ್ಲಿ ಭಗತ್‌ಸಿಂಗ್ ಶ್ರಮಿಸಿದ್ದನೆಂಬುದು ಗಮನಾರ್ಹವಾದ ಸಂಗತಿ.

ಭಗತ್‌ಸಿಂಗ್ ಮತ್ತು ಬಿ. ಕೆ. ದತ್ತರ ದಸ್ತಗಿರಿಯಾದ ಮೇಲೆ ಹಿಂದೂಸ್ತಾನ್ ಸಮಾಜವಾದಿ ಗಣತಂತ್ರ ಸಂಘಟನೆಯ ದಳದವರ ತೀವ್ರ ಶೋಧನೆಗೆ ಪೊಲೀಸರು ತೊಡಗಿದಾಗ ಅನಿರೀಕ್ಷಿತವಾಗಿ. ಬಾಂಬ್ ತಯಾರಿಕೆಯಲ್ಲಿ ತೊಡಗಿದ್ದ ಸುಖದೇವ್, ಜಯಗೋಪಾಲ್ ಮತ್ತು ಕಿಶೋರಿಲಾಲ್ ಸಿಕ್ಕಿಬಿದ್ದರು.

೧೯೨೯ರ ಮೇ ೭ರಂದು ಭಗತ್‌ಸಿಂಗ್ ಮತ್ತು ಬಿ. ಕೆ. ದತ್ತರ ವಿಚಾರಣೆ ಆರಂಭವಾಯಿತು. ಇವರಿಬ್ಬರನ್ನೂ ಮ್ಯಾಜಿಸ್ಟ್ರೇಟರ ಮುಂದೆ ಕರೆದುಕೊಂಡು ಬಂದಾಗ ಇವರು ಒಕ್ಕೊರಲಿ ಘೋಷಣೆಗಳನ್ನು ಕೂಗಿದರು. "ಕ್ರಾಂತಿ ಚಿರಾಯುವಾಗಲಿ", "ಸಾಮ್ರಾಜ್ಯಶಾಹಿಗೆ

ಧಿಕ್ಕಾರ"- ಈ ಅನಿರೀಕ್ಷಿತ ಘೋಷಣೆಗಳಿಂದ ಮ್ಯಾಜಿಸ್ಟ್ರೇಟ್ ಎಫ್.ಬಿ. ಪೂಲ್ ಕಸಿವಿಸಿಗೊಂಡರು. ಮತ್ತು ಇಬ್ಬರ ಘೋಷಣೆಗಳನ್ನು ದಾಖಲು ಮಾಡಿಕೊಂಡು ಇಬ್ಬರಿಗೂ ಕೈಕೋಳಗಳನ್ನು ತೊಡಿಸ ಬೇಕೆಂದೂ ಆಜ್ಞೆ ಮಾಡಿದರು. ಆ ಸಂದರ್ಭದಲ್ಲಿಯೂ ಕೂಡ ಈ ಕ್ರಾಂತಿಕಾರಿಗಳಿರ್ವರದೂ ಮುಗುಳ್ನಗೆಯ ಪ್ರತಿಕ್ರಿಯೆಯೇ ಆಗಿತ್ತು.

ಜೂನ್ ೬, ೧೯೨೯ರಲ್ಲಿ ಭಗತ್‌ಸಿಂಗ್ ಸೆಷನ್ಸ್ ಕೋರ್ಟಿನಲ್ಲಿ ತನ್ನ ಪ್ರಬುದ್ಧವಾದ ವೈಚಾರಿಕವಾದ ಶಂಕಾತೀತವಾದ ಸಮಾಜವಾದದ ಹಿನ್ನೆಲೆಯಲ್ಲಿ ತಾನೇ ದೀರ್ಘವಾದ ಹೇಳಿಕೆಯೊಂದನ್ನು ತಯಾರಿಸಿ ತನ್ನ ಪರವಾಗಿ ವಾದಿಸುವ ವಕೀಲ ಆಸಫ್ ಅಲಿಗೆ ನೀಡಿದ್ದನೆಂದರೆ ಆತನ ಬುದ್ಧಿಮತ್ತೆ, ಆಳವಾದ ಅರಿವು ಹಾಗೂ ಪರಿಪಕ್ವ ವ್ಯಕ್ತಿತ್ವದ ಮೊತ್ತ ವನ್ನು ಕಾಣಬಹುದು. ಈತನ ಈ ವಿಚಾರ ಸರಣಿಯ ಹಿಂದೆ ಈತನ ಸತತ ಅಧ್ಯಯನ ಶೀಲತೆ ಹಾಗೂ ತೌಲನಿಕ ಚಿಂತನೆ ಎಷ್ಟು ಪ್ರಬುದ್ಧ ವಾಗಿತ್ತು ಎಂಬುದಕ್ಕೆ ನಿದರ್ಶನವಾಗಿದೆ:

"ಮಾನವ ಜನಾಂಗವನ್ನು ಪ್ರೀತಿಸುವುದರಲ್ಲಿ ನಾವು ಯಾರಿಗೂ ಕಡಿಮೆ ಇಲ್ಲ. ಯಾವ ವ್ಯಕ್ತಿಯ ವಿರುದ್ಧವೇ ಆಗಲಿ ಸೇಡಿನ ಭಾವನೆ ಯನ್ನು ಹೊಂದುವ ಬದಲು ಮಾನವ ಜೀವನವನ್ನು ವರ್ಣಿಸಲಸದಳ ವಾದಷ್ಟು ಪವಿತ್ರವಾದುದೆಂದು ಬಗೆಯುತ್ತೇವೆ.

ಹೇಡಿತನದ ಅತ್ಯಾಚಾರವನ್ನೆಸಗುವವರು ನಾವಲ್ಲ, ಆದ್ದರಿಂದ ರಾಷ್ಟ್ರವು ನಮ್ಮನ್ನು ಕಂಡು ತಲೆ ತಗ್ಗಿಸಬೇಕಾಗಿಲ್ಲ....

ನಮ್ಮ ರಾಷ್ಟ್ರದ ಇತಿಹಾಸ ಇಂದಿನ ಪರಿಸ್ಥಿತಿ ಮತ್ತು ಹಂಬಲ ಗಳನ್ನು ಗಂಭೀರವಾಗಿ ಅಧ್ಯಯನ ಮಾಡುವ ವಿನಯಶೀಲ ವಿದ್ಯಾರ್ಥಿ ಗಳು ನಾವೆಂಬುದನ್ನು ಬಿಟ್ಟು ನಮಗೆ ಬೇರಾವ ಹಮ್ಮೂ ಇಲ್ಲ. ಠಕ್ಕುತನವನ್ನು ನಾವು ಹೀನಾಯವೆಂದೆಣಿಸುತ್ತೇವೆ. ನಮ್ಮ ಕಾರ್ಯ ರೂಪದ ಪ್ರತಿಭಟನೆಯು ಒಂದು ವ್ಯವಸ್ಥೆಯ ವಿರುದ್ಧ. ಆ

ವ್ಯವಸ್ಥೆಯು ಹುಟ್ಟಿದಾಗಿನಿಂದಲೂ ತನ್ನ ಅಪ್ರಯೋಜಕತೆಯನ್ನು ಸಾರುತ್ತಲೇ ಬಂದಿದೆ. ಅಂತೆಯೇ ಅದೆಷ್ಟು ತುಂಟತನ ಮಾಡಬಲ್ಲುದೆಂಬುದನ್ನೂ ಪ್ರದರ್ಶಿಸುತ್ತಾ ಬಂದಿದೆ. ನಾವು ಹೆಚ್ಚು ಹೆಚ್ಚು ಯೋಚನೆ ಮಾಡಿದಷ್ಟೂ ನಮಗೆ ಖಾತರಿಯಾಗಿದೆ ಈ ಸಂಸ್ಥೆ ಇರುವುದು ಭಾರತದ ಅಸಹಾಯಕತೆ ಮತ್ತು ಅಪಮಾನಗಳನ್ನು ವಿಶ್ವಕ್ಕೆಲ್ಲಾ ಡಂಗೂರ ಹೊಡೆದು ಪ್ರದರ್ಶಿಸುವುದಕ್ಕಾಗಿ ಎಂದು. ಬೇಜವಾಬ್ದಾರಿತನ ಮತ್ತು ಸ್ವೇಚ್ಛಾಚಾರಿ ಆಡಳಿತಗಳ ಅತ್ಯುತ್ಕಟ ಎಲ್ಲೆಯನ್ನು ಈ ವ್ಯವಸ್ಥೆ ಪ್ರತಿಬಿಂಬಿಸುತ್ತದೆ. ಜನಗಳ ಪ್ರತಿನಿಧಿಗಳು ಪದೇ ಪದೇ ರಾಷ್ಟ್ರೀಯ ಬೇಡಿಕೆಗಳನ್ನು ಈಡೇರಿಸಲು ಒತ್ತಾಯ ಮಾಡಿದ್ದಾರೆ. ಆದರೆ ಅವರ ಒತ್ತಾಯವೆಲ್ಲಾ ಕಸದ ಬುಟ್ಟಿಯ ಪಾಲಾಗಿದೆ ಮಾತ್ರ.

...ಭಾರತದ ಮಿಲಿಯಗಟ್ಟಲೆ ಜನರು ಬೆವರು ಸುರಿಸಿ ಗಳಿಸಿದ ಹಣದ ಆಧಾರದ ಮೇಲೆ ಈ ವ್ಯವಸ್ಥೆ ನಿಂತಿದೆ, ನಿಜ. ಆದರೆ ನಮಗೆ ಕಾಣುವುದು ಈ ವ್ಯವಸ್ಥೆಯ ಆಟಾಟೋಪ ಮತ್ತು ಪೊಳ್ಳುತನಗಳು ಮಾತ್ರ. ಅಷ್ಟೇ ಅರ್ಥವಾಗದ ಇನ್ನೊಂದು ಸಂಗತಿ ಎಂದರೆ, ನಮ್ಮ ಸಾರ್ವಜನಿಕ ಕ್ಷೇತ್ರದ ನಾಯಕರ ಮನೋಭಾವ. ರಂಗಮಂದಿರದಲ್ಲಿ ಯೋಜಿತವಾದ ಪ್ರಯೋಗದಂತೆ ಕೇವಲ ಕಾಲ್ಪನಿಕವಾದ ಈ ಪ್ರದರ್ಶನವನ್ನು ನಡೆಸಲು ಸಾರ್ವಜನಿಕ ಸಮಯ ಮತ್ತು ಹಣವನ್ನು ಪೋಲು ಮಾಡುವುದಕ್ಕೆ ಇವರೇಕೆ ಸಹಾಯ ಮಾಡಬೇಕು ? ಭಾರತದ ಅಸಹಾಯಕ ದಾಸ್ಯವನ್ನು ವಿಜೃಂಭಿಸುವುದರಲ್ಲಿ ಇವರೇಕೆ ಪಾಲ್ಗೊಳ್ಳಬೇಕು ?

ಈ ಎಲ್ಲ ವಿಷಯವನ್ನು ನಾವು ಗಾಢವಾಗಿ ಚಿಂತಿಸುತ್ತಾ ಬಂದಿದ್ದೇವೆ. ಕಾರ್ಮಿಕ ಚಳುವಳಿಯ ನಾಯಕರನ್ನು ಒಟ್ಟೊಟ್ಟಿಗೆ ದಸ್ತಗಿರಿ ಮಾಡಿರುವುದನ್ನು ನಾವು ವೀಕ್ಷಿಸಿದ್ದೇವೆ. ಕಾರ್ಮಿಕ ವಿವಾದಗಳ ಕಾಯಿದೆಯನ್ನು ಶಾಸನಸಭೆಯಲ್ಲಿ ಮಂಡಿಸಿದಾಗ ಅದು ಯಾವ ರೀತಿಯ ಪುರಸ್ಕಾರವನ್ನು ಪಡೆಯುತ್ತಿತ್ತೆಂಬುದನ್ನು ಅವಲೋಕಿಸಲು

ನಾವು ಉತ್ಸುಕರಾಗಿದ್ದೆವು. ಅಲ್ಲಿನ ಚರ್ಚೆಯು ನಮ್ಮ ಯಾವ ಅನುಮಾನವನ್ನೂ ಸುಳ್ಳಾಗಿಸಲಿಲ್ಲ. ಶ್ರಮಜೀವನ ನಡೆಸುತ್ತಿರುವ ಮಿಲಿಯಗಟ್ಟಲೆ ಭಾರತೀಯರು ಈ ವ್ಯವಸ್ಥೆಯಿಂದ ಅಪೇಕ್ಷಿಸಬಹುದಾದದ್ದೇನೂ ಇಲ್ಲ. ಅದು ಅಸಹಾಯಕ ದುಡಿಮೆಗಾರರ ದಾಸ್ಯದ ಹಾಗೂ ಕತ್ತು ಹಿಚುಕುವ ಶೋಷಕರ ದರ್ಪದ ಮೂರ್ತಿವೆತ್ತ ಕಠೋರ ಸ್ಮಾರಕದಂತಿದೆ.

...ಗುಲಾಮಗಿರಿಗೆ ಸಿಲುಕಿ ನರಳುತ್ತಿರುವ ಮೂಕ ಶ್ರಮಜೀವಿಗಳ ಬಗ್ಗೆ ನಮ್ಮಂತೆ ಅನುಕಂಪ ಹೊಂದಿರುವವರಾರೂ ಇಂತಹ ಕ್ಷುದ್ರ ಘಟನೆಯನ್ನು ಸ್ವಸ್ಥಚಿತ್ತದಿಂದ ನೋಡುತ್ತಾ ಕುಳಿತಿರಲಾರರು. ಅವರಿಗಾಗಿ ಯಾರ ಹೃದಯದಲ್ಲಿ ವೇದನೆಯುಂಟಾಗುತ್ತದೋ ಯಾರು ಆರ್ಥಿಕ ನಿರ್ಮಾಣಕ್ಕಾಗಿ ಮೌನವಾಗಿ ತಮ್ಮ ಜೀವರಕ್ತವನ್ನು ಸುರಿದಿದ್ದಾರೋ ಅವರು ಈ ಕ್ರಮದಿಂದ ವಿಚಲಿತರಾಗದೆ ಉಳಿಯುವುದಿಲ್ಲ. ಈ ಕ್ರೂರ ಆಘಾತವನ್ನು ಸಹಿಸುವುದಿಲ್ಲ.

ತತ್ಪರಿಣಾಮವಾಗಿ ದಿವಂಗತ ಎಸ್. ಆರ್. ದಾಸ್ ಅವರ ಮಾತೊಂದು ನನ್ನಲ್ಲಿ ಮರುಕಳಿಸಿತು. ಅವರು ಗವರ್ನರ್ ಜನರಲ್‌ನ ಕಾರ್ಯಾಂಗ ಸಮಿತಿಯಲ್ಲಿ ಕಾನೂನು ಸಚಿವರಾಗಿದ್ದವರು. ಮಗನಿಗೆ ಅವರು ಬರೆದಿದ್ದ ಒಂದು ಪ್ರಸಿದ್ಧವಾದ ಪತ್ರದಲ್ಲಿದ್ದ ಮಾತುಗಳ ಸಾರಾಂಶವಿದು :

"ಇಂಗ್ಲೆಂಡನ್ನು ತನ್ನ ಕನಸಿನ ಲೋಕದಿಂದ ಹೊರತರಲು ಬಾಂಬಿನ ಅವಶ್ಯಕತೆ ಇದೆ. ಆದರಂತೆ ನಾವು ಶಾಸನ ಸಭೆಯ ಅಂಗಣದೊಳಕ್ಕೆ ಬಾಂಬನ್ನು ಒಗೆದೆವು. ಹೃದಯವಿದ್ರಾವಕವಾದ ನಮ್ಮ ಬೇನೆಯನ್ನು ವ್ಯಕ್ತಗೊಳಿಸಲು ಬೇರಾವ ಸಾಧನವೂ ಇಲ್ಲದ ಕೋಟಿಗಟ್ಟಲೆ ಜನರ ಪರವಾಗಿ ಹೀಗೆ ನಾವು ನಮ್ಮ ಪ್ರತಿಭಟನೆಯನ್ನು ಸಲ್ಲಿಸಿದ್ದೇವೆ. ನಮ್ಮ ಒಂದೇ ಉದ್ದೇಶವೆಂದರೆ 'ಕಿವುಡರಿಗೂ ಕೇಳುವಂತೆ ಗಟ್ಟಿಯಾಗಿ ಕೂಗಿ ಹೇಳುವುದು' ಮತ್ತು ಲಕ್ಷ್ಯವಿಲ್ಲದೆ ನಡೆಯು

ವವರಿಗೆ ಸಮಯೋಚಿತವಾದ ಎಚ್ಚರಿಕೆ ನೀಡುವುದು. ನಮ್ಮಷ್ಟೇ ತೀವ್ರವಾಗಿ ಇದನ್ನೆಲ್ಲಾ ಅನುಭವಿಸುವವರು ಹಲವರಿದ್ದಾರೆ. ಭಾರತದ ಜನಕೋಟಿಯ ಸಮುದ್ರದಾಳದಲ್ಲಿ ತೋರಿಕೆಗೆ ಶಾಂತವಾದ ಗಾಂಭೀರ್ಯವಿದೆ. ಆದರೆ ಅಲ್ಲಿಂದ ಸದ್ಯದಲ್ಲೇ ಒಂದು ಪ್ರಬಲವಾದ ಬಿರುಗಾಳಿ ಬೀಸಲಿದೆ. ನಾವು ಮಾಡಿರುವ ಚಿಕ್ಕ ಕೆಲಸವೆಂದರೆ ಇದಕ್ಕೆ ಪೂರ್ವಭಾವಿಯಾಗಿ ಅಪಾಯದ ಚಿಹ್ನೆಯನ್ನು ಎತ್ತರಕ್ಕೆ ಹಾರಿಸಿ ಎಚ್ಚರ ನೀಡುವುದು. ಮುಂಬರುವ ಭಾರಿ ಅಪಾಯವನ್ನು ಲೆಕ್ಕಿಸದೆ ಮುನ್ನುಗ್ಗುತ್ತಿರುವವರು ಈ ಚಿಹ್ನೆಯಿಂದ ಸೂಚನೆಯನ್ನು ಪಡೆದುಕೊಳ್ಳಲಿ. ಕಾಲ್ಪನಿಕವಾದ ಅಹಿಂಸೆಯ ಶಕಕ್ಕೆ ಇತಿಶ್ರೀ ಹಾಡಲು ನಾವೊಂದು ಪ್ರತೀಕವಂತಾಗಿದ್ದೇವೆ. ಆ ಕಾಲ್ಪನಿಕ ಅಹಿಂಸೆ ಎಷ್ಟು ನಿಷ್ಪ್ರಯೋಜಕವೆಂಬುದನ್ನು ಎಳ್ಳಷ್ಟೂ ಸಂಶಯವಿಲ್ಲದಂತೆ ಉದಯೋನ್ಮುಖಿ ಪೀಳಿಗೆಯು ಗೊತ್ತುಮಾಡಿಕೊಂಡಿದೆ.

...ರಾಷ್ಟ್ರದಲ್ಲಿ ತೋರಿ ಬಂದಿರುವ ಹೊಸ ಚಳುವಳಿಯು ಗುರು ಗೋವಿಂದಸಿಂಗ್ ಹಾಗೂ ಶಿವಾಜಿ, ಕಮಲ್ ಪಾಶಾ ಹಾಗೂ ರೀಜಾ ಖಾನ್, ವಾಷಿಂಗ್ಟನ್ ಹಾಗೂ ಗರಿಬಾಲ್ಡಿ, ಲಫಾಯೆತ್ ಹಾಗೂ ಲೆನಿನ್‌ನಂತಹವರನ್ನು ಸ್ಫೂರ್ತಿಗೊಳಿಸಿದ ಆದರ್ಶಗಳಿಂದ ಪ್ರೇರಿತವಾಗಿದೆ. ಮೂಡಲಿರುವ ಆ ಕೆಂಪನೆಯ ಪ್ರಾತಃಕಾಲದ ಸೂಚನೆಯನ್ನು ನಾವು ಕೊಟ್ಟಿದ್ದೇವೆ.

....ವ್ಯಕ್ತಿಗಳನ್ನು ತುಳಿಯುವುದರಿಂದ ಭಾವನೆಗಳನ್ನು ಪುಡಿ ಪುಡಿ ಮಾಡಲು ಸಾಮ್ರಾಜ್ಯಶಾಹಿ ಶೋಷಕರಿಗೆ ಸಾಧ್ಯವಾಗದೆಂದು ತೋರಿಸಲು ನಮ್ಮ ಕೃತ್ಯ ಶಕ್ಯವಾಗಿದೆ. ನಿಕೃಷ್ಟವಾದ ಎರಡು ತುಕಡಿಗಳನ್ನು ತುಂಡು ಹಾಕುವುದರಿಂದ ಒಂದು ಇಡೀ ರಾಷ್ಟ್ರವನ್ನು ತುಳಿದುಹಾಕಲು ಸಾಧ್ಯವಾಗುವುದಿಲ್ಲ. ಒಂದು ಐತಿಹಾಸಿಕ ಪಾಠವನ್ನು ಒತ್ತಿ ಹೇಳುವುದು ನಮ್ಮ ಇಚ್ಛೆಯಾಗಿತ್ತು. ಮುದ್ರಾಂಕಿತ

ಪತ್ರಗಳಾಗಲಿ, ಬ್ಯಾಸ್ಟಿಲ್ ಕಾರಾಗೃಹವಾಗಲಿ, ಫ್ರಾನ್ಸಿನ ಕ್ರಾಂತಿಕಾರಿ ಚಳುವಳಿಯನ್ನು ಧ್ವಂಸ ಮಾಡಲು ಅಶಕ್ತವಾಗಿದ್ದುವು. ನೇಣುಗಂಬಗಳು ಹಾಗೂ ಸೈಬೀರಿಯಾದ ಸಿಡಿಮದ್ದುಗಳು ರಷ್ಯದ ಕ್ರಾಂತಿಯನ್ನು ತಡೆ ಹಿಡಿಯಲಿಲ್ಲ; ರಕ್ತಸಿಕ್ತ ಭಾನುವಾರ, ಇತ್ಯಾದಿ ಕ್ರೌರ್ಯಗಳು ಐರ್ಲೆಂಡಿನ ಸ್ವಾತಂತ್ರ್ಯವನ್ನು ಹಿಚುಕಿ ಹಾಕಲು ಸಮರ್ಥವಾಗಲಿಲ್ಲ.

ಆರ್ಡಿನೆನ್ಸ್‌ಗಳು ಮತ್ತು ರಕ್ಷಣಾ ಕಾಯಿದೆಗಳು ಭಾರತದಸ್ವಾತಂತ್ರ್ಯದ ಜ್ವಾಲೆಯನ್ನು ನಂದಿಸಲು ಸಮರ್ಥವಾದಾವೇನು ?....ಕೆಳಗಿನ ನ್ಯಾಯಾಲಯದಲ್ಲಿ ನಮ್ಮ ಕ್ರಾಂತಿ ಕಲ್ಪನೆಯಾದರೂ ಏನೆಂಬ ಪ್ರಶ್ನೆಯನ್ನು ಹಾಕಲಾಗಿತ್ತು. ಅದಕ್ಕೆ ನಮ್ಮ ಉತ್ತರ ಇದು: 'ಕ್ರಾಂತಿ' ಎಂದರೆ ರಕ್ತಗೆಂಪಿನ ಸಂಘರ್ಷವೇ ಆಗಿರಬೇಕೆಂಬ ನಿಯಮವೇನೂ ಇಲ್ಲ. ವೈಯಕ್ತಿಕ ಜಿದ್ದಿಗೂ ಅಲ್ಲಿ ಅವಕಾಶವಿಲ್ಲ. ಕ್ರಾಂತಿಯು ಬಾಂಬು ಮತ್ತು ಪಿಸ್ತೂಲುಗಳ ಆರಾಧನೆಯೂ ಅಲ್ಲ. ನಮ್ಮ ದೃಷ್ಟಿಯಲ್ಲಿ ಕ್ರಾಂತಿ ಎಂದರೆ ಸ್ಪಷ್ಟವಾಗಿ ಅನ್ಯಾಯದ ಬುನಾದಿಯ ಮೇಲೆ ರಚಿತವಾಗಿರುವ ಇಂದಿನ ವ್ಯವಸ್ಥೆ ಬದಲಾಗಬೇಕು ಎಂದರ್ಥ. ಉತ್ಪಾದಕರು ಅಥವ ದುಡಿಮೆಗಾರರು ಸಮಾಜದ ಅತ್ಯಂತ ಅವಶ್ಯಕ ಅಂಗವಾಗಿದ್ದಾಗ್ಯೂ ಶೋಷಕರಿಂದ ವಂಚಿಸಲ್ಪಡುತ್ತಿದ್ದಾರೆ. ಅವರ ದುಡಿಮೆಯ ಫಲ ಅವರಿಗೆ ದಕ್ಕುತ್ತಿಲ್ಲ; ಅವರ ಅತಿ ಸಾಮಾನ್ಯವಾದ ಹಕ್ಕುಗಳನ್ನು ಅವರಿಂದ ಕಿತ್ತುಕೊಳ್ಳಲಾಗಿದೆ. ಎಲ್ಲರಿಗೂ ಬೇಕಾಗುವ ಧಾನ್ಯಗಳನ್ನು ಬೆಳೆಯುವ ರೈತ ತನ್ನ ಕುಟುಂಬದೊಡನೆ ಹಸಿವೆಯಿಂದ ನರಳುತ್ತಿದ್ದಾನೆ. ಇಡೀ ಜಗತ್ತಿನ ಮಾರುಕಟ್ಟೆಯನ್ನು ತಾನು ನೇಯುವ ಬಟ್ಟೆಯಿಂದ ತುಂಬುವ ನೇಯ್ಗೆಗಾರ ತನ್ನ ಮತ್ತು ತನ್ನ ಮಕ್ಕಳ ಶರೀರವನ್ನು ಮುಚ್ಚಲು ಬೇಕಾದ ಕನಿಷ್ಟವಾದ ಬಟ್ಟೆಯನ್ನು ಪಡೆದಿಲ್ಲ. ಮನೆ ಕಟ್ಟುವವರು, ಕಮ್ಮಾರರು ಮತ್ತು ಬಡಗಿಗಳು ಭವ್ಯವಾದ ಸೌಧಗಳನ್ನೇ ಕಟ್ಟುತ್ತಿದ್ದಾರಾದರೂ ಕೊಳಚೆ ಪ್ರದೇಶಗಳಲ್ಲಿ ಜಾತಿ ಭ್ರಷ್ಟರಾಗಿ ಉಳಿದಿದ್ದಾರೆ. ಸಮಾಜದ ಪರತಂತ್ರ ಜೀವಿಗಳಾದ ಬಂಡವಳಿಗರು ಮತ್ತು ಶೋಷಕರು

ಮನಸೋ ಇಚ್ಛೆಯಂತೆ ಮಿಲಿಯಂಗಟ್ಟಲೆ ಹಣವನ್ನು ಚೆಲ್ಲ ಬಲ್ಲರು. ಈ ಭಯಂಕರ ಅಸಮಾನತೆಗಳೂ ಬಲಾತ್ಕಾರವಾಗಿ ಹೇರಲ್ಪಟ್ಟಿರುವ ಅವಕಾಶಗಳ ಅಸಮಾನತೆಯೂ ಅಸ್ತವ್ಯಸ್ತತೆಗೆ ದಾರಿಮಾಡಿ ಕೊಟ್ಟೇ ತೀರುತ್ತವೆ. ಈ ರೀತಿಯ ವ್ಯವಸ್ಥೆ ಬಹುಕಾಲ ಉಳಿಯುಲಾರದು. ಸಮಾಜದ ವ್ಯವಸ್ಥೆಯಲ್ಲಿ ಇಂದು ಕಾಣಬರುವ ಮೋಜು ಅಗ್ನಿಪರ್ವತದ ಅಂಚಿನಲ್ಲಿ ಇರುವ ಮೋಜೆಂಬುದು ಸ್ವಯಂಸಿದ್ಧವಾಗಿದೆ. ಈ ನಾಗರೀಕತೆಯ ಭವ್ಯ ಕಟ್ಟಡವನ್ನು ಸಕಾಲದಲ್ಲಿ ಉಳಿಸದಿದ್ದರೆ ಅದು ಕುಸಿದು ಭಗ್ನವಾಗುವುದು ಖಂಡಿತ. ಆದ್ದರಿಂದ ಆಮೂಲಾಗ್ರವಾದ ಬದಲಾವಣೆ ಅತ್ಯವಶ್ಯಕ. ಅದನ್ನು ತಿಳಿದವರ ಕರ್ತವ್ಯ ಸಮಾಜವನ್ನು ಸಮಾಜವಾದಿ ಆಧಾರದ ಮೇಲೆ ಪುನರ್ರಚಿಸುವುದಾಗಿದೆ. ಇದನ್ನು ಮಾಡದ ಹೊರತು, ಅರ್ಥಾತ್ ಮಾನವನನ್ನು ಮಾನವ ಹಾಗೂ ಒಂದು ರಾಷ್ಟ್ರವನ್ನು ಇನ್ನೊಂದು ರಾಷ್ಟ್ರವು ಶೋಷಿಸುವುದನ್ನು ಅಂತ್ಯಗೊಳಿಸದ ಹೊರತು, ಮಾನವ ಜನಾಂಗವನ್ನು ಇಂದು ಬಾಧಿಸುತ್ತಿರುವ ಪಡಿಪಾಟಲು ಮತ್ತು ಕಗ್ಗೊಲೆಗಳನ್ನು ತಡೆಯಲಾಗುವುದಿಲ್ಲ. ಇಂದಿನ ವ್ಯವಸ್ಥೆಯ ಹಿನ್ನೆಲೆಯಲ್ಲಿ ಯುದ್ಧವನ್ನು ನಿರ್ನಾಮಗೊಳಿಸುವ ಹಾಗೂ ಶಾಂತಿಯ ನವೋದಯವನ್ನು ಸೃಷ್ಟಿಸುವ ಎಲ್ಲ ಮಾತುಗಳೂ ಅನಾಚ್ಛಾದಿತ ಕಪಟತನದ ಮಾತುಗಳೇ ಆಗುತ್ತವೆ.

'ಕ್ರಾಂತಿ' ಎಂದರೆ ನಮ್ಮ ಕಲ್ಪನೆಯಲ್ಲಿ ಅಂತಿಮವಾಗಿ ಇಂತಹ ಆಘಾತಗಳಿಗೆ ತುತ್ತಾಗದಂತಹ ಸಮಾಜ ವ್ಯವಸ್ಥೆಯೊಂದರ ನಿರ್ಮಾಣ. ಅಲ್ಲಿ ದುಡಿಮೆಗಾರರ ಸಾರ್ವಭೌಮತ್ವವನ್ನು ಎಲ್ಲರೂ ಮಾನ್ಯ ಮಾಡುತ್ತಾರೆ. ಬಂಡವಾಳಶಾಹಿ ಪದ್ಧತಿ ಮತ್ತು ಸಾಮ್ರಾಜ್ಯಶಾಹಿ ಯುದ್ಧಗಳ ಪಿಡುಗಿನಿಂದ ಮಾನವ ಜನಾಂಗಕ್ಕೆ ಮುಕ್ತಿ ದೊರಕಬೇಕು ; ಅದು ಜಾಗತಿಕ ಒಕ್ಕೂಟದ ಕೊಡುಗೆಯಾಗಿರುತ್ತದೆ.

ಇದು ನಮ್ಮ ಆದರ್ಶ. ನಮ್ಮ ಸ್ಫೂರ್ತಿಗೆ ಈ ಸಿದ್ಧಾಂತವೇ

ಜೀವಕೊಟ್ಟಿರುವುದು. ನಾವು ಸಾಕಷ್ಟು ಪ್ರಭಾವಶಾಲಿಯೂ ಪ್ರಬಲವೂ ಆದ ಎಚ್ಚರವನ್ನು ನೀಡಿದ್ದೇವೆಂದು ಭಾವಿಸುತ್ತೇವೆ.

...ಕ್ರಾಂತಿಯ ಆದರ್ಶವು ಪರಿಪೂರ್ಣವಾಗಿ ನೆರವೇರಬೇಕಾದರೆ ದುಡಿಯುವ ವರ್ಗದ ಅಧಿಕಾರ ಅಸ್ತಿತ್ವಕ್ಕೆ ಬರಬೇಕು. ಕ್ರಾಂತಿಯು ಮಾನವ ಜನಾಂಗದ ಪ್ರಶ್ನಾತೀತವಾದ ಹಕ್ಕು. ಸ್ವಾತಂತ್ರ್ಯವು ಎಂದೂ ಕ್ಷಯವಾಗದ ಆಜನ್ಮಸಿದ್ಧ ಹಕ್ಕು. ಸಮಾಜದ ನಿಜವಾದ ಆಧಾರಸ್ತಂಭ ದುಡಿಮೆ. ದುಡಿಮೆಗಾರರ ಅಂತಿಮ ಗುರಿ ಜನತೆಯ ಸಾರ್ವಭೌಮತ್ವ.

ಈ ಆದರ್ಶಗಳಿಗಾಗಿ ಮತ್ತು ಈ ನಂಬಿಕೆಗಾಗಿ ನಮಗೆ ವಿಧಿಸಬಹುದಾದ ಯಾವುದೇ ಶಿಕ್ಷೆ ಅಥವಾ ಸಂಕಷ್ಟವನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಕ್ರಾಂತಿಯ ಈ ಬಲಿಪೀಠಕ್ಕೆ ನಮ್ಮ ಯೌವ್ವನದ ಸುಗಂಧವನ್ನು ಲೇಪಿಸಲು ಬಂದಿದ್ದೇವೆ. ಅಷ್ಟು ಉದಾತ್ತವಾದ ಧ್ಯೇಯಕ್ಕೆ ಎಂತಹ ತ್ಯಾಗವೂ ಅತಿಶಯವೆನಿಸುವುದಿಲ್ಲ. ನಮಗೆ ತೃಪ್ತಿಯಿದೆ. ಕ್ರಾಂತಿಯು ಮೊಳಗುವುದನ್ನು ನಾವು ನಿರೀಕ್ಷಿಸುತ್ತೇವೆ. ಕ್ರಾಂತಿ ಚಿರಾಯುವಾಗಲಿ."

ಭಗತ್‌ಸಿಂಗ್ ತಯಾರಿಸಿದ ಈ ಸುದೀರ್ಘ ಹೇಳಿಕೆಯನ್ನು ವಕೀಲ ಆಸಫ್ ಆಲಿ ಕೆಲವೊಂದು ಮಾರ್ಪಾಡು ಮಾಡಿ ನ್ಯಾಯಾಲಯದಲ್ಲಿ ಸುದೀರ್ಘವಾಗಿ ಓದುತ್ತಿದ್ದಾಗ ನ್ಯಾಯಾಲಯದಲ್ಲಿದ್ದವರೆಲ್ಲಾ ತಲೆದೂಗಿದರು. ನಾಲ್ವರು ಪಂಚಾಯತರ ಪೈಕಿ, ಮೂವರು ಕಣ್ಣೀರಿಟ್ಟರು. ಕಿರಿಯ ವಯಸ್ಸಿನಲ್ಲಿ ಇಂತಹ ಹಿರಿಯ ಚಿಂತಕ, ಹೋರಾಟಗಾರ, ಮಾನವತಾವಾದಿ ಬಹುಶಃ ಹಿಂದೆಂದೂ ಯಾವ ದೇಶದ ಇತಿಹಾಸದಲ್ಲೂ ಕಂಡು ಬರಲಾರ. ಈತನ ಈ ಚಿಂತನೆಗಳೇ ಈತನ ಕಲ್ಪನೆಯ ಭಾರತವೂ ಆಗಿತ್ತು.

ಈ ವೀರೋಚಿತ ಹಾಗೂ ಅಪೂರ್ವವಾದ ಹೇಳಿಕೆಯನ್ನು ಕೇಳಿದ ನ್ಯಾಯಾಲಯ ವಿಚಾರಣೆಯ ನಾಟಕ ಮುಗಿಸಿ, ೧೯೨೯, ಜೂನ್ ೧೨ ರಂದು ತನ್ನ ತೀರ್ಪು ನೀಡಿತು :

"ಸಾವನ್ನುಂಟುಮಾಡುವ ಉದ್ದೇಶದಿಂದ ಭಗತ್‌ಸಿಂಗ್ ಮೊದಲನೆಯ ಬಾಂಬನ್ನು ಸಿಡಿಸಿದನೆಂದು ಸಾಧಿಸಲಾಗಿದೆಯೆಂದು ನನಗೆ ಖಾತರಿಯಾಗಿದೆ. ಅದೇ ಉದ್ದೇಶವಾಗಿರದಿದ್ದರೂ ಬಾಂಬಿನ ಸ್ಫೋಟದಿಂದುಂಟಾಗುವ ಗಾಯಗಳಿಂದ ಸಾವುಂಟಾಗಬಹುದಿತ್ತೆಂದಾದರೂ ಭಗತ್‌ಸಿಂಗ್‌ಗೆ ತಿಳಿದಿರಲೇಬೇಕು. ಹೀಗಾಗಿ ಸರ್ ಜಾರ್ಜ್ ಶುಸ್ಟರ್, ಪಿ. ಆರ್. ರಾವ್ ಮತ್ತು ಶಂಕರ್‌ರಾವ್ ಅವರಿಗೆ ಗಾಯಗಳನ್ನುಂಟು ಮಾಡಿದ್ದಾನೆ. ಇಂಡಿಯನ್ ಪೀನಲ್ ಕೋಡ್‌ನ ೩೦೭ನೇ ಕಲಂನ ಪ್ರಕಾರ ಇದು ಶಿಕ್ಷಾರ್ಹವಾದ ಅಪರಾಧವಾಗಿದೆ. ಆಜೀವ ಪರ್ಯಂತ ಗಡಿಪಾರು ಅಥವಾ ಅದಕ್ಕಿಂತಲೂ ಕಡಿಮೆಯಾದ ಶಿಕ್ಷೆಯನ್ನು ಇದಕ್ಕೆ ವಿಧಿಸಬಹುದು....ಎರಡನೆಯ ಬಾಂಬನ್ನು ಇದೇ ಉದ್ದೇಶಗಳಿಗಾಗಿ ಬಿ. ಕೆ. ದತ್ ಒಗೆದನೆಂಬುದು ಸಿದ್ಧವಾಗಿದೆ. ಅದರಿಂದಾಗಿ ಎಸ್. ಎನ್. ರಾಯ್ ಮತ್ತು ರಾಯ್ ಬಹಾದೂರ್, ಎ.ಪಿ. ದುಬೆಯವರಿಗೆ ಗಾಯಗಳಾಗಿವೆ. ಅವನಿಗೂ ಇದೇ ಶಿಕ್ಷೆ ವಿಧಿಸಬಹುದು. ಇಬ್ಬರು ಅಪರಾಧಿಗಳ ಮೇಲೂ ಮಾಡಲಾಗಿರುವ ಆಪಾದನೆಗಳು ಸಾಬೀತಾಗಿವೆ ಮತ್ತು ಅದರಂತೆ ನಾನವರಿಗೆ ಶಿಕ್ಷೆಯನ್ನು ವಿಧಿಸುತ್ತೇನೆ.

....ಅಪರಾಧಿಗಳ ಈ ಕೃತ್ಯವು ಸಾಕಷ್ಟು ಪ್ರಚಾರವನ್ನು ಪಡೆದಿದೆ. ಅಪರಾಧದ ಮನೋಭಾವವುಳ್ಳ ಇತರರಿಗೆ ಇದೊಂದು ಪ್ರೇರಣೆಯಾಗಬಹುದು. ಅದನ್ನು ಪ್ರತಿಬಂಧಿಸಲು ಸಹ ಇವರಿಗೆ ಶಿಕ್ಷೆಯಾಗಬೇಕು. ಅಪರಾಧಿಗಳು ಯುವಕರೇನೋ ಹೌದು. ಆದರೆ ಅವರ ಕೃತ್ಯ ಯೋಜಿತವಾದ ರೀತಿಯಲ್ಲಿ ನಡೆದಿದೆ. ಅದಕ್ಕವರು ಸುದೀರ್ಘವಾದ ತಯಾರಿ ನಡೆಸಿದ್ದಾರೆ. ಇಂತಹ ಸನ್ನಿವೇಶದಲ್ಲಿ ಈ ಯುವಕರಿಗೆ ಸಾಧಾರಣ ಶಿಕ್ಷೆಯನ್ನು ನೀಡಿ ಬಿಟ್ಟು ಬಿಡುವಂತಿಲ್ಲ. ಭಗತ್‌ಸಿಂಗ್ ಮತ್ತು ಬಿ. ಕೆ. ದತ್ ಇಬ್ಬರನ್ನೂ ಜೀವಾವಧಿ ಕಾಲದವರೆಗೆ ಗಡಿಪಾರು ಮಾಡಬೇಕೆಂಬ ಶಿಕ್ಷೆಯನ್ನು ನಾನು ವಿಧಿಸುತ್ತೇನೆ."

ಈ ತೀರ್ಪಿನ ವಿರುದ್ಧ ಕ್ರಾಂತಿಕಾರಿಗಳೀರ್ವರೂ ಉಚ್ಚ ನ್ಯಾಯಾಲಯದ ಮೊರೆಹೊಕ್ಕರು. ಶಿಕ್ಷೆಯಿಂದ ಪಾರಾಗಬೇಕೆಂಬ ಜೀವ ಭಯದಿಂದಲ್ಲ ; ನ್ಯಾಯಾಲಯವನ್ನು ಪ್ರಚಾರ ಮಾಧ್ಯಮವನ್ನಾಗಿ ಬಳಸಿಕೊಳ್ಳುವ ತಮ್ಮ ಸನ್ನಾಹವನ್ನು ಮುಂದುವರಿಸುವುದಕ್ಕಾಗಿ. ಅಲ್ಲಿ ಭಗತ್‌ಸಿಂಗ್ ತನ್ನ ಪರವಾಗಿ ತನ್ನ ವಾದವನ್ನು ತಾನೇ ಮಂಡಿಸಿದ. ಆದರೆ ನಿರೀಕ್ಷೆಯಂತೆ ಅಲ್ಲಿಯೂ ಹಿಂದಿನ ಕೋರ್ಟ್ ವಿಧಿಸಿದ್ದ ಶಿಕ್ಷೆಯನ್ನು ಎತ್ತಿಹಿಡಿದು ಇಬ್ಬರಿಗೂ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಖಾಯಂಗೊಳಿಸಿತು.

ಭಗತ್‌ಸಿಂಗ್‌ನನ್ನು ಮಿಯಾನ್‌ವಾಲಿ ಜೈಲಿನಲ್ಲಿಟ್ಟರು. ಬಿ. ಕೆ. ದತ್‌ನನ್ನು ಲಾಹೋರ್ ಸೆಂಟ್ರಲ್ ಜೈಲಿಗೆ ತಳ್ಳಿದರು. ಜೈಲಿನಲ್ಲಿ ಭಗತ್‌ಸಿಂಗ್‌ಗೆ ಅನೇಕ ರಾಜಕೀಯ ಖೈದಿಗಳ ಪರಿಚಯಗಳಿಸಿಕೊಳ್ಳಲು ಸಹಾಯವಾಯಿತು. ಘದರ್ ಚಳುವಳಿ, ಬಬ್ಬರ್ ಅಕಾಲಿ ಚಳುವಳಿ ಇತ್ಯಾದಿಗಳಲ್ಲಿ ಭಾಗಿಯಾಗಿದ್ದಕ್ಕಾಗಿ ಶಿಕ್ಷೆ ಅನುಭವಿಸುತ್ತಿದ್ದ ರಾಜಕೀಯ ಬಂಧಿಗಳಿಗೆ ನೀಡಲಾಗುತ್ತಿದ್ದ ಕಿರುಕುಳವನ್ನು ಪ್ರತ್ಯಕ್ಷವಾಗಿ ಕಂಡು ತಕ್ಷಣ ಸಿಡಿದೆದ್ದ. ಜೈಲಿನಲ್ಲಿ ರಾಜಕೀಯ ಖೈದಿಗಳಿಗೆ ನೀಡುವ ಸೌಲಭ್ಯ ನೀಡಬೇಕೆಂದು ಸತ್ಯಾಗ್ರಹ ಮಾರ್ಗ ಹಿಡಿದ. ಅನೇಕ ಬಂಧಿಗಳ ಸಭೆ ಕರೆದು : "ನಾವು ಹೊರಗಿದ್ದಿದ್ದರೆ ಸ್ವಾತಂತ್ರಕ್ಕಾಗಿ ಹೋರಾಟವನ್ನು ಮುಂದುವರಿಸುತ್ತಿದ್ದೆವು. ನಾವೀಗ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅಂಗವಾದ ಜೈಲಿನಲ್ಲಿದ್ದೇವೆ. ದೇಶಕ್ಕಾಗಿ ಹೋರಾಡುವವರ ಸ್ಥೈರ್ಯ ಮತ್ತು ಶಕ್ತಿಗಳನ್ನು ಕುಗ್ಗಿಸುವುದು ಈ ಜೈಲುಗಳ ಉದ್ದೇಶ. ಮಾನವ ನಿಗೆ ತಕ್ಕುದಾದ ನಡತೆ ಬ್ರಿಟಿಷ್ ಅಧಿಕಾರಿಗಳಲ್ಲಿ ಇಲ್ಲ. ಆದ್ದರಿಂದ ಹೋರಾಟದ ಹಾದಿ ಹಿಡಿಯೋಣ ಬನ್ನಿ...." ಎಂದು ಉಪವಾಸ ಸತ್ಯಾಗ್ರಹ ಮಾಡುವುದರ ಮುಖಾಂತರ ಜೈಲು ಅಧಿಕಾರಿಗಳನ್ನು ಬಗ್ಗಿಸಿ, ಸ್ವಲ್ಪ ಮಟ್ಟಿಗಾದರೂ ಉತ್ತಮ ಆಹಾರ, ಓದಲು ಬೇಕಾದ ಸೌಲಭ್ಯ ದೊರಕುವಂತೆ ಮಾಡಿದ.

ಭಗತ್‌ಸಿಂಗನನ್ನು ಇಟ್ಟಲ್ಲಿ ಇಟ್ಟರೆ ಸಿಡಿಮದ್ದಾಗುತ್ತಾನೆಂಬುದನ್ನು ಬಲ್ಲ ಬ್ರಿಟಿಷ್ ಸರ್ಕಾರ ಮಿಯಾನ್‌ವಾಲಿ ಜೈಲಿನಿಂದ ಲಾಹೋರ್ ಸೆಂಟ್ರಲ್ ಜೈಲಿಗೆ ಸ್ಥಳಾಂತರಿಸಿದರು. ಇದಕ್ಕೆ ಬಲವಾದ ಕಾರಣ ಇನ್ನೊಂದಿತ್ತು. ಸಾಂಡರ್ಸ್‌ನ ಹತ್ಯೆಯಿಂದ ಬ್ರಿಟಿಷ್ ಪೋಲಿಸರಿಗೆ ಸಿಂಹ ಸ್ವಪ್ನವಾಗಿದ್ದ ಈತನನ್ನು ಅದಕ್ಕೆ ಸಂಬಂಧಿಸಿದಂತೆ ಅಪರಾಧಿಯನ್ನಾಗಿಸಲು ಮೊಕದ್ದಮೆ ಸಿದ್ಧತೆಗಾಗಿ ವರ್ಗಾಯಿಸಿದ್ದರು. ಇದನ್ನೆ 'ಲಾಹೋರ್ ಪಿತೂರಿ ಮೊಕದ್ದಮೆ" ಎಂದು ಕರೆದದ್ದು.

ಈತನನ್ನು ಲಾಹೋರ್ ಸೆಂಟ್ರಲ್ ಜೈಲಿಗೆ ವರ್ಗಾಯಿಸಿದಾಗ, ಅಲ್ಲಿಯೇ ಇದ್ದ ಬಿ. ಕೆ. ದತ್ತನೊಂದಿಗೆ ಸೇರಿ ಉಪವಾಸವನ್ನು ಮುಂದುವರೆಸಿದ. ಲಾಹೋರ್ ಪಿತೂರಿ ಮೊಕದ್ದಮೆಯ ಇತರ ಆರೋಪಿಗಳಾದ ಸುಖದೇವ್, ಜತೀಂದ್ರನಾಥ್‌ದಾಸ್, ಅಜಯ್ ಘೋಷ್, ಶಿವವರ್ಮ, ಗಯಾಪ್ರಸಾದ್, ಜಯದೇವ್ ಕಪೂರ್, ರಾಜಗುರು ಮತ್ತು ಬಿ, ಕೆ. ಸಿನ್ಹಾರವರುಗಳು ಲಾಹೋರ್‌ನ ಬೋರ್ಸ್ಟಾಲ್ ಜೈಲಿನಲ್ಲಿದ್ದರು. ಅವರೆಲ್ಲರೂ ತಮ್ಮನ್ನು ರಾಜಕೀಯ ಬಂದಿಗಳಂತೆ ನೋಡಿಕೊಳ್ಳಲು ಉಪವಾಸ ಪ್ರಾರಂಭಿಸಿದರು.

ಉಪವಾಸದಿಂದ ಸತ್ಯಾಗ್ರಹಿಗಳು ತೂಕ ಕಳೆದುಕೊಂಡದ್ದು ಸಾರ್ವಜನಿಕರಲ್ಲಿ ತಳಮಳ ಉಂಟುಮಾಡಿ ಬಹಿರಂಗ ಸಭೆಗಳು, ಮೆರವಣಿಗೆಗಳು ನಡೆಯುವಂತಾಯಿತು. ಇದಕ್ಕೆ ಹೆದರಿದ ಬ್ರಿಟಿಷ್ ಸರ್ಕಾರ ಕಣ್ಣೊರೆಸುವ ಕಾರ್ಯಕ್ಕೆ ಕೈಹಾಕಿ, ಭಗತ್‌ಸಿಂಗ್ ಮತ್ತು ಬಿ. ಕೆ. ದತ್‌ಗೆ ಎಲ್ಲರಿಗಿಂತ ಭಿನ್ನವಾದ ಉತ್ತಮ ಆಹಾರ ನೀಡಲು ಜೈಲು ಅಧಿಕಾರಿಗೆ ಸೂಚನೆ ನೀಡಿತು. ಆದರೆ ಎಲ್ಲ ರಾಜಕೀಯ ಕೈದಿಗಳಿಗೂ ಉತ್ತಮ ಆಹಾರ ನೀಡದಿದ್ದರೆ ತಮಗೂ ಬೇಡವೆಂದು ಇವರು ಸತ್ಯಾಗ್ರಹ ಮುಂದುವರೆಸಿದರು. ಜೈಲು ಅಧಿಕಾರಿಗಳು ಬಲಾತ್ಕಾರದಿಂದ ಆಹಾರ ತಿನ್ನಿಸಲು ಯತ್ನಿಸಿ ವಿಫಲರಾಗಿ, ಹಿಂಸೆ ಮತ್ತು ಅಪಮಾನಕ್ಕೊಳಪಡಿಸಿದರು. ಸಂಕೋಲೆಗಳಿಂದ ಇವರನ್ನು ಬಂಧಿಸಿದರು.

ಭಗತ್‌ಸಿಂಗ್‌ರೊಂದಿಗೆ ಸಹಾನುಭೂತಿ ಉಪವಾಸ ಸತ್ಯಾಗ್ರಹ ಆರಂಭಿಸಿದ್ದ ಬಂಗಾಳದ ಜತೀನ್‌ದಾಸರ ಸ್ಥಿತಿ ತೀರ ಹದಗೆಟ್ಟಿತು. ಔಷಧಿಸೇವಿಸಲೂ ನಿರಾಕರಿಸಿದಾಗ ಹೊರಗಡೆ ರಾಷ್ಟ್ರವ್ಯಾಪಿ ಹಬ್ಬಿದ ಜನಾಂದೋಳನ ಗಮನಿಸಿದ ಸರ್ಕಾರ ಬೆಚ್ಚಿ, ಜೈಲು ವಿಚಾರಣಾ ಸಮಿತಿಯನ್ನು ನೇಮಿಸಿ ಸಂಧಾನ ಮಾಡಿ, ಖೈದಿಗಳಿಗೆ ಮಂಚ, ಮೇಜು, ಕುರ್ಚಿ, ವರ್ತಮಾನ ಪತ್ರಿಕೆಗಳು, ದೀಪ ಇತ್ಯಾದಿಗಳನ್ನು ನೀಡಲು ಒಪ್ಪಿಕೊಂಡಿತು. ಆದರೆ ಜತೀನ್ ದಾಸರು ಮಾತ್ರ ತಮ್ಮ ನಿಲುವನ್ನು ಬದಲಾಯಿಸದೆ ಉಪವಾಸ ಸತ್ಯಾಗ್ರಹ ಮುಂದುವರೆಸಿದರು. "ನನ್ನ ದೇಶಕ್ಕಾಗಿ ಮತ್ತು ರಾಜಕೀಯ ಖೈದಿಗಳ ಸ್ಥಾನಮಾನಗಳು ಉತ್ತಮ ಗೊಳ್ಳಲು ನನಗೆ ಸಾಯಬೇಕೆಂಬ ಇಚ್ಛೆ" ಎಂದು ಔಷಧಿ ಮತ್ತು ನೀರು ವನ್ನೂ ತೆಗೆದುಕೊಳ್ಳದೆ ಹಠ ತಾಳಿದರು. ಭಗತ್‌ಸಿಂಗ್ ಆದಿಯಾಗಿ ಯಾವ ಮಿತ್ರರೂ ಅವರ ನಿಲುವನ್ನು ಬದಲಾಯಿಸಲು ಸಾಧ್ಯವಾಗ ಲಿಲ್ಲ. ಜೈಲು ಅಧಿಕಾರಿಗಳ ಎಲ್ಲಾ ವಿಧಾನಗಳು ನಿಷ್ಫಲವಾಗಿ ೧೯೨೯ರ ಸೆಪ್ಟೆಂಬರ್ ೧೩ರಂದು ಹುತಾತ್ಮನ ಮರಣವನ್ನು ಹೊಂದಿದರು. ಮರಣಕ್ಕೆ ಮುನ್ನ ಅವರಾಡಿದ ತೊದಲು ಮಾತುಗಳು ಅನುಕರಣೀಯ ವಾಗಿವೆ. "ಕಾಳಿಬಾರಿಯಲ್ಲಿ ಬಂಗಾಳದ ಸಂಪ್ರದಾಯದಂತೆ ನನಗೆ ಶವಸಂಸ್ಕಾರ ಕೂಡದು, ನಾನು ಬಂಗಾಳಿಯಲ್ಲ ಭಾರತೀಯ". ಹೀಗೆ ೬೪ ದಿನ ಉಪವಾಸ ಮಾಡಿ, ಅಮರತ್ವ ಪಡೆದ ಜತೀನ್‌ದಾಸರಿಗೆ ಇಡೀ ರಾಷ್ಟ್ರ ಕಂಬನಿ ಹರಿಸಿತು.

ಭಗತ್‌ಸಿಂಗನ ಬಂಧನ ಬದುಕಿನಲ್ಲಿ ಸಾಂಡರ್ಸ್ ಹತ್ಯೆಯ ಮೊಕದ್ದಮೆ ಜೈಲಿನ ಆವರಣದಲ್ಲಿ ಆರಂಭವಾಯಿತು. ಖೈದಿಗಳಿಗೆಲ್ಲಾ ಕೈಕೋಳ ತೊಡಿಸಿ ಕೋರ್ಟಿಗೆ ಕರೆತಂದಂತೆ ೮೦ ದಿನಗಳು ಉಪವಾಸ ಮಾಡಿ ದೈಹಿಕವಾಗಿ ಕೃಶನಾಗಿದ್ದ ಭಗತ್‌ಸಿಂಗನನ್ನು ಕರೆತಂದಾಗ ವಿಶೇಷ ಮ್ಯಾಜಿಸ್ಟ್ರೇಟರೆದುರು ಗುಡುಗಿದ ; "ಪೋಲೀಸರು ನಮಗೆ ಕೈಕೋಳ ತೊಡಿಸುವುದು ತೀರಾ ಅವಮಾನಕರ. ಪೋಲೀಸರು ಮಾಡು

ವುದನ್ನೆಲ್ಲ ಪುರಸ್ಕರಿಸಲು ನೀವಿಲ್ಲಿದ್ದೀರೇನು ? ನಮ್ಮ ಯಾವ ಅಪಪಾಲಿಗೂ ನೀವು ಗಮನ ನೀಡಿಲ್ಲ. ಸರ್ವವಿಧಗಳಲ್ಲೂ ಪೋಲೀಸರ ಅಧೀನದಲ್ಲಿರುವ ನಿಮ್ಮಲ್ಲಿ ನಾವು ವಿಶ್ವಾಸವನ್ನು ಇರಿಸಲಾರೆವು. ಕೈಕೋಳಗಳನ್ನು ತೊಡಿಸಿಕೊಂಡು ಮೊಕದ್ದಮೆಯ ಬಗ್ಗೆ ಟಿಪ್ಪಣಿಗಳನ್ನಾದರೂ ನಾವು ಹೇಗೆ ಮಾಡಿಕೊಳ್ಳುವುದು ? ಪರಸ್ಪರ ಸಂಭಾಷಣೆ ಮತ್ತು ವಿಚಾರ ವಿನಿಮಯಕ್ಕೆ ಅವಕಾಶವಿಲ್ಲವೇನು ? ಈ ನ್ಯಾಯಾಲಯದಿಂದ ನಮಗೆ ನ್ಯಾಯ ದೊರೆಯುವುದು ದೂರದ ಮಾತು. ಈ ಪ್ರಹಸನದ ಅವಶ್ಯಕತೆಯಾದರೂ ಏಕೆ ? ನ್ಯಾಯಾಲಯದ ಅಧ್ಯಕ್ಷರು ನೀವೋ ಅಥವ ಈ ಪೋಲೀಸ್ ಅಧಿಕಾರಿ ಕೆ. ವಿ. ಅಬ್ದುಲ್ ಅಜೀಜ್ ಎಂಬುವನೋ ?"—ಹೀಗೆ ನ್ಯಾಯಾಧೀಶರನ್ನೇ ಪ್ರಶ್ನಿಸಿದ.

ಈತನ ಈ ಧೀರೋದ್ಧತ್ತ ಪ್ರಶ್ನೆ ಮ್ಯಾಜಿಸ್ಟ್ರೇಟರಿಗೆ ಮುಖಭಂಗ ಉಂಟು ಮಾಡಿತು. ಆಗ ಮ್ಯಾಜಿಸ್ಟ್ರೇಟರು, "ಇದು ಆಕ್ರಮಣಕಾರಿ ಮನೋಭಾವ; ರೌಡಿಗಳ ವರ್ತನೆ" ಎಂದು ಹೇಳಿ ಸೂಕ್ತಕ್ರಮ ಕೈಗೊಳ್ಳಲು ಪೋಲೀಸ್ ಸೂಪರಿಂಟೆಂಡೆಂಟ್‌ಗೆ ಆದೇಶ ನೀಡಿದರು.

ಬ್ರಿಟೀಷ್ ಸರ್ಕಾರ ಲಾಹೋರ್ ಪಿತೂರಿ ಮೊಕದ್ದಮೆಯ ಅಪರಾಧಿಗಳಾಗಿದ್ದವರ ಬಗ್ಗೆ ತಾಳಿರುವ ನಿಲುವನ್ನು ಮೊದಲೇ ಕಂಡುಕೊಂಡಿದ್ದ ಭಗತ್‌ಸಿಂಗ್ ಮತ್ತು ಅವನ ಸಂಗಾತಿಗಳು ನ್ಯಾಯಾಲಯವನ್ನು ಅವರ ಕಲಾಪಗಳನ್ನು ಅಣಕದಿಂದ ಕಾಣತೊಡಗಿದರು. ಈ ಯೋಜನೆಯ ರೂವಾರಿ ಭಗತ್‌ಸಿಂಗ್. ಕೋರ್ಟಿನಲ್ಲಿ ಕ್ರಾಂತಿಗೀತೆಗಳನ್ನು ಹಾಡುವುದು, ಘೋಷಣೆಗಳನ್ನು ಕೂಗುವುದರ ಮೂಲಕ ನ್ಯಾಯಾಲಯದ ಕಲಾಪ, ವಿಚಾರಣೆಯೊಂದು ಪ್ರಹಸನವೆಂದು ತೋರಿಸಿಕೊಟ್ಟರು. ಒಮ್ಮೆ ಕೋರ್ಟಿನ ಮುಂದೆ, "ಕಾಕೋರಿ ಹುತಾತ್ಮರ ಸ್ಮರಣಾರ್ಥವಾಗಿ ಗೀತೆಯೊಂದನ್ನು ಹಾಡಲು ಇಂದು ನನಗೆ ಅನುಮತಿ ನೀಡಬೇಕು" ಎಂದು ನಿವೇದಿಸಿಕೊಂಡಾಗ ಕೋರ್ಟು ನಿರಾಕರಿಸಿತು. ಆದರೆ ಭಗತ್‌ಸಿಂಗ್ ಗೀತೆಯೊಂದನ್ನು ಹಾಡಿಯೇ ಹಾಡಿದ. ೧೯೩೦

ಜನವರಿ ೨೬ ರಂದು ಭಗತ್‌ಸಿಂಗ್ ತನ್ನ ಇತರ ಆರೋಪಿಗಳೊಂದಿಗೆ ಕೋರ್ಟಿನಲ್ಲಿ ಲೆನಿನ್ ದಿನಾಚರಣೆಯನ್ನು ಘೋಷಣೆಗಳೊಂದಿಗೆ ಆಚರಿಸುತ್ತಾ, "ಲೆನಿನ್ ದಿನವಾದ ಇಂದು ರಷ್ಯಾದ ದುಡಿಯುವ ಜನಕ್ಕೆ ತಾವು ಅಭಿನಂದನೆಗಳನ್ನು ಸಲ್ಲಿಸಲು ಇಚ್ಛಿಸುತ್ತೇವೆ. ಆದರಿಂದ ನಮ್ಮ ಪರವಾಗಿ ಮಾಸ್ಕೋದಲ್ಲಿರುವ ತೃತೀಯ ಅಂತರರಾಷ್ಟ್ರೀಯದ ಅಧ್ಯಕ್ಷರಿಗೆ ತಂತಿ ಸಂದೇಶವನ್ನು ಕಳುಹಿಸಬೇಕೆಂದು ಆಗ್ರಹಪಡಿಸುತ್ತೇವೆ" ಎಂಬ ಮನವಿ ಮಾಡಿಕೊಂಡರು. ಅದೂ ಕೂಡ ತಿರಸ್ಕರಿಸಲ್ಪಟ್ಟಿತು. ಆಗ ಎಲ್ಲರೂ ಸಾಮೂಹಿಕವಾಗಿ, ಬ್ರಿಟೀಷರಿಂದ ಗಲ್ಲಿಗೇರಿಸಲ್ಪಟ್ಟ ರಾಮ್ ಪ್ರಸಾದ್ ಬಿಸ್ಮಿಲ್ ರಚಿಸಿದ್ದ, "ಸರಫರೋಶಿ ಕೀ ತಮನ್ನಾ ಅಬ್ ಹಮಾರೆ ದಿಲ್ ಮೇ ಹೈ ದೇಖನಾ ಹೈ ಜೋರ್ ಕಿತನಾ ಬಾಜೂ ಯೆ ಕಾತಿಲ್ ಮೆ....". (ಶಿರವನ್ನು ಹರಿದು ಒಪ್ಪಿಸಬೇಕೆಂಬ ಆಶೆ ಇಂದು ಹೃದಯದಲ್ಲಿದೆ, ಶತ್ರುವಿನ ತೋಳಿನಲ್ಲಿ ಎಷ್ಟು ಶಕ್ತಿಯಿದೆ ಎಂಬುದನ್ನು ನೋಡೇ ಬಿಡೋಣ) ಎಂಬ ಗಾನವನ್ನು ಹಾಡಿದರು. ಅಷ್ಟೇ ಅಲ್ಲ ಭಗತ್‌ಸಿಂಗ್ ಒಂದು ತಂತಿ ಸಂದೇಶವನ್ನು ಸಿದ್ಧಗೊಳಿಸಿದ್ದ. "ಲೆನಿನ್ ದಿನವಾದ ಇಂದು ಲೆನಿನರ ಭಾವನೆಗಳನ್ನು ಕಾರ್ಯರೂಪಕ್ಕಿಳಿಸಲು ಯತ್ನಿಸುತ್ತಿರುವ ಎಲ್ಲರಿಗೂ ಹಾರ್ದಿಕ ಶುಭಾಶಯ. ರಷ್ಯ ನಡೆಸುತ್ತಿರುವ ಬೃಹತ್ ಪ್ರಯೋಗ ಯಶಸ್ವಿಯಾಗಲಿ. ಜಾಗತಿಕ ದುಡಿಯುವ ವರ್ಗದೊಂದಿಗೆ ನಮ್ಮ ಧ್ವನಿಯನ್ನು ಕೂಡಿಸುತ್ತೇವೆ. ದುಡಿಯುವ ವರ್ಗ ವಿಜಯೀಯಾಗುತ್ತದೆ, ಬಂಡವಾಳಶಾಹಿಯನ್ನು ಸೋಲಿಸಲಾಗುತ್ತದೆ. ಸಾಮ್ರಾಜ್ಯಶಾಹಿ ನಶಿಸಿ ಹೋಗಲಿ."

ಮೊಕದ್ದಮೆ ಎದುರಿಸುತ್ತಿದ್ದ ಭಗತ್‌ಸಿಂಗನನ್ನು ಜೈಲಿನಿಂದ ಬಿಡಿಸಲು ಬಂಧನಕ್ಕೊಳಗಾಗದೇ ತಲೆತಪ್ಪಿಸಿಕೊಂಡಿದ್ದ ಆಜಾದ್ ಚಂದ್ರಶೇಖರನ ಯೋಜನೆ ಸಫಲವಾಗಲಿಲ್ಲ. ವಿಶೇಷ ನ್ಯಾಯಾಲಯದ ರಚನೆಯ ಕ್ರಮಬದ್ಧತೆ ಪ್ರಶ್ನಿಸಿ ತನ್ನ ವಾದಕ್ಕೆ ಅವಕಾಶ ಕೊಡಬೇಕೆಂದು ಆಗ್ರಹಿಸಿ ೨ ವಾರ ವಿಚಾರಣೆಯನ್ನು ಮುಂದೂಡಲು ಭಗತ್

ಸಿಂಗ್ ಮಾಡಿಕೊಂಡ ಮನವಿಗೆ ಕೋರ್ಟು ಪುರಸ್ಕರಿಸಲಿಲ್ಲ.

ತಂದೆ ಕಿಶನ್ ಸಿಂಗ್, ತನ್ನ ಮಗ ಮರಣದಂಡನೆಗೆ ಗುರಿಯಾಗುವುದು ಖಚಿತವೆಂದು ಭಾವಿಸಿ, ಒಂದು ಅಹವಾಲನ್ನು ನ್ಯಾಯಾಲಯಕ್ಕೆ ಮತ್ತು ವೈಸ್‌ರಾಯ್‌ಗೆ ಕಳುಹಿಸಿ, ಸಾಂಡರ್ಸ್‌ನ ಹತ್ಯೆಯಾದ ದಿನ ಭಗತ್ ಸಿಂಗ್ ಲಾಹೋರ್‌ನಲ್ಲಿ ಇರಲೇ ಇಲ್ಲ, ಇದನ್ನು ಪ್ರಾಮಾಣೀಕರಿಸಲು ತನಗೆ ಅವಕಾಶ ನೀಡಬೇಕು ಎಂದು ಭಿನ್ನವಿಸಿಕೊಂಡ. ಈ ಸಂಗತಿ ತನ್ನ ಸ್ವಾಭಿಮಾನಕ್ಕೆ ಧಕ್ಕೆ ತರುವಂತಹದೆಂದು ಭಾವಿಸಿದ ಭಗತ್‌ಸಿಂಗ್, ಕ್ರಾಂತಿಕಾರಿಯೊಬ್ಬನ ಘನತೆಗೆ ತಕ್ಕಂತೆ ವಿವರವಾಗಿ ತಂದೆಗೆ ಪತ್ರ ಬರೆದು ಪ್ರತಿಭಟಿಸಿದ :

"..ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಜೀವ ನೀವು ತಿಳಿದಿರುವಷ್ಟು ಅಮೂಲ್ಯವಾದುದೇನೂ ಅಲ್ಲ. ನನ್ನ ತತ್ವಗಳನ್ನು ಬದಿಗೊತ್ತಿ ಅದನ್ನು ಉಳಿಸಿಕೊಳ್ಳಬೇಕಾದ ಪ್ರಮೇಯವಂತೂ ಇಲ್ಲವೇ ಇಲ್ಲ. ನನ್ನಷ್ಟೇ ಗಂಭೀರವಾಗಿ ನನ್ನ ಸಂಗಾತಿಗಳೂ ಇದನ್ನು ಎದುರಿಸುತ್ತಿದ್ದಾರೆ. ನಾವೆಲ್ಲಾ ಏಕರೂಪವಾದ ನೀತಿಯನ್ನು ಅಂಗೀಕರಿಸಿದ್ದೇವೆ. ಮುಂದೆಯೂ ಹಾಗೆಯೇ ಉಳಿಯುತ್ತೇವೆ. ವೈಯಕ್ತಿಕವಾಗಿ ಇದಕ್ಕೆ ನಾವು ಬೆಲೆಯನ್ನು ತೆರಲೂ ಸಹ ಸಿದ್ಧರಾಗಿದ್ದೇವೆ.

....ನೀವೂ ದೇಶಭಕ್ತನೆಂಬುದು ನನಗೆ ಗೊತ್ತಿದೆ. ಭಾರತದ ಸ್ವಾತಂತ್ರ್ಯಕ್ಕಾಗಿ ನಿನ್ನ ಜೀವನವನ್ನು ಮುಡುಪಾಗಿಟ್ಟೀದ್ದಿರೀ ಎಂಬುದು ಸರ್ವ ವಿದಿತ. ಆದರೆ ಈ ಸಂದರ್ಭದಲ್ಲಿ ನೀನೇಕೆ ಇಷ್ಟು ಬಲಹೀನತೆಯನ್ನು ಪ್ರದರ್ಶಿಸಿದೆ ? ಇದು ನನಗಂತೂ ಅರ್ಥವಾಗುವುದಿಲ್ಲ."

ಇಂಥ ಮಾತುಗಳನ್ನು ನೇಣಿಗೆ ಹಗ್ಗ ಬೀಳುವ ಸಂದರ್ಭದಲ್ಲಿ ಯಾರಾದರೂ ತನ್ನ ತಂದೆಗೆ ಹೇಳಿಯಾರೆ ? ಇದು ಭಗತ್‌ಸಿಂಗನಂತಹ ಸಿಂಹಕ್ಕೆ ಮಾತ್ರ ಸಾಧ್ಯ.

೧೯೩೦ರ ಅಕ್ಟೋಬರ್ ೭ ರಂದು ನಿರೀಕ್ಷೆಯಂತೆ ನ್ಯಾಯಾಲಯ ತನ್ನ ತೀರ್ಪನ್ನು ಘೋಷಿಸಿತು : "ಉದ್ದೇಶಪೂರ್ವಕವಾದ ಹಾಗೂ ಹೇಡಿತನದ ಹತ್ಯೆಯಲ್ಲಿ ತೊಡಗಿದ್ದನೆಂಬ ಕಾರಣಕ್ಕಾಗಿ ಮತ್ತು ಪಿತೂರಿಯ ಪ್ರಮುಖ ಸದಸ್ಯನಾಗಿದ್ದನೆಂಬ ಕಾರಣಕ್ಕಾಗಿ ಅವನಿಗೆ (ಅಂದರೆ ಭಗತ್‌ಸಿಂಗ್‌ನಿಗೆ) ಸಾಯುವವರೆಗೂ ಕುತ್ತಿಗೆಗೆ ನೇಣು ಹಾಕ ಬೇಕೆಂಬ ಶಿಕ್ಷೆಯನ್ನು ವಿಧಿಸಲಾಗಿದೆ." ಇದೇ ಶಿಕ್ಷೆಯನ್ನು ಸುಖದೇವ್ ಮತ್ತು ರಾಜಗುರುವಿಗೂ ವಿಧಿಸಲಾಯಿತು.

ನ್ಯಾಯಾಲಯ ತೀರ್ಪಿತ್ತ ದಿನ ಭಗತ್‌ಸಿಂಗನನ್ನು ಕೋರ್ಟಿಗೆ ಕರೆತಂದಿರಲಿಲ್ಲ. ಆದ್ದರಿಂದ ಸರ್ಕಾರಿ ವಕೀಲ ಜೈಲಿನ ಸೂಪ ರಿಂಟೆಂಡೆಂಟ್ ಜೊತೆಯಲ್ಲಿ ಭಗತ್‌ಸಿಂಗ್ ಇದ್ದಲ್ಲಿಗೆ ಹೋಗಿ ಮುಜುಗರ ದಿಂದಲೇ ಹೇಳಿದ: "ಸರ್ದಾರ್ ಭಗತ್‌ಸಿಂಗ್, ನನಗೆ ದು:ಖವೆನಿಸುತ್ತಿದೆ ಕೋರ್ಟು ನಿನಗೆ ಮರಣ ದಂಡನೆಯನ್ನು ವಿಧಿಸಿದೆ." ಈ ಮಾತಿಗೆ ಭಗತ್ ಮುಗುಳ್ನಗುತ್ತಾ ಹೇಳಿದ: "ದುಃಖವೆಲ್ಲಿಯದು ? ಮರಣ ದಂಡನೆಯ ಬಗ್ಗೆ ನನಗಾಗಲೇ ತಿಳಿದಿದೆ.

...ಇಂತಹ ಶಿಕ್ಷೆಯು ಯೌವ್ವನದಲ್ಲೇ ಆಗಿ ಬರಬೇಕು. ನನ್ನ ಹಿರಿಯರು ಕಬೀರನ ಮಾತುಗಳನ್ನು ಉದಾಹರಿಸುತ್ತಿದ್ದರು. 'ಪ್ರಪಂಚ ವನ್ನು ಭೀತಿಗೊಳಿಸುವ ಮೃತ್ಯು ನನಗೆ ಆನಂದ ತರುತ್ತದೆ ಏಕೆಂದರೆ ಮರಣಹೊಂದಿದಾಗ ಮಾತ್ರ ಪೂರ್ಣ ಪರಮಾನಂದ ಪಡೆಯಲು ಸಾಧ್ಯ."

ಕೊನೇ ಪ್ರಯತ್ನವಾಗಿ ಪ್ರಾಣಾನುಗ್ರಹ ಪಡೆಯಲು ನ್ಯಾಯಾ ಲಯಕ್ಕೆ ಮನವಿ ಸಲ್ಲಿಸಲು ವಕೀಲರು ಭಗತ್‌ಸಿಂಗನಿಗೆ ಸಲಹೆ ಇತ್ತಾಗ ಅದನ್ನು ನೇರವಾಗಿ ನಿರಾಕರಿಸಿ, "ಅದರ ಅವಶ್ಯಕತೆ ಇಲ್ಲ, ಪ್ರಯೋಜನವೂ ಇಲ್ಲ. ಈ ಸಾಮ್ರಾಜ್ಯಶಾಹೀ ನ್ಯಾಯಾಲಯಗಳಿಂದ ನಾವು ನ್ಯಾಯವನ್ನು ನಿರೀಕ್ಷಿಸುವುದಿಲ್ಲ. ಸದ್ಯದಲ್ಲಿ ಭಾರತದ ಯುವಕರ ರನ್ನು ಬಗ್ಗು ಬಡಿಯಲು ಬ್ರಿಟೀಷ್ ಸರ್ಕಾರ ತೀರ್ಮಾನಿಸಿದಂತಿದೆ.

ಇನ್ನೆಲ್ಲಿಯ ಪ್ರಾಣಾನುಗ್ರಹ! ಈ ಶಿಕ್ಷೆ ಜಾರಿಯಾಗುತ್ತದೆ. ಶತ್ರುವಿನಿಂದ ರಕ್ಷೆಯನ್ನು ಬೇಡುವುದಕ್ಕಿಂತ ಧೈರ್ಯವಾಗಿ ಸಾವನ್ನಪ್ಪುವುದು ಲೇಸು. ಸ್ವಾತಂತ್ರ್ಯ ದೀವಿಗೆಯ ದೀವಟಿಗೆ ನಾನು" ಎಂದು ಪ್ರಾಣಭಿಕ್ಷೆಯನ್ನು ನಿರಾಕರಿಸಿ; ಪಂಜಾಬಿನ ಗೌರ್ನರ್‌ಗೆ ಬೇರೊಂದು ಬೇಡಿಕೆ ಪತ್ರ ಬರೆದ.

"...ನಾವು ಯುದ್ಧಖೈದಿಗಳು. ಈ ಆಧಾರದ ಮೇಲೆ ನಮ್ಮನ್ನು ಯುದ್ಧಖೈದಿಗಳಂತೆ ನಡೆಸಿಕೊಳ್ಳಬೇಕೆಂದು ಆಗ್ರಹಪಡಿಸುತ್ತೇವೆ. ಅಂದರೆ ನಮ್ಮನ್ನು ಗುಂಡಿಕ್ಕಿ ಕೊಲ್ಲಬೇಕೆ ವಿನಃ ಗಲ್ಲಿಗೇರಿಸುವಂತಿಲ್ಲ"- ಎಂದು ವೀರೋಚಿತವಾಗಿ ಸಮರ ಧೀರರಿಗೆ ಕೊಡುವ ಸಾವನ್ನು ಕೊಡಿ ಎಂದು ಕೇಳಿಕೊಂಡಿದ್ದ.

ಇಂಥ ಛಲದ, ಸ್ವಾಭಿಮಾನಿ ದೇಶಭಕ್ತನಿಗೆ ಸಾಮಾನ್ಯ ಅಪರಾಧಿಗೆ ತೋರಿಸುವಂತಹ ಗೌರವವನ್ನು ತೋರಿಸಲಿಲ್ಲ ಬ್ರಿಟೀಷ್ ಸರ್ಕಾರ. ಶಿಕ್ಷಿತನನ್ನು ಗಲ್ಲಿಗೇರಿಸಬೇಕಾದ್ದು ಪ್ರಾತಃಕಾಲದಲ್ಲಿ ಆತನ ಬಂಧುಗಳಿಗೆ ಮೃತ ದೇಹವನ್ನು ಹಿಂತಿರುಗಿಸಿ ಸಂಸ್ಕಾರಕ್ಕೆ ಅವಕಾಶ ನೀಡುವ ಕಿಂಚಿತ್ ಮಾನವೀಯತೆಗಾಗಿ. ಆದರೆ ಈ ಮೂರು ಮಂದಿ ದೇಶ ಪ್ರೇಮಿಗಳಿಗೆ ಸಂಜೆ ಗಲ್ಲಿಗೇರಿಸಿ ಮೃತ ದೇಹಗಳನ್ನು ಸಂಬಂಧಿಕರಿಗೆ ನೀಡದೇ ಹೋಯಿತು.

ಭಗತ್‌ಸಿಂಗ್, ಸುಖದೇವ್ ಮತ್ತು ರಾಜಗುರು ಅವರುಗಳಿಗೆ ಕರಿಯ ಉಡುಪು ಧರಿಸಿ ನೇಣುಗಂಬದತ್ತ ಕರೆದೊಯ್ಯಲು ಜೈಲು ಅಧಿಕಾರಿಗಳು ಬಂದಾಗಲೂ ಸ್ವಾಭಿಮಾನದ ಕಿಡಿ ಸಿಡಿದರು: "ನಾವು ಹಾಗೆ ಮಾಡಲಾರೆವು. ನಾವೇನು ಡಕಾಯಿತರೆ. ಕೊಲೆಗಾರರೆ ಅಥವಾ ಪಾತಕಿಗಳೇ ? ನಾವು ಸರ್ಕಾರದ ಖೈದಿಗಳು. ಸರ್ಕಾರದ ವಿರುದ್ಧ ಹೋರಾಡಿದ ಕ್ರಾಂತಿಕಾರಿಗಳು", ಎಂದು ಕರಿ ಉಡುಪು ಧರಿಸಲು ನಿರಾಕರಿಸಿ, ವಿಶೇಷ ಮೇಲಾಧಿಕಾರಿ ಬರುವಂತೆ ಮಾಡಿಕೊಂಡ ಸ್ವಾಭಿಮಾನಿಗಳು !

ಎಲ್ಲಾ ಖೈದಿಗಳನ್ನು ಅವರವರ ಕೋಣೆಗಳಿಗೆ ತಳ್ಳಿ, ಈ ಮೂರು ಮಂದಿ ದೇಶಭಕ್ತರನ್ನು ಇವರ ಕೋಣೆಗಳಿಂದ ಹೊರ ತಂದರು. ಹೊರಬಂದವರೇ ಘೋಷಣೆಗಳನ್ನು ಕೂಗಿ ಜೈಲಿನಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಇತರ ಖೈದಿಗಳಿಗೆ ತಿಳಿಯುವಂತೆ ಮಾಡಿದರು. "ಇಂಕ್ವಿಲಾಬ್-ಜಿಂದಾಬಾದ್" "ಯೂನಿಯನ್ ಜಾಕ್ ಕೆಳಗಿಳಿಸಿ; ನಮ್ಮ ರಾಷ್ಟ್ರಧ್ವಜ ಮೇಲೇರಲಿ", "ಬ್ರಿಟೀಷ್ ಸಾಮ್ರಾಜ್ಯ ಶಾಹಿಗೆ ಧಿಕ್ಕಾರ" ಇತ್ಯಾದಿ. ಈ ಘೋಷಣೆಗಳಿಗೆ ಕೆಲವು ಕೋಣೆ ಗಳಿಂದ ಮಾರ್ದನಿಗಳು ಮೊಳಗಿದವು.

ನೇಣಿಗೆ ಕೊರಳೊಡ್ಡುವಾಗ ಅಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳಿಗೆ ಈತ ಹೇಳಿದ ಮಾತು ಅಪೂರ್ವವಾದುದು : "ನೀವು ಭಾಗ್ಯಶಾಲಿಗಳು. ಭಾರತದ ಕ್ರಾಂತಿಕಾರಿಗಳು ತಮ್ಮ ಆದರ್ಶದ ಪಾಲನೆಗಾಗಿ ಮೃತ್ಯು ವನ್ನು ಎಷ್ಟು ಸಂತೋಷದಿಂದ ಸ್ವಾಗತಿಸುತ್ತಾರೆಂಬುದನ್ನು ಇಂದು ನೀವು ನಿಮ್ಮ ಕಣ್ಣಿನಿಂದಲೇ ನೋಡುತ್ತಿದ್ದೀರಿ " ಎಂದು ಹೇಳಿ, ತನ್ನ ತಾಯಿ ವೀರಮಾತೆ ಅಪೇಕ್ಷಿಸಿದಂತೆ "ಇಂಕ್ವಿಲಾಬ್-ಜಿಂದಾಬಾದ್" ಘೋಷಣೆ ಯನ್ನು ಕೂಗುತ್ತಲೇ ನೇಣಿಗೆ ಕೊರಳೊಡ್ಡಿದ.

"ಧೀರರು ಸಾವಿಗೆ ಹೆದರುವುದನ್ನು ನಾನೆಂದೂ ಕಂಡಿಲ್ಲ" ಎಂದು ಕ್ರಾಂತಿಕಾರಿ ಕವಿಯೂ ಕ್ರಾಂತಿಕಾರಿ ಗುಪ್ತದಳದ ಸದಸ್ಯನೂ ಆಗಿದ್ದ ಅಶ್ಫಾಕುಲ್ಲಾ ಖಾನ್‌ರ ಹೇಳಿಕೆಯನ್ನು ಈತ ತನ್ನ ಬದುಕಿನಲ್ಲಿ ಆಚರಿಸಿ 'ತನ್ನ ಶಾಶ್ವತತೆ' ಕಂಡುಕೊಂಡ.

ಹೀಗೆ ಈತ ಕಟ್ಟಕಡೆಯ ಗಳಿಗೆಯಲ್ಲೂ ಸಾವಿಗೆ ಹೆದರದೆ ತನ್ನ ಮನೋಧರ್ಮದಲ್ಲಿ ಬದಲಾವಣೆ ಮಾಡಿಕೊಳ್ಳದೆ ರಾಷ್ಟ್ರಕ್ಕಾಗಿ ತನ್ನನ್ನೇ ಅರ್ಪಿಸಿಕೊಂಡು ಹುತಾತ್ಮನಾದದ್ದು ಇತಿಹಾಸದ ಅಮರ ಅಧ್ಯಯನ.

ಭಗತ್‌ಸಿಂಗ್ ಮತ್ತು ಈತನ ಸಂಗಾತಿಗಳ ಬಗ್ಗೆ ಬ್ರಿಟೀಷರಿಗೆ ಇರುವಂತಹ ಆಕ್ರೋಶವಿಲ್ಲದಿದ್ದರೂ ಅಸಮಾಧಾನವಂತೂ ಗಾಂಧೀಜಿ

ಯುವರಿಗೂ ಹಾಗೂ ಅವರ ಅನುಯಾಯಿಗಳಿಗೂ ಇತ್ತೆಂಬುದು ನಿಜ. ಆದರೂ ಈ ಯುವ ಕ್ರಾಂತಿಕಾರಿಗಳು ನಿರಪೇಕ್ಷೆಯಿಂದ ತಾಯ್ನಾಡಿನ ಬಿಡುಗಡೆಗಾಗಿ ತಮ್ಮನ್ನು ತೊಡಗಿಸಿಕೊಂಡಿದ್ದು ಹಾಗೂ ಸುಖೀ ರಾಜ್ಯದ ಕನಸು ಕಂಡಿದ್ದು ಇಡೀ ರಾಷ್ಟ್ರದ ಜನಮನಕ್ಕೆ ಅರ್ಥವಾಗಿತ್ತು. ಅದಕ್ಕಾಗಿ ಈ ಮೂರು ಮಂದಿಗೆ ಬ್ರಿಟೀಷ್ 'ಸರ್ಕಾರ ಮರಣದಂಡನೆ ವಿಧಿಸಿದಾಗ ಸ್ಪಂದಿಸಿದ ರೀತಿಯಂತೂ ಕರುಳು ಮಿಡಿಯುವಂತಹುದು.

ಭಗತ್‌ಸಿಂಗ್ ಮತ್ತು ಈತನ ಅನುಯಾಯಿಗಳಿಬ್ಬರಿಗೆ ನ್ಯಾಯಾಲಯ ಮರಣ ದಂಡನೆ ವಿಧಿಸಿದಾಗ ಇಡೀ ರಾಷ್ಟ್ರದ ಶ್ರೀಸಾಮಾನ್ಯರಾದಿಯಾಗಿ ಎಲ್ಲಾ ದೇಶಪ್ರೇಮಿಗಳು ತಲ್ಲಣಗೊಂಡರು. ಲಾಲಾ ದುನಿಚಂದ್, ಡಾ|| ಗೋಪಿಚಂದ್ ಮತ್ತು ಮದನ ಮೋಹನ ಮಾಳವೀಯರಂತಹ ಧುರೀಣರು ಈ ಕ್ರಾಂತಿಕಾರಿಗಳ ಪ್ರಾಣ ಉಳಿಸಲು ಪ್ರೀವಿ ಕೌನ್ಸಿಲ್ ಹಾಗೂ ವೈಸರಾಯಿಗೆ ಮೊರೆ ಹೊಕ್ಕರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಇದರ ಪರಿಣಾಮವಾಗಿ ರಾಷ್ಟ್ರಾದ್ಯಂತ ಕಿಚ್ಚೆದ್ದಿತು. ಎಲ್ಲೆಡೆಯೂ ಶಿಕ್ಷಿತರ ಪರವಾಗಿ ಚಳುವಳಿಗಳು ನಡೆದವು. ಲಾಹೋರ್ ಸೆಂಟ್ರಲ್ ಜೈಲಿನೆದುರು ಸಹಸ್ರಾರು ಬಡ ಮಹಿಳೆಯರು ಮಕ್ಕಳೊಡನೆ ಬಂದು ಸೇರಿ ಎದೆ ಬಡಿದುಕೊಂಡು ಪ್ರಾಣ ಭಿಕ್ಷೆಗಾಗಿ ಅಂಗಲಾಚಿದರು. ಪತ್ರಿಕೆಗಳು ಜನರ ಪ್ರತಿಭಟನೆಯನ್ನು ವಿವರವಾಗಿ ಪ್ರಕಟಿಸುವುದರ ಮೂಲಕ, ಬ್ರಿಟೀಷ್ ಸರ್ಕಾರದ ಕಣ್ಣು ತೆರೆಸಲು ಪ್ರಯತ್ನಿಸಿದವು. ಲಾಹೋರಿನ 'ದಿ ಟ್ರಿಬ್ಯೂನ್' ಪತ್ರಿಕೆ ಹೀಗೆ ವರದಿ ಮಾಡಿತು: "ಈ ಆಂದೋಳನ ರಾಷ್ಟ್ರವ್ಯಾಪಿಯಾಗಿದೆ. ಅದರಲ್ಲಿ ಪಂಜಾಬಿನ ಲಕ್ಷಗಟ್ಟಲೆ ಜನ ಪಾಲ್ಗೊಂಡಿದ್ದಾರೆ. ಇತರೆ ಪ್ರಾಂತ್ಯಗಳಲ್ಲೂ ಜನ ಅತ್ಯಧಿಕ ಸಂಖ್ಯೆಯಲ್ಲಿ ಈ ಸಂಬಂಧದ ಚಳುವಳಿಯಲ್ಲಿ ಭಾಗವಹಿಸುತ್ತಿದ್ದಾರೆ." ಬ್ರಿಟನ್ನಿನಲ್ಲಿರುವ ಮಂತ್ರಿಗಳಿಗೆ, ಭಾರತದ ವೈಸರಾಯಿಗೆ ಹಾಗೂ ಗೌರ್ನರ್‌ಗೆ ತಂತಿ ಮನವಿಗಳ ಮಹಾಪೂರವೇ ಹರಿಯಿತು. ಬ್ರಿಟನ್ನಿನ ಪಾರ್ಲಿಮೆಂಟಿನಲ್ಲಿಯೂ

ಸಹ ಇದರ ಪ್ರತಿಧ್ವನಿ ಮೊಳಗಿತು. ಲಂಡನ್ನಿನಿಂದ ಭಾರತಕ್ಕೆ ಒಂದು ತಂತಿ ಸಂದೇಶವೂ ಬಂತು. "ಹೌಸ್ ಆಫ್ ಕಾಮನ್ಸ್ ಸ್ವತಂತ್ರ ಕಾರ್ಮಿಕ ಪಕ್ಷ ಸಂಘಟಿಸಿರುವ ಸಂಧಾನದ ಹಿನ್ನಲೆಯಲ್ಲಿ ನಮ್ಮ ಗುಂಪು ಲಾಹೋರ್ ಪಿತೂರಿ ಮೊಕದ್ದಮೆಯ ಖೈದಿಗಳಿಗೆ ಕ್ಷಮೆ ನೀಡ ಬೇಕೆಂದು ಒತ್ತಾಯಿಸುತ್ತದೆ"– ಎಂಬ ಒಕ್ಕಣೆಯಿಂದ ಕೂಡಿತ್ತು. ಭಿತ್ತಿಪತ್ರಗಳು ಎಲ್ಲೆಲ್ಲೂ ಚೆಲ್ಲಾಡಿದವು. ಉರ್ದುವಿನಲ್ಲಿ ಹೊರಡಿಸ ಲಾಗಿದ್ದ ಭಿತ್ತಿ ಪತ್ರದಲ್ಲಿ, "ಪಂಜಾಬಿನ ಪ್ರತೀಕಾರ ಪಕ್ಷ ರಕ್ತವನ್ನು ಸುರಿಸುತ್ತದೆ" ಎಂಬ ಶೀರ್ಷಿಕೆಯಡಿಯಲ್ಲಿ, "ದಿನನಿತ್ಯ ನಡೆಯುತ್ತಿರುವ ದಬ್ಬಾಳಿಕೆಯನ್ನು ಕಂಡು ಭಾರತದ ಧೀರ ಯುವಕರು ಸುಮ್ಮನೆ ಇರಲು ನಾಚುವುದಿಲ್ಲವೆ ? ಭಾರತೀಯ ಸ್ವಾತಂತ್ರ್ಯವನ್ನು ಬ್ರಿಟೀಷರು ಸುಡುತ್ತಿರುವುದನ್ನು ಕಂಡು ನೀವು ರೊಚ್ಚಿಗೇಳುವುದಿಲ್ಲವೆ ? ದೇಶ ಭಕ್ತಿಯ ಭಾವನೆಗಳು ನಿಮ್ಮಲ್ಲಿ ಎಳ್ಳಷ್ಟು ಉಳಿದಿಲ್ಲವೆ ? ಭಗತ್‌ಸಿಂಗ್, ಸುಖದೇವ್ ಮತ್ತು ರಾಜಗುರು ಅವರು ಗಲ್ಲಿಗೇರುವುದನ್ನು ಕಂಡು ನಿಮ್ಮ ಬಗೆಗಿನ ಗೌರವಭಾವನೆ ಪುಟಿದೇಳುವುದಿಲ್ಲವೆ ? ನಿಮ್ಮ ಎಲ್ಲಾ ಭಾವನೆಗಳು ನಶಿಸಿಹೋಗಿದ್ದರೂ ಸಹ ಸರ್ಕಾರದ ಜುಲುಮನ್ನು ಕಂಡು ಸರ್ಕಾರಕ್ಕೆ ಪಾಠ ಕಲಿಸಬೇಕಾದ್ದು ನಿಮ್ಮ ಆದ್ಯ ಕರ್ತವ್ಯ. ಒಬ್ಬ ಯಃಕ ಶ್ಚಿತ್ ಪೋಲೀಸ್ ಅಧಿಕಾರಿಯಾಗಿದ್ದ ಸಾಂಡರ್ಸ್‌ನನ್ನು ಕೊಲೆಮಾಡಿದ್ದಕ್ಕೆ ಇಡೀ ಇಂಗ್ಲೆಂಡಿನಲ್ಲಿ ಉದ್ವಿಗ್ನತೆಯ ಭಾವನೆ ಜ್ವಾಲೆಯಂತೆ ಹಬ್ಬಿದೆ. ಮೂವರು ಸೋದರರನ್ನು ಗಲ್ಲಿಗೇರಿಸಿದರೆ ನಿಮಗೆ ಸ್ವಲ್ಪವೂ ಅವ ಮಾನವೆನಿಸುವುದಿಲ್ಲವೆ ? ಪ್ರತೀಕಾರಕ್ಕಾಗಿ ಏಕೆನ್ನೂ ನೀವು ಮುನ್ನುಗ್ಗುತ್ತಿಲ್ಲ ?

ಭಾರತದ ಒಂದು ಮೂಲೆಯಿಂದ ಇನ್ನೊಂದು ಮೂಲೆಯ ತನಕ ಕ್ರಾಂತಿಯ ಕಿಡಿಯನ್ನೆಬ್ಬಿಸಬೇಕಾದವರು ನೀವು. ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳಿಗೆ ವಿಧಿಸಲಾಗಿರುವ ಮರಣದಂಡನೆಯು ಒಬ್ಬ ಗವರ್ನರ್ ಅಲ್ಲ, ಹತ್ತು ಗವರ್ನರ್‌ಗಳ ಮರಣಕ್ಕೆ ಆದೇಶವಂತಿರ

ಬೇಕು"– ಎಂಬ ಕರಪತ್ರದಲ್ಲಿದ್ದ ಮಾತುಗಳು ಇವರ ಕಾರ್ಯ ಸಾಧನೆಗೆ ವ್ಯಕ್ತಗೊಂಡ ಮಾತುಗಳು.

ಆದರೆ ಈ ಎಲ್ಲಾ ಮನವಿ, ಪ್ರತಿಭಟನೆ, ಮೆರವಣಿಗೆ, ತಳಮಳಗಳು, ಪಾಷಾಣ ಹೃದಯದ ಬ್ರಿಟೀಷ್ ಸರಕಾರಕ್ಕೆನಾಟಲಿಲ್ಲ. ಅದು ತನ್ನ ಅಸಹನೀಯವಾದ ಕಾರ್ಯವನ್ನು ಮಾಡಿಯೇ ತೀರಿತು.

ತಾಯ್ನಾಡಿಗಾಗಿ ನೇಣುಗಂಬವೇರಿದ ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವರ ಬಗ್ಗೆ ಇಡೀ ರಾಷ್ಟ್ರ ಮಾರ್ಚ್ ೨೪ರಂದು ಶೋಕ ದಿನ ಆಚರಿಸಿತು. ಎಲ್ಲೆಡೆ ಶೋಕಸಭೆ ಮೆರವಣಿಗೆಗಳು ನಡೆದು ತ್ಯಾಗಕ್ಕೆ ನಮನ ಮತ್ತು ಅಭಿನಂದನೆಗಳನ್ನು ಸಲ್ಲಿಸಲಾಯಿತು. ದೇಶವಿದೇಶ ಪತ್ರಿಕೆಗಳು ಈ ಮೂವರು ಹುತಾತ್ಮರ ತ್ಯಾಗಮಯ ಜೀವನವನ್ನು ಮುಕ್ತವಾಗಿ ಕೊಂಡಾಡಿದವು. ನ್ಯೂಯಾರ್ಕಿನ 'ಡೈಲಿ ವರ್ಕರ್' ಪತ್ರಿಕೆಯು ತನ್ನ ಸಂಚಿಕೆಯಲ್ಲಿ "ಲಾಹೋರ್‌ನ ಮೂವರು ಖೈದಿಗಳೆಂದು ಪ್ರಸಿದ್ಧಿ ಪಡೆದ ಭಗತ್‌ಸಿಂಗ್, ಸುಖದೇವ್ ಮತ್ತು ರಾಜಗುರು ಅವರು ಭಾರತದ ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಾರರು. ಬ್ರಿಟೀಷ್ ಸಾಮ್ರಾಜ್ಯಶಾಹಿಯ ಹಿತದೃಷ್ಟಿಯಿಂದ ಬ್ರಿಟನ್ನಿನ ಲೇಬರ್ ಪಕ್ಷದ ಸರ್ಕಾರವು ಅವರನ್ನು ಗಲ್ಲಿಗೇರಿಸಿದೆ. ಮ್ಯಾಕ್‌ಡೊನಾಲ್ಡ್‌ನ ನೇತೃತ್ವದ ಈ ಸರ್ಕಾರ ಎಸಗಿರುವ ಅಕ್ಷಮ್ಯ ಘೋರ ಪಾತಕಗಳಲ್ಲಿ ಇದೊಂದು. ರಾಜಕೀಯ ಕಾರಣಗಳಿಗಾಗಿ ಈ ಮೂವರು ಕ್ರಾಂತಿಕಾರಿಗಳ ಮೇಲೆ ಸಲ್ಲದ ಆರೋಪಗಳನ್ನು ಹೊರಿಸಿ, ಈಗ ಅವರನ್ನು ಕೊಲ್ಲಲಾಗಿದೆ. ಬ್ರಿಟೀಷ್ ಸಾಮ್ರಾಜ್ಯಶಾಹಿಯನ್ನು ಉಳಿಸುವ ಯತ್ನದಲ್ಲಿ ಮ್ಯಾಕ್‌ಡೋನಾಲ್ಡನ ಸರ್ಕಾರ ಎಷ್ಟು ಕೀಳು ಮಟ್ಟಕ್ಕೆ ಇಳಿಯಬಹುದೆಂಬುದಕ್ಕೆ ಇದೊಂದು ನಿದರ್ಶನವಾಗಿದೆ" ಎಂದು ಪ್ರಕಟಿಸಿತ್ತು. ಇವರ ಬಗ್ಗೆ ಕಿರು ಹೊತ್ತಿಗೆಗಳು ಬಂದವು. ಗಾಂಧೀಜಿಯೂ ಪ್ರತಿಭಟನೆ ಎದುರಿಸಬೇಕಾಯಿತು. ಲಾಹೋರಿನಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಯಿತು. ಕಲ್ಕತ್ತೆಯಲ್ಲಿ ಪ್ರತಿಭಟನಾ

ಕಾರರಿಗೂ ಪೋಲೀಸರಿಗೂ ಕಾಳಗ ನಡೆದು ೧೪೧ಮಂದಿ ಪ್ರಾಣ ಕಳೆದುಕೊಂಡರು. ೩೪೧ ಮಂದಿ ದಸ್ತಗಿರಿಯಾದರು. ಕೇಂದ್ರ ಶಾಸನ ಸಭೆಯು ಆರ್ಥಿಕ ಮಸೂದೆಯನ್ನು ಚರ್ಚಿಸುತ್ತಿತ್ತು. ಅಬ್ದುಲ್ ರಹೀಂ ಮತ್ತು ಕೋವಾಜೀ ಜಹಾಗೀರ್ ಅಂತಹವರು ಸೇರಿದಂತೆ ಹಲವು ಸದಸ್ಯರು ಸಭಾತ್ಯಾಗ ಮಾಡಿದರು. ಹೀಗೆ ಇಡೀ ಜನ ಸಮುದಾಯದ ಪ್ರೀತಿಗೆ ಹಾಗು ಅನುಕಂಪೆಗೆ ಪಾತ್ರರಾದ ಭಗತ್‌ಸಿಂಗ್ ಸಂಗಾತಿಗಳ ಬದುಕು ಅಮರವಾದುದು.

ಅಧ್ಯಾಯ ೩

ಅಧ್ಯಯನ ಶೀಲ ವ್ಯಕ್ತಿ

ಭಗತ್‌ಸಿಂಗ್ ಬದುಕಿದ್ದು ಅಲ್ಪವಾದರೂ, ಬಾಳಿದ್ದು ಮಾತ್ರ ಬಹು ಮೌಲ್ಯಭರಿತವಾಗಿ. ಕ್ರಿಯಾಶೀಲ ಹೋರಾಟ, ಸಂಘಟನಾ ಚಾತುರ್ಯ, ಧೀರೋದಾತ್ತ ನಿಲುವು, ರಾಷ್ಟ್ರೀಯ ಪ್ರಜ್ಞೆ ಮತ್ತು ಸಮಾಜವಾದದ ಕನಸುಗಳೆಲ್ಲ ಒಬ್ಬನಲ್ಲೇ ಮೈಗೂಡಿಕೊಳ್ಳಲು ಸಾಧ್ಯವಿಲ್ಲ. ಅದರಲ್ಲೂ ಅಲ್ಪ ವಯಸ್ಸಿಗೆ ಈ ಗುಣಗಳನ್ನು ಮೈಗೂಡಿಸಿಕೊಳ್ಳುವುದು ಕಷ್ಟಸಾಧ್ಯವಾದ ಸಂಗತಿ. ಇದನ್ನು ಭಗತ್‌ಸಿಂಗ್ ಸಾಧ್ಯವಾಗಿಸಿಕೊಂಡಿದ್ದು ಸಂಗಾತಿಗಳ ಸ್ನೇಹ ಎಷ್ಟು ಕಾರಣವೋ ಅದಕ್ಕೂ ಮಿಗಿಲಾದದ್ದು ಈತನಲ್ಲಿದ್ದ ಪುಸ್ತಕ ಪ್ರೇಮ.

ಈತನ ಅಧ್ಯಯನಶೀಲತೆಯಾದರೂ ಸಿಕ್ಕಸಿಕ್ಕದ್ದೆಲ್ಲಾ ಮುಕ್ಕಿ ಮನಸ್ಸು ದೇಹಗಳೆರಡನ್ನೂ ಹಾಳು ಮಾಡಿಕೊಳ್ಳುವಂತಹುದಲ್ಲ. ಉನ್ನತೋನ್ನತವಾದ ವೈಚಾರಿಕ, ವೈಜ್ಞಾನಿಕ ಹಾಗೂ ಜೀವನೋತ್ಸಾಹದಿಂದ ಕೂಡಿದ ಕ್ರಾಂತಿಕಾರಿಗಳ ಜೀವನ ಚರಿತ್ರೆ ಹಾಗೂ ವಿಚಾರಧಾರೆಯ ಶ್ರೇಷ್ಠ ಕೃತಿಗಳನ್ನು ಹುಡುಕಿ ಓದಿ ತನ್ನ ಚಿಂತನೆಯನ್ನು ಶ್ರೀಮಂತಗೊಳಿಸಿಕೊಂಡಿದ್ದ.

ಓದು ಮನುಷ್ಯನನ್ನು ಮನುಷ್ಯನನ್ನಾಗಿ ರೂಪಿಸುತ್ತದೆ. ಎಲ್ಲರಿಗಿಂತ ಭಿನ್ನವಾಗಿ ವಿಶಿಷ್ಟವಾಗಿ, ವಿಚಾರಪರನಾಗಿ ಬೆಳೆಯಲು ದಾರಿ

ಮಾಡಿಕೊಟ್ಟು, ಬದುಕಿನ ಎಲ್ಲ ಮುಖಗಳ ದರ್ಶನ ಮಾಡಿಕೊಡುತ್ತದೆ. ವ್ಯಕ್ತಿಯಲ್ಲಿ ಆತ್ಮಸ್ಥೈರ್ಯ, ಸ್ವಾಭಿಮಾನ, ಹೋರಾಟದ ಗುಣ ಮೂಡಿಸುತ್ತದೆ ಎಂಬುದಕ್ಕೆ ಭಗತ್‌ಸಿಂಗ್‌ನೇ ಹೀಗೆ ಹೇಳುತ್ತಾನೆ. "....ನನ್ನ ಮನಸ್ಸಿನ ಮೂಲೆ ಮೂಲೆಗಳಲ್ಲಿ ಅಧ್ಯಯನದ ಕರೆ ಅನುರಣಿಸುತ್ತಿತ್ತು. –'ವಿರೋಧಿಗಳು ಮಂಡಿಸುವ ವಾದವನ್ನು ಎದುರಿಸಲು ಬೇಕಾಗುವ ಯೋಗ್ಯತೆಯನ್ನು ಸಂಪಾದಿಸಲು ಓದು; ನಿನ್ನ ಅಭಿಪ್ರಾಯದ ತರ್ಕಬದ್ಧ ಸಮರ್ಥನೆಗಾಗಿ ಅಭ್ಯಾಸ ಮಾಡು'– ಎಂದು ಒಳಗೆ ಪ್ರತಿಧ್ವನಿಸುತ್ತಿತು," ಅದಕ್ಕಾಗಿ ಓದಲು ಪ್ರಾರಂಭಿಸಿ ಹಳೆಯ ವಿಚಾರಗಳನ್ನೆಲ್ಲ ಪುನರ್ಚಿಂತಿಸಿ, ಹೊಸ ವಿಚಾರಧಾರೆಗಳನ್ನು ಶೋಧಿಸಿಕೊಂಡು ವಾಸ್ತವಪ್ರಜ್ಞೆಯ ವಿಶ್ವಪ್ರೇಮಿಯಾದ.

ಚಿಕ್ಕವನಾಗಿದ್ದಾಗಲೇ ಬೇರೆಲ್ಲಾ ವಿಷಯಗಳಿಗಿಂತ ಆಂಗ್ಲ ಭಾಷೆ, ಉರ್ದು ಮತ್ತು ಸಂಸ್ಕೃತ ಭಾಷೆಗಳಲ್ಲಿ ತುಂಬಾ ಆಸಕ್ತನಾಗಿದ್ದ. ಗಾಂಧೀಜಿಯವರು ವಿದ್ಯಾರ್ಥಿಗಳಿಗೆ ಸರ್ಕಾರಿ ಶಾಲೆಗಳನ್ನು, ಅನುದಾನಿತ ಶಾಲೆಗಳನ್ನು ತೊರೆದು, ಅಸಹಕಾರ ಚಳುವಳಿಯಲ್ಲಿ ತೊಡಗಲು ಕರೆ ಕೊಟ್ಟಾಗ, ಎಲ್ಲರಂತೆ ಈತನೂ ಲಾಹೋರಿನ ಡಿ.ಎ.ವಿ. ಶಾಲೆ ತೊರೆದು ಲಾಲಾ ಲಜಪತರಾಯ್ ಮತ್ತು ಭಾಯಿ ಪರಮಾನಂದ್ ಸ್ಥಾಪಿಸಿದ್ದ ಲಾಹೋರ್ ನ್ಯಾಷನಲ್ ಕಾಲೇಜಿಗೆ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ, ಸೇರಿದ್ದ ಪ್ರತಿಭಾವಂತ ವಿದ್ಯಾರ್ಥಿ ಈತ. ಅಲ್ಲಿ ಹೆಚ್ಚಾಗಿ ಕ್ರಾಂತಿಗಳ ಇತಿಹಾಸ, ಸಮಾಜವಾದ, ರಾಷ್ಟ್ರಪ್ರೇಮದ ಬಗ್ಗೆ ಅಧ್ಯಾಪಕರಿಂದ ಹಾಗೂ ಅಧ್ಯಯನದಿಂದ ತಿಳಿದುಕೊಂಡ.

ಆತನ ಅಧ್ಯಯನಶೀಲತೆ ಹೇಗಿತ್ತೆಂಬುದನ್ನು ಸಹಪಾಠಿ ಶಿವವರ್ಮ ಆಡಿರುವ ಮಾತು ಉಲ್ಲೇಖನೀಯ: "ಅವನು ಹೊರೆ ಹೊರೆ ಪುಸ್ತಕಗಳನ್ನು ಕಂಕುಳಲ್ಲಿ ಇಟ್ಟುಕೊಳ್ಳದೆ ಇದ್ದುದ್ದನ್ನು ನಾನೆಂದೂ ನೋಡಿಯೇ ಇಲ್ಲ. ಬಟ್ಟೆಗಳನ್ನು ಧರಿಸುವುದರಲ್ಲಿ ಅವನಿಗೆ ನಾಜೂಕೆಂಬುದು ಗೊತ್ತಿಲ್ಲ. ಕೆಲವೊಮ್ಮೆ ಹರಿದ ಬಟ್ಟೆಗಳನ್ನು

ತೊಡುವುದೂ ಉಂಟು. ಈ ಹರಿದ ಬಟ್ಟೆಗಳ ಜೇಬಿಗೂ ಅವನು ಯಾವುದಾದರೂ ಪುಸ್ತಕವನ್ನು ತುರುಕಿಕೊಂಡಿರುತ್ತಿದ್ದ.... ಅವನು ಮತ್ತು ಸುಖದೇವ್ ಕೆಲವೊಮ್ಮೆ ಆಗ್ರಾದಲ್ಲಿ ನಾವಿರುತ್ತಿದ್ದ ಗೂಢವಾದ ಜಾಗಕ್ಕೆ ಬರುತ್ತಿದ್ದರು. ಆಗಲೂ ಅವನಲ್ಲಿ ಪುಸ್ತಕದ ಹೊರೆ ಇರುತ್ತಿತ್ತು."

ಈತ ಚಳುವಳಿಗೆ ಧುಮುಕಿದಾಗ ತನ್ನ ಹರಿತವಾದ ವಿಚಾರ ಧಾರೆಗಳನ್ನು ಆಗಾಗ್ಗೆ ಪತ್ರಿಕೆಗಳಲ್ಲಿ ಲೇಖನಗಳ ರೂಪದಲ್ಲಿ ಬರೆಯುವ ಪ್ರೌಢಿಮೆ ಗಳಿಸಿದ್ದ. ಕೀರ್ತಿ ಪತ್ರಿಕೆಯಲ್ಲಿ ಒಮ್ಮೆ ಫ್ರಾನ್ಸಿನ ಕ್ರಾಂತಿಕಾರಿ ಯುವಕ 'ವೆಯ್ಯಾಂತ್'ನನ್ನು ಕುರಿತಾದ ಲೇಖನದಲ್ಲಿ ಇವನ ವಿಚಾರಧಾರೆ ಹರಿದುಬಂದಿರುವುದನ್ನು ಕಾಣಬಹುದು: "ಯುರೋಪಿನಲ್ಲಿ ಉಪಟಳ, ದಮನ ಮತ್ತು ದಬ್ಬಾಳಿಕೆಗಳು ಎಲ್ಲೆ ಮೀರಿ ಹೋಗಿದ್ದವು. ಸರ್ಕಾರ ಮತ್ತು ಅದರ ಪೋಲೀಸ್ ಶಕ್ತಿಯನ್ನೆದುರಿಸಿ ಸೆಣಸಾಡಲು ಅರಾಜಕತಾವಾದಿಗಳು ಮುಂದಾದರು. ಒಂದು ದಿನ ಫ್ರಾನ್ಸಿನ ಅಸೆಂಬ್ಲಿಯಲ್ಲಿ ಸರ್ಕಾರಿ ಪಕ್ಷದವರತ್ತ ವೆಯ್ಯಾಂತ್ ಬಾಂಬೊಂದನ್ನು ಎಸೆದ. ಅದನ್ನು ತಡೆಯಲು ಬಂದ ಮಹಿಳೆಯೊಬ್ಬಳಿಂದಾಗಿ ಬಾಂಬು ಗುರಿಯನ್ನು ಮುಟ್ಟದೆ ಹೋಯಿತು. ಬಾಂಬು ಸಿಡಿದಾಗ ಯಾರೋ ಕೆಲವು ಸದಸ್ಯರು ಗಾಯಗೊಂಡರು ಮಾತ್ರ. ಆದರಿಂದಾಗಿ ಬಾಂಬಿನ ಸಿಡಿತ ಅಷ್ಟಾಗಿ ಪ್ರಭಾವವನ್ನುಂಟು ಮಾಡಲಿಲ್ಲವೆನ್ನಬಹುದು. ಆದರೂ ಆತ ಹೇಳಿಕೆಯೊಂದರಲ್ಲಿ ಸಿಡಿಲಿನಂತೆ ಗರ್ಜಿಸಿ ಹೇಳಿದ: 'ಕಿವುಡನೊಬ್ಬನಿಗೆ ಕೇಳಿಸುವಂತೆ ಹೇಳಬೇಕಾದರೆ ಗಟ್ಟಿಯಾಗಿ ಕೂಗಿ ಹೇಳಬೇಕಾಗುತ್ತದೆ.' ಸರ್ಕಾರವು ಕೊಡಬಹುದಾದ ಯಾವ ಶಿಕ್ಷೆಯೂ ಅವನಲ್ಲಿ ಅಂಜಿಕೆಯನ್ನುಂಟುಮಾಡಲಾರದೆಂದು ಆತ ಅದೇ ಹೇಳಿಕೆಯಲ್ಲಿ ಘೋಷಿಸಿದ. ಬಡವರ ಮೇಲೆ ದಬ್ಬಾಳಿಕೆ ನಡೆಸಿ ಅವರ ರಕ್ತ ಹೀರುತ್ತಿರುವವರ ವಿರುದ್ಧ ಈ ಕ್ರಮ ಕೈಗೊಳ್ಳಬೇಕಾಯಿತೆಂದು

ಅವನು ಸಾರಿದ.... ಕಡೆಗೆ ಅವನಿಗೆ ನೇಣುಗಂಭದ ಶಿಕ್ಷೆ ವಿಧಿಸಲಾಯಿತು."

ವೆಯ್ಯಾಂತ್ ಮಾಡಿದ್ದನ್ನೆ ಭವಿಷ್ಯದಲ್ಲಿ ಈತನೂ ಕೂಡ ಇದೇ ಕೆಲಸ ಮಾಡಿ, ನೇಣುಗಂಬದ ಶಿಕ್ಷೆಗೆ ಗುರಿಯಾದದ್ದು ಕೇವಲ ಕಾಕತಾಳೀಯವಷ್ಟೆ.

ಒಮ್ಮೆ ಪಂಜಾಬ್ ಕೇಸರಿಯಲ್ಲಿ ತಾನು ನೇಣುಗಂಬಕ್ಕೇರುವ ಕೆಲವು ದಿನಗಳ ಮುಂಚೆ ತನ್ನ ಸಂಗಾತಿಯನ್ನು ಉದ್ದೇಶಿಸಿ ಒಂದು ಪತ್ರವನ್ನು ಪ್ರಕಟಿಸಿದ್ದ. ಅದರಲ್ಲಿ ಗಾಂಧೀಜಿಯವರನ್ನು ಕುರಿತು ಎರಡು ವಿಮರ್ಶೆಗಳನ್ನು ಕೊಟ್ಟಿದ್ದ. ಒಂದು ಆಂದೋಳನದ ಸ್ವರೂಪ ಹೇಗಿರಬೇಕೆಂಬುದರ ಬಗ್ಗೆಯಾದರೆ, ಎರಡನೆಯದು ಗಾಂಧೀಜಿಯವರು ೧೯೨೯ರ ಡಿಸೆಂಬರ್ ೩೧ರಂದು ಲಾಹೋರ್ ಕಾಂಗ್ರೆಸ್ ಅಧಿವೇಶದಲ್ಲಿ ಮಾಡಿದ್ದ ಭಾಷಣದ ಬಗ್ಗೆ. ಅದರ ಒಂದು ಭಾಗ ಹೀಗಿದೆ: "ನಮ್ಮ ಪಕ್ಷದ ಧ್ಯೇಯ ಧೋರಣೆಗಳ ಬಗ್ಗೆ ಒಂದು ಮಾತು. ಅದನ್ನು 'ಸಮಾಜವಾದಿ ಗಣತಂತ್ರ' ಸಂಘಟನೆಯೆಂದು ಕರೆದಿದ್ದೇವೆ. ಅಂದರೆ, ಪಕ್ಷದ ಉದ್ದೇಶ ಸಮಾಜವಾದಿ ವ್ಯವಸ್ಥೆಯ ಸಮಾಜವನ್ನು ರಚಿಸುವುದು. ನಮ್ಮ ಪಕ್ಷಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಇರುವ ವ್ಯತ್ಯಾಸ ಇದು: ಬ್ರಿಟೀಷರಿಂದ ಭಾರತೀಯರಿಗೆ ಅಧಿಕಾರವು ವರ್ಗಾಯಿಸಲ್ಪಟ್ಟಾಗ ಕಾಂಗ್ರೆಸ್ಸಿನ ಕೆಲಸ ಮುಗಿದಂತೆ; ಆದರೆ ನಮ್ಮ ಉದ್ದೇಶ ಅಧಿಕಾರವು ಪ್ರತಿಯೊಬ್ಬರಿಗೂ ಲಭಿಸುವಂತೆ ಮಾಡುವುದು. ಸಮಾಜವಾದಿ ವ್ಯವಸ್ಥೆಯನ್ನುಂಟುಮಾಡುವುದು. ಇದಕ್ಕಾಗಿ ದುಡಿಯುವ ಜನತೆಯನ್ನು ಒಗ್ಗೂಡಿಸಬೇಕು. ಲಾರ್ಡ್ ರೆಡಿಂಗ್ ಹೋಗಿ, ಸರ್ ತೇಜ್‌ಬಹದ್ದೂರ್ ಸಪ್ರು ಅಥವಾ ಪುರುಷೋತ್ತಮದಾಸ್, ಠಾಕೂರ್ ದಾಸ್ ಅಧಿಕಾರಕ್ಕೆ ಬರುವುದರಿಂದ ದುಡಿಯುವ ಜನತೆಯ ಆಕಾಂಕ್ಷೆ ಪೂರೈಸುವುದಿಲ್ಲ, ಸಂಪೂರ್ಣ ಸ್ವಾತಂತ್ರ್ಯವೆಂದರೆ ಅದರಲ್ಲಿ ಇದೆಲ್ಲಾ ಅಡಕವಾಗಿದೆಯೆಂಬುದು ನಮ್ಮ ಪಕ್ಷದ ನಿಲುವು, ಸಂಪೂರ್ಣ

ಸ್ವಾತಂತ್ರ್ಯದ ಉದ್ದೇಶವನ್ನು ಸಾರುವ ಲಾಹೋರ್ ಕಾಂಗ್ರೆಸ್ಸಿನ ನಿರ್ಣಯ ಅಂಗೀಕಾರದ ಸಮಯದಲ್ಲೂ ಗಾಂಧೀಜಿ ಹೇಳಿದ್ದರು. 'ಮಾತುಕತೆಗಳಿಂದ ಒಡಂಬಡಿಕೆಗೆ ಬರಲು ನಾವು ಬಾಗಿಲುಗಳನ್ನು ಮುಚ್ಚಿ ಬೀಗಹಾಕಿಲ್ಲ; ಬಾಗಿಲು ಈಗಲೂ ತೆರೆದಿದೆ' ಎಂದು. ಅಂದರೆ, ಅವರ ಹೋರಾಟ ಎಂದಿದ್ದರೂ ಒಂದು ರೀತಿಯ ಒಡಂಬಡಿಕೆಯಲ್ಲಿಯೇ ಮುಕ್ತಾಯವಾಗುವಂತಹದ್ದು ಎಂಬ ಪರಿವೆ ಅವರಿಗಿತ್ತೆಂದಾಯಿತು. ಅವರ ಹೋರಾಟ ಅರ್ಧ ಮನಸ್ಸಿನ ಹೋರಾಟ. ಅದನ್ನೇ ನಾವು ಜಿಗುಪ್ಸೆಯಿಂದ ಕಾಣುವುದು.... ಯುವಕರಿಗೆ ನನ್ನ ಒಂದು ಮನವಿ ಇದು, ದುಡಿಯುವ ಜನರನ್ನು ಇದಕ್ಕಾಗಿ ಒಗ್ಗೂಡಿಸಿ. ನಾಯಕರ ಪ್ರಶ್ನೆ ನಿಮಗೆ ಬೇಡ: ಅವರು ಸಾಕಷ್ಟು ಮಂದಿ ಇದ್ದಾರೆ. ನಮ್ಮ ಪಕ್ಷಕ್ಕೆ ಬೇಕಾಗಿರುವುದು ನಾಯಕರಲ್ಲ, ದುಡಿಯುವ ಜನ...ನನ್ನ ಬಗ್ಗೆ ಒಂದು ಮಾತು; ನಾನೊಬ್ಬ ಭಯೋತ್ಪಾದಕನೆಂದು ಹೇಳಲಾಗುತ್ತಿದೆ: ನಿಜಕ್ಕೂ ನಾನೊಬ್ಬ ಕ್ರಾಂತಿಕಾರಿ.... ಬಾಂಬುಗಳಿಂದಲೇ ನಮ್ಮ ಉದ್ದೇಶವನ್ನು ಸಾಧಿಸಲಾಗದೆಂದು ನನ್ನ ಸ್ಪಷ್ಟ ಅಭಿಮತ... ಬಾಂಬುಗಳನ್ನು ಎಸೆಯುವುದು ಪ್ರಯೋಜನಕರವಲ್ಲ. ಕೆಲವೊಮ್ಮೆ ಅದರಿಂದ ಅಡ್ಡಿಯೂ ಉಂಟಾಗಬಹುದು. ದುಡಿಯುವ ಜನತೆಯನ್ನು ಸಂಘಟಿಸುವುದೊಂದೇ ನಮ್ಮ ಪ್ರಮುಖ ಗುರಿಯಾಗಬೇಕು. ವಿಶೇಷ ಸಂದರ್ಭಗಳಲ್ಲಿ ಬಳಸಲು ಆಯುಧಗಳನ್ನು ಶೇಖರಿಸುವುದು ಪಕ್ಷದ ಮಿಲಿಟರಿ ಶಾಖೆಯ ಕೆಲಸವಾಗಬೇಕು... ಕಡೆಯದಾಗಿ ಯುವಕರಲ್ಲಿ ನಾನು ಕಳಕಳಿಯಿಂದ ಮನವಿಮಾಡಿಕೊಳ್ಳುತ್ತೇನೆ: ಸಮಾಜವಾದಿ ಗಣತಂತ್ರ ರಾಜ್ಯದ ಸ್ಥಾಪನೆಗಾಗಿ ತೀವ್ರಾಶಕ್ತಿಯಿಂದ ದುಡಿಯಿರಿ. ನೀವು ಬಿಮ್ಮೆಟ್ಟದೆ ಹೋರಾಡಿದರೆ ಗುರಿಯನ್ನು ಮುಟ್ಟಿಯೇ ತೀರುತ್ತೀರಿ. ಆದರೆ 'ಕೇವಲ ಒಂದು ವರ್ಷದಲ್ಲಿ' ಅಲ್ಲ. ಅದಕ್ಕೆ ಎಷ್ಟೋ ತ್ಯಾಗದ ಅವಶ್ಯಕತೆ ಇದೆ. ಎಷ್ಟೋ ಸಂಕಷ್ಟದ ಅನುಭವಗಳನ್ನು ಸಹಿಸ

ಬೇಕಾಗುತ್ತದೆ.” ಈ ಮಾತುಗಳಲ್ಲೆಲ್ಲಾ ಗಾಂಧೀಜಿಯವರು ಕಲ್ಪಿಸಿಕೊಂಡಂತೆ ಸ್ವಾತಂತ್ರ್ಯವೆಂಬುದು ಕೇವಲ ಒಂದು ವರ್ಷದಲ್ಲೇ ಕೈಗೆಟಕುವ ಗಂಟಲ್ಲ; ನಿರಂತರ ಹೋರಾಟದ ಫಲವಾಗಿ ಪಡೆಯಬೇಕಾದ್ದು ಎಂಬುದನ್ನು ತಾನು ಕಂಡುಕೊಂಡು. ಗೆಳೆಯರಿಗೆ ನಿವೇದಿಸಿ ಹುರಿದುಂಬಿಸಿದ್ದು ಅವನ ದೂರದೃಷ್ಟಿಗೆ ಸಾಕ್ಷಿಯಾಗಿದೆ.

ಸಾಂಡರ್ಸ್‌ನ ಹತ್ಯೆಮಾಡಿ ತಪ್ಪಿಸಿಕೊಂಡು ಊರುಬಿಟ್ಟು ಹೋಗುವ ಮುಂಚೆ ಸೋಹನ್‌ಸಿಂಗ್–ಜೋಶರನ್ನೊಮ್ಮೆ ಭೇಟಿಯಾಗಿ ಅವರಲ್ಲಿದ್ದ “ಸ್ವಾತಂತ್ರ್ಯ ಮತ್ತು ಉದಾತ್ತ ಸ್ವಾತಂತ್ರ ಹೋರಾಟಗಾರರು” ಎಂಬ ಟಿ. ಸ್ಪ್ರೇಡಿಂಗನು ಸಂಕಲನ ಮಾಡಿದ್ದ ಪುಸ್ತಕವನ್ನು ಓದಿ ಹಿಂದಿರುಗಿಸುವುದಾಗಿ ತನ್ನೊಡನೆ ಒಯ್ದ. ಯಾವ ಕ್ಷಣದಲ್ಲಾದರೂ ಪೋಲಿಸರ ಕೈಗೆ ಸಿಕ್ಕಿ ಬೀಳಬಹುದಾದ ತುರ್ತುಸ್ಥಿತಿ ಸಂದರ್ಭದಲ್ಲೂ ಈತನಿಗಿದ್ದ ಪುಸ್ತಕದವೋಹ ಅಚ್ಚರಿಹುಟ್ಟಿಸುತ್ತದೆ.

ತನ್ನ ಸ್ನೇಹಿತ ಜಯಗೋಪಾಲನಿಗೆ, ತನ್ನ ಸೋದರ ಕುಲಬೀರ್‌ಗೆ ಪತ್ರ ಬರೆದು, “ಜನತೆ ಏಕೆ ಹೋರಾಡುತ್ತಾರೆ ?” “ಎರಡನೇ ಅಂತಾರಾಷ್ಟ್ರೀಯ ಪಥನ”, “ಎಡಪಂಥೀಯ ಸಮಾಜವಾದ, ಸೋವಿಯತ್‌ಗಳ ಕಾರ್ಯಾಚರಣೆ”. “ಪ್ರಾನ್ಸಿನ ಅಂತರ್ ಯುದ್ಧ” “ಚಾರಿತ್ರಿಕ ಭೌತವಾದ ಸಿದ್ಧಾಂತ”, “ರೈತಾಪಿಜನರ ಏಳಿಗೆ ಮತ್ತು ಋಣಭಾದೆ”.... ಈ ಎಲ್ಲಾ ಪುಸ್ತಕಗಳನ್ನು ತರಿಸಿಕೊಂಡು ಓದಿದ. ಇದರಿಂದ ಈತನ ಸೈದ್ಧಾಂತಿಕ ಮತ್ತು ಚಿಂತನೆಯ ಒಲವು ಗಟ್ಟಿಯಾಗಲು ಸಾಧ್ಯವಾಯಿತು.

ಸೆಂಟ್ರಲ್ ಅಸೆಂಬ್ಲಿ ಬಾಂಬ್ ಪ್ರಕರಣದಲ್ಲಿ ಅಪರಾಧಿಯಾಗಿ ಜೈಲಿನಲ್ಲಿದ್ದಾಗ ತನ್ನ ತಂದೆಗೆ ಪತ್ರ ಬರೆದು. “....ನೀವು ನನ್ನನ್ನು ನೋಡಲು ಬರುವುದಾದರೆ ಒಬ್ಬರೇ ಬನ್ನಿ, ಅಮ್ಮನನ್ನು ಕರೆತರಬೇಡಿ. ಅವಳು ನನ್ನನ್ನು ಕಂಡು ದುಃಖಿಸಿ ಅನಾವಶ್ಯಕವಾಗಿ ಅತ್ತಾಳು, ಸಾಧ್ಯವಾದರೆ ಒಂದು ಒಳ್ಳೆಯ ಪುಸ್ತಕ ತನ್ನಿ” ಎಂದು ಹೇಳಿಕೊಂಡಿದ್ದ.

ಜೈಲಿನಲ್ಲಿ ರಾಜಕೀಯ ಕೈದಿಗಳಿಗೆ ಸಲ್ಲಬೇಕಾದ ಸೌಲಭ್ಯಕ್ಕಾಗಿ ಸತ್ಯಾಗ್ರಹ ಆರಂಭಿಸಿ, ಪಂಜಾಬ್ ಜೈಲುಗಳ ಇನ್‌ಸ್ಪೆಕ್ಟರ್ ಜನರಲ್‌ಗೆ ಪತ್ರ ಬರೆದು, ಉಪವಾಸದ ಸಂಗತಿ ಹಾಗೂ ಉದ್ದೇಶವನ್ನು ವಿವರಿಸಿ ಒತ್ತಾಯ ಪೂರ್ವಕವಾಗಿ ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಕಾವ್ಯ, ನಾಟಕ, ಕಾದಂಬರಿ ಮುಂತಾದ ಪ್ರಕಾರಗಳ ಸಾಹಿತ್ಯ ಒದಗಿಸಬೇಕೆಂದು ಆಗ್ರಹಪಡಿಸಿ ಯಶಸ್ವಿಯಾಗಿದ್ದು ಆತನ ಅಧ್ಯಯನಾ ಶಕ್ತಿಗೆ ನಿದರ್ಶನವಾಗಿದೆ.

ಈತ ಹೆಚ್ಚು ಓದಲು ಅವಕಾಶ ದೊರೆತದ್ದು ಜೈಲಿನಲ್ಲಿ 'ನಾನೇಕೆ ನಾಸ್ತಿಕನಾದೆ ?' ಎಂಬ ಕೃತಿಯಲ್ಲಿ ಈತ ಓದಿದ ಪ್ರಮುಖ ಕೃತಿಗಳ ಪಟ್ಟಿಯನ್ನೇ ನೋಡಬಹುದು. ಬಾಕೋನಿನ್‌ನ 'ದೇವರು ಮತ್ತು ರಾಜ್ಯ', ಸಹಜ ಜ್ಞಾನ', ಕಮ್ಯೂನಿಸಮ್ ಪಿತಾಮಹ ಕಾರ್ಲ್ ಮಾರ್ಕ್ಸ್‌ನ ಕೃತಿಗಳು, ಲೆನಿನ್ ಟ್ರಾಟಸ್ಕಿಯವರ ಕೃತಿಗಳು, ಹಿಂದೂ, ಮುಸ್ಲಿಮ್, ಜೈನ ಧರ್ಮಗಳು, ಡಾರ್ವಿನ್‌ನ 'ಜೀವ ವಿಕಾಸ' ಮುಂತಾದುವುಗಳನ್ನು ಅಧ್ಯಯನ ಮಾಡಿದ.

ಈತನಿಗೆ ಸಾವು ಸನ್ನಿಹಿತವಾದಾಗಲೂ ಅಧ್ಯಯನಶಕ್ತಿ ಕುಗ್ಗಿರಲಿಲ್ಲ. 'ದಿ ಟ್ರಿಬ್ಯೂನ್' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವಿಮರ್ಶೆಯೊಂದನ್ನು ಗಮನಿಸಿ, ಆ ಪುಸ್ತಕವನ್ನು ಕಳಿಸಿಕೊಡುವಂತೆ ತನ್ನ ವಕೀಲ ಪ್ರಾಣಾನಾಥ್ ಮೆಹ್ತಾರವರನ್ನು ಕೇಳಿಕೊಂಡ. ಆದರೆ ವಕೀಲರು ಆ ಪುಸ್ತಕ ತಲುಪಿಸಲು ಸಾಧ್ಯವಾದದ್ದು ೧೯೩೧ರ ಮಾರ್ಚ್ ೨೩ರಂದು. ಮಾರನೆಯ ದಿನ ಭಗತ್‌ಸಿಂಗನನ್ನು ಗಲ್ಲಿಗೇರಿಸುವ ಕಾರ್ಯಕ್ರಮವಿದ್ದರೂ, ಒಂದೇ ರಾತ್ರಿಯಲ್ಲಿ ಆ ಪುಸ್ತಕ ಓದಿ ಮುಗಿಸುವ ಹಸಿವು ಅವನಲ್ಲಿತ್ತು. ಆದರೆ ದುರಾದೃಷ್ಟವಶಾತ್ ಮಾರ್ಚ್ ೨೪ರ ಬದಲು ಮಾರ್ಚ್ ೨೩ ರಂದೇ ಬ್ರಿಟೀಷ್ ಸರ್ಕಾರ ತರಾತುರಿಯಲ್ಲಿ ಗಲ್ಲಿಗೇರಿಸಲು ನಿರ್ಣಯ ಕೈಗೊಂಡಿತು.

ಜೈಲು ಅಧಿಕಾರಿ ಬಂದು ಭಗತ್‌ಸಿಂಗ್‌ನ ಕೋಣೆ ಬಳಿ ನಿಂತು. "ಸರ್ದಾರ್‌ಜೀ ನಿಮ್ಮನ್ನು ಗಲ್ಲಿಗೇರಿಸಬೇಕೆಂದು ಅಜ್ಞೆ ಬಂದಿದೆ. ದಯವಿಟ್ಟು ಸಿದ್ಧರಾಗಿ" ಎಂದಾಗ, ಭಗತ್‌ಸಿಂಗ್ ತನ್ನ ಬಲಗೈಯಲ್ಲಿ ಲೆನಿನ್ನರ ಕುರಿತ ಪುಸ್ತಕ ಹಿಡಿದಿದ್ದ. ಆಗ ಪುಸ್ತಕದಿಂದ ತಲೆ ಮೇಲೆತ್ತದೆಯೇ ಎಡಗೈ ಮುಂದಕ್ಕೆ ಚಾಚಿ "ಸ್ವಲ್ಪ ನಿಧಾನಮಾಡು, ನಾನೀಗ ಈ ಪುಸ್ತಕ ಓದುತ್ತಿದ್ದೇನೆ, ಒಬ್ಬ ಕ್ರಾಂತಿಕಾರಿ ಇನ್ನೊಬ್ಬ ಕ್ರಾಂತಿಕಾರಿಯನ್ನು ಸಂಧಿಸುತ್ತಿದ್ದಾನೆ" ಎಂದು ಹೇಳಿ, ಇನ್ನೂ ಕೆಲವು ಸಾಲುಗಳನ್ನು ಓದಿದ ನಂತರ ಪುಸ್ತಕ ಮುಚ್ಚಿ, "ನಡೆಯಿರಿ ಹೋಗೋಣ..." ಎಂದ, ಸಾಯೋ ದಿನವಲ್ಲ; ಸಾಯೋ ಕ್ಷಣದಲ್ಲೂ ಜ್ಞಾನದಾಹವನ್ನು ಇರಿಸಿಕೊಂಡಿದ್ದ ಭಗತ್‌ಸಿಂಗ್ ಎಂತಹ ವಿಚಾರವಂತರಿಗೂ ಅಶ್ಚರ್ಯಕರವಾಗಿ ಕಾಣಿಸುತ್ತಾನೆ.

ಓದಿನಲ್ಲಿ ಇವನಿಗಿದ್ದ ಸ್ಥಿತಪ್ರಜ್ಞತೆ ಹಾಗೂ ಕುತೂಹಲ ಡಾ॥ ಅಂಬೇಡ್ಕರ್‌ರವರ ಓದಿನ ಅಸಕ್ತಿಯನ್ನು ನೆನಪಿಗೆ ತರುತ್ತದೆ. ಅವರು ಈತನಂತೆ ರೈಲು ಪ್ರಯಾಣದಲ್ಲಿ, ಊಟ ಮಾಡುತ್ತಿರಲಿ, ಗೆಳೆಯರೊಂದಿಗಿರಲಿ, ಮಲಗುವ ಕೋಣೆಯಲ್ಲಾಗಲೀ ಸದಾ ಕೈಯಲ್ಲಿ ಪುಸ್ತಕ ಹಿಡಿದೇ ಇರುತ್ತಿದ್ದರೆಂಬುದು ನೆನಪಿಗೆ ಬಂದಾಗ ಹೋರಾಟಗಾರರ ಚಿಂತನೆ ಮತ್ತು ಬದುಕೆಲ್ಲಾ ಒಂದೇ ರೀತಿಯಲ್ಲಿರುತ್ತದೆ ಎನಿಸುತ್ತದೆ.

ಸತತ ಹೋರಾಟದೊಂದಿಗೆ ಓದನ್ನು ಬದುಕಿನ ಅಂಗವಾಗಿ ಕಂಡುಕೊಂಡಿದ್ದ ಈತ ಕೋರ್ಟಿನಲ್ಲಾಗಲಿ, ಜೈಲಿನಲ್ಲಾಗಲೀ, ಜನರ ಮಧ್ಯದಲ್ಲಾಗಲೀ ತನ್ನ ನಿರ್ಭಿಡೆಯ ಸಮರಶೀಲ ವ್ಯಕ್ತಿತ್ವದಿಂದ ಎಲ್ಲರ ಗಮನ ಸೆಳೆದಿದ್ದ. ಗುಲಾಮಗಿರಿಗೆ ತಲೆಬಾಗದೆ, ಅನ್ಯಾಯ ಸೈರಿಸದೆ ಬೆದರಿಕೆಗೆ ಬಗ್ಗದೆ, ಸ್ವಾಭಿಮಾನವನ್ನು ಬಲಿಕೊಡದೆ, ತಲೆಎತ್ತಿ ನಡೆವ ಛಲವನ್ನು ಓದಿನಿಂದ ಪಡೆದು, ತನ್ನೊಂದಿಗೆ ಅದೆಷ್ಟೋ ಯುವಕರನ್ನು

ತನ್ನ ಹಾಗೆ ಬೆಳಸಿ, ದೇಶಸೇವೆಗೆ ತೊಡಗಿಸಿದ ಈತನನ್ನು ಮಹಾನ್ ಸಾಧಕನೆಂದರೆ ತಪ್ಪಾಗಲಾರದು.

ಇಡೀ ಕ್ರಾಂತಿಕಾರಿ ಗುಂಪಿನಲ್ಲಿ ಭಗತ್‌ಸಿಂಗ್‌ನಷ್ಟು ಓದಿನ ಆಸಕ್ತಿ ಹಾಗೂ ಮುಂದಾಲೋಚನೆಯ ಪ್ರಜ್ಞೆ ಹೊಂದಿದವರು ಯಾರೂ ಇರಲಿಲ್ಲ. ಕ್ರಾಂತಿಕಾರಿಗಳಲ್ಲಿ ಅನೇಕ ಕವಿಗಳು, ಬರಹಗಾರರು ಇದ್ದರೂ ಕೂಡ, ಅವರ ಆಲೋಚನೆ ಸೀಮಿತವಾಗಿತ್ತು. ಆದರೆ ಈತ ಪ್ರಬುದ್ಧವಾಗಿ ಚಿಂತಿಸಲು, ಸವಾಲುಗಳಿಗೆ ಉತ್ತರ ನೀಡಲು, ಜನರಿಗೆ ತಮ್ಮ ಸಂಘಟನೆಯ ಧ್ಯೇಯೋದ್ದೇಶಗಳನ್ನು ಕರಪತ್ರಗಳ ಮೂಲಕ ತಲುಪಿಸಲು, ಆಸ್ತಿಕರಿಗೆ ಬಾಯಿ ಮುಚ್ಚಿಸಲು ಈತ ಶಕ್ತಿ ಪಡೆದು ಕೊಂಡಿದ್ದು ವಿಶೇಷ ಅಧ್ಯಯನದಿಂದ.

ನೈಜ ಮಾರ್ಕ್ಸ್‌ವಾದಿ ಮನೋವೃತ್ತಿಯ ಎಲ್ಲ ಮುಖಗಳಾದ ಮಾನವ ಪ್ರೇಮ, ಸೈದ್ಧಾಂತಿಕ ಪ್ರಖರತೆ, ಅತ್ಯುನ್ನತ ನೈತಿಕ ಪ್ರಜ್ಞೆ, ತ್ಯಾಗ ಧೈರ್ಯಗಳೆಲ್ಲವೂ ಈತನಿಗೆ ಗಳಿಯುರಿಂದ ಸಿಗಲಿಲ್ಲ. ಕ್ರಿಯಾ ಶೀಲ ವೈಚಾರಿಕ ಹಾಗೂ ವಿಶ್ಲೇಷಣಾತ್ಮಕರ ವಿಚಾರಧಾರೆಯ ಕೃತಿ ಗಳನ್ನು ಆಶ್ರಯಿಸಿದ್ದರಿಂದ ಎಲ್ಲರೂ ಬೆರಗಾಗುವಂತಹ ಚಿಂತಕನಾಗಲು ಸಾಧ್ಯವಾಯಿತು.

ಎಂತಹ ಜಟಿಲ ವಿಚಾರವನ್ನಾದರೂ ನಿರಾತಂಕವಾಗಿ ವಿಳಿವಳಿ ಯಾಗಿ ಬಿಡಿಸಿ ಅರ್ಥೈಸುವ ಪ್ರಬುದ್ಧತೆ ಈತನದು. ಜನರನ್ನು ಜಾಗ್ರತಿ ಗೊಳಿಸಲು ಸಿದ್ಧಗೊಳಿಸುವ ಕರಪತ್ರಗಳು, ನಿರಭಿಮಾನಿಯನ್ನು ವೀರಾ ಭಿಮಾನಿಯನ್ನಾಗಿ ಮಾಡುವ ಸಿಡಿಲ ನುಡಿಗಳು ಈತನ ಜ್ಞಾನಭಂಡಾರ ದಲ್ಲಿ ತುಂಬಿದ್ದವು. ಜಾಗತಿಕ ಮಟ್ಟದಲ್ಲಿ ಏನೆಲ್ಲಾ ನಡೆದಿವೆ ಎಂಬುದರ ಸ್ಪಷ್ಟತೆಯನ್ನು, ಯಾವ ಯಾವ ಕ್ರಾಂತಿಗಳು ಯಶಸ್ವಿಯಾಗಿ ಜನಪರ ವಾಗಿವೆ ಎಂಬುದನ್ನು, ಸರ್ವಾಧಿಕಾರಿಗಳು ಸೋತು ನೆಲಕಚ್ಚಿರುವು ದನ್ನು, ಜಾಗತಿಕ ಮಟ್ಟದಲ್ಲಿ ಘಟಿಸಿದ್ದ ಉದಾಹರಣೆಗಳೊಂದಿಗೆ, ತನ್ನ ಹರಿತವಾದ ಮಾತುಗಳಿಂದ ಯುವಕರಿಗೆ ತಿಳಿಹೇಳುವುದರಲ್ಲಿ ಯಶಸ್ವಿ

ಯಾಗಿದ್ದ. ಇಡೀ ಕ್ರಾಂತಿಕಾರಿ ಗುಂಪಿನಲ್ಲಿ ಇವನು 'ಅಪ್ರತಿಮ ಜ್ಞಾನಾಸಕ್ತಿಯ ಹೋರಾಟಗಾರ' ಎಂಬುದನ್ನು ಪ್ರಾಮಾಣಿಕವಾಗಿ ಹೇಳಬೇಕಾಗುತ್ತದೆ.

ಹೋರಾಟಗಾರನಿಗೆ ಆವೇಶವಿದ್ದರೆ ಸಾಲದು ವಿವೇಕವಿರಬೇಕು. ಆವೇಶ ಅನರ್ಥಕ್ಕೆಡೆ ಮಾಡಿಕೊಡುತ್ತದೆ. ಆದರೆ ವಿವೇಕ ಸಾಧನೆಗೆ ದಾರಿ ಮಾಡಿ ತೋರಿಸುತ್ತದೆ, ವಿವೇಕದಿಂದಲೇ ಹೋರಾಟದ ಯಶಸ್ಸಿದೆ ಎಂಬುದು ಇದರ ಅರ್ಥವಲ್ಲ, ತನ್ನಲ್ಲಿರುವ ವಿವೇಕಕ್ಕೆ ಹೋರಾಟದ ಶಕ್ತಿ ಬಳಸಿದಾಗ ಅದು ಒಂದು ಶಕ್ತಿಯುತ ಬಾಂಬಿಗಿಂತಲೂ ಬಲಶಾಲಿಯಾಗುತ್ತದೆ; ಎಲ್ಲರಲ್ಲೂ ಹೋರಾಟದ ವಿದ್ಯುತ್ ಸಂಚಾರಗೊಳಿಸಿ ಗುರಿಮುಟ್ಟಲು ನೆರವಾಗುತ್ತದೆ. ಬಹುಶಃ ಭಗತ್‌ಸಿಂಗ್ ಈ ನಿಟ್ಟಿನಲ್ಲಿ ಹೋರಾಟ ಮತ್ತು ಓದನ್ನು ಒಟ್ಟೊಟ್ಟಿಗೆ ರೂಢಿಸಿಕೊಂಡಿದ್ದರಿಂದಲೇ ತನ್ನ ಕಾರ್ಯದಲ್ಲಿ ಹಾಗೂ ಆದರ್ಶದಲ್ಲಿ ಯಶಸ್ವಿಯಾದ. ಎಲ್ಲರ ಪ್ರೀತಿ ಹಾಗೂ ಅನುಕಂಪಕ್ಕೆ ಪಾತ್ರನಾದ. ಯುವಜನಕ್ಕೆ ಸ್ಫೂರ್ತಿಯ ಸಂಕೇತವಾಗಿ ಇತಿಹಾಸದಲ್ಲಿ ಬೆಳ್ಳಿಚುಕ್ಕೆಯಾಗಿ ನಿಂತ,

<u>ಅಧ್ಯಾಯ ೪</u>

ಸಮಯ ಪ್ರಜ್ಞೆಯ ಸಾಹಸ

ಭಗತ್‌ಸಿಂಗ್ ಬದುಕಿದ್ದು ಕೇವಲ ೨೪ ವರ್ಷಗಳಿಗೂ ಕಡಿಮೆ. ಆದರೆ ಆ ಅವಧಿಯಲ್ಲಿ ತಾನು ಭೌತಿಕವಾಗಿ. ಬೌದ್ಧಿಕವಾಗಿ ಮತ್ತು ಸೈದ್ಧಾಂತಿಕವಾಗಿ ಗಳಿಸಿಕೊಂಡ ಹಿರಿಮೆ ಅನನ್ಯವಾದುದ್ದು; ಬೆರಗುಗೊಳಿಸುವಂತದ್ದು; ಈತನ ಬೆಳವಣಿಗೆಯ ಗತಿಯಲ್ಲಿ ತೀವ್ರತೆಯಿತ್ತು, ಖಚಿತತೆಯಿತ್ತು, ಸೋಲರಿಯದ ಛಲವಿತ್ತು.

ಈತ ಹುಟ್ಟು ಹೋರಾಟಗಾರ, ನಿಜ. ಆದರೆ ಎಷ್ಟೋಬಾರಿ ಯೋಜಿತ ಹೋರಾಟಗಳು ವಿಫಲವಾದಾಗ ಸಾವಿಗೆ ಹೆದರದಿದ್ದರೂ, ತಾನು ನಂಬಿದ ಸಿದ್ಧಾಂತಕ್ಕೆ, ತನ್ನವರಿಗಾಗಿ ತನ್ನ ಹೋರಾಟದ ಮುಂದುವರಿಕೆಗಾಗಿ ಬದುಕಲೇಬೇಕಾಗುತ್ತದೆ. ಹೋರಾಟದ ಸಂದರ್ಭದಲ್ಲಿ ಅನೇಕ ಪ್ರಾಣಾಪಾಯದ ಪರಿಸ್ಥಿತಿಗಳು ಈತನಿಗೆ ಎದುರಾದದ್ದುಂಟು. ಆಗೆಲ್ಲಾ ಈತ ತನ್ನ ಕೌಶಲ್ಯಪೂರ್ಣ ತಂತ್ರಗಳಿಂದ ಬ್ರಿಟೀಷ್ ಪೋಲೀಸರ ಕಣ್‌ತಪ್ಪಿಸಿ ಪಾರಾಗಿರುವುದು ಈತನ ಸಮಯ ಪ್ರಜ್ಞೆಯ ಸಾಹಸಕ್ಕೆ ನಿದರ್ಶನವಾಗಿ ಕಂಡುಬರುತ್ತದೆ. ಕ್ರಾಂತಿಕಾರಿ ಗುಪ್ತದಳದಲ್ಲಿ ತೊಡಗಿಸಿಕೊಂಡಿದ್ದ ಈತನಂತೆ ಅನೇಕ ಯುವಕರು ಪ್ರಾಣಾಪಾಯದಿಂದ ಪಾರಾಗಲು ಹೊಂದಾಣಿಕೆಯ ಸ್ನೇಹದೊಂದಿಗೆ ತಲೆಮರೆಸಿಕೊಂಡ ಪ್ರಸಂಗಗಳು ರೋಮಾಂಚಕಾರಿಯಾಗಿವೆ.

ಒಮ್ಮೆ ಲಾಹೋರಿನಲ್ಲಿದ್ದಾಗ ಈತ ಹಳ್ಳಿಗಳ ಪರ್ಯಟನೆಯಲ್ಲಿ ತೊಡಗಿದ್ದ. ಆಗ ಧಾರ್ಮಿಕ ದೇವಾಲಯಗಳಿಗೆ ಸಾರ್ವಜನಿಕರು ನೀಡಿದ್ದ ಹೇರಳ ಹಣ ದುರುಪಯೋಗವಾಗಿದೆ ಎಂದು ರೊಚ್ಚಿಗೆದ್ದು ಆಗ ನಾಭಾ ಪ್ರಾಂತ್ಯದ ಮಹಾರಾಜ ರಿಪುದಮನ್‌ಸಿಂಗ್ ಸಹ ಕಪ್ಪು ಬಾವುಟ ಹಿಡಿದು ಜನರೊಂದಿಗೆ ಹೋರಾಟಕ್ಕಿಳಿದ. ಈಗ ಬ್ರಿಟೀಷ್ ಸರ್ಕಾರ ಹೋರಾಟಗಾರರ ವಿರುದ್ಧ ಗುಂಡು ಹಾರಿಸಿ, ರಾಜನನ್ನು ಬಂಧಿಸಿತು. ಹೀಗೆ ಹೊರಟ ಒಂದು ಚಳುವಳಿಗಾರರ ತಂಡ ಭಗತ್ ಸಿಂಗ್‌ನ ಹಳ್ಳಿಯಾದ ಬಾಂಗಾದ ಮುಖಾಂತರ ಹೋಗುವುದಿತ್ತು. ಜಾಥಾದವರಿಗೆ ತೊಟ್ಟುನೀರೂ ಸಹ ಸಿಕ್ಕದಂತೆ ಮಾಡುವ ಹಟವನ್ನು ಪೊಲೀಸರು ತೊಟ್ಟಿದ್ದರು. ಈ ಜಾಥಾ ಪುರೋಗಾಮಿ ಚಳುವಳಿ ಯಾದರೂ, ಬ್ರಿಟೀಷರ ವಿರುದ್ಧದೆಂದು ಭಾವಿಸಿದ ಈತ, ತನ್ನ ಹಳ್ಳಿ ಯಲ್ಲಿ ಜಾಥಾದವರಿಗೆ ಮೂರು ದಿನಗಳ ಆತಿಥ್ಯನೀಡಿ ರಾಜಕೀಯವಾಗಿ ಮೊಟ್ಟಮೊದಲ ಬಾರಿಗೆ ಭಾಷಣ ಮಾಡಿದ. ಆಗ ಪೋಲೀಸರು ಯಾವುದೋ ನೆಪಮಾಡಿ ಈತನನ್ನು ಬಂಧಿಸಲು ಸಜ್ಜಾದರು, ಇದನ್ನರಿತ ಈತ ರಾತ್ರೋರಾತ್ರಿ ಲಾಹೋರಿಗೆ ತೆರಳಿ, ಅಲ್ಲಿಂದ ದೆಹಲಿ ತಲುಪಿ, ಅಲ್ಲಿ "ವೀರ ಅರ್ಜುನ್" ಎಂಬ ಹಿಂದಿ ಪತ್ರಿಕೆಯ ಬಾತ್ಮೀದಾರ ನಾದ.

ಕಾಲೇಜು ವಿದ್ಯಾರ್ಥಿಯಾಗಿದ್ದಾಗ ಮದುವೆ ನಿರಾಕರಿಸಿ, ಹೋರಾಟದ ದೀಕ್ಷೆ ತೊಟ್ಟು, ಲಾಹೋರ್ ಬಿಟ್ಟು, ಕಾನ್ಪುರಕ್ಕೆ ಬಂದು ಗೆಳೆಯರ ಒತ್ತಾಯದಂತೆ, ತನ್ನ ಹೆಸರನ್ನು "ಬಲವಂತ್" ಎಂದು ಬದಲಾಯಿಸಿಕೊಂಡ. ಪ್ರತಾಪಗಢದಲ್ಲಿ ಒಂದು ಧಾರ್ಮಿಕ ಮೇಳ ನಡೆದಿತ್ತು. ಆಗ ಐವರು ಮಿತ್ರರೊಂದಿಗೆ ಈತ ಹೋಗಿ, "ನನ್ನ ದೇಶದ ಜನಗಳೇ ಎದ್ದೇಳಿ" ಎಂಬ ಶೀರ್ಷಿಕೆಯ ಕರಪತ್ರಗಳನ್ನು ಹಂಚು ವಾಗ ಇಬ್ಬರು ಗೆಳೆಯರು ಪೋಲೀಸ್ ಬೇಹುಗಾರರ ಕೈಗೆ ಸಿಕ್ಕಿಬಿದ್ದರು, ಆಗ ಈತ ಉಪಾಯದಿಂದ ಪೋಲೀಸರ ಗಮನ ಬೇರೆಡೆಗೆ ಸೆಳೆದು

ಅವರಿಗೆ ಚಳ್ಳೆಹಣ್ಣು ತಿನ್ನಿಸಿ, ಸ್ನೇಹಿತರನ್ನು ಬಿಡಿಸಿಕೊಂಡು ಬರುವುದ ರಲ್ಲಿ ಯಶಸ್ವಿಯಾದ.

ಅಜ್ಜಿ ಮೊಮ್ಮಗನಿಗಾಗಿ ಹಂಬಲಿಸಿ ಹಾಸಿಗೆ ಹಿಡಿದಾಗ, ತಂದೆ ಕಿಶನ್‌ಸಿಂಗ್ ಮಗನ ಹುಡುಕಾಟದಲ್ಲಿ ತೊಡಗಿದ್ದರು. ಆಗ ಈತ ಕಾನ್ಪುರವನ್ನು ಬಿಟ್ಟು, ಅಲಿಘರ್ ಬಳಿ ಇದ್ದ ನ್ಯಾಷನಲ್ ಸ್ಕೂಲಿನ ಮುಖ್ಯೋಪಾಧ್ಯಾಯನಾಗಿ ಕೆಲಕಾಲ ಕೆಲಸ ಮಾಡಿದ.

ಸೈಮನ್ ಆಯೋಗದ ಬಹಿಷ್ಕಾರದ ಆಂದೋಲನದಲ್ಲಿ ಭಾಗಿ ಯಾಗಲು ದೆಹಲಿಯಲ್ಲಿ ಗುಪ್ತಸಭೆ ನಡೆಸಿ, ಈತ ತನ್ನಿಬ್ಬರು ಗೆಳೆಯ ರೊಂದಿಗೆ ಭಾಟಿಂಢಾ ಮಾರ್ಗವಾಗಿ ಲಾಹೋರಿಗೆ ಹೊರಡಬೇಕು. ಆದರೆ, ಪೋಲೀಸರ ಸರ್ಪಗಾವಲು ಅಗಾಧವಾಗಿತ್ತು. ಆಗ ಪೋಲೀಸರ ಕಣ್ಣು ತಪ್ಪಿಸಲು ಭಗತ್‌ಸಿಂಗ್ ಪಂಜಾಬಿ ಪೋಲೀಸರ ಸಮವಸ್ತ್ರವನ್ನು ಧರಿಸಿ. ತನ್ನಿಬ್ಬರು ಸಂಗಾತಿಗಳನ್ನು ದೆಹಲಿಯ ರೈಲ್ವೆ ನಿಲ್ದಾಣಕ್ಕೆ ಕರೆ ದೊಯ್ದು, ಬೋಗಿಯೊಂದರಲ್ಲಿ ಕುಳಿತ. ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಒಬ್ಬ ಇವರ ಬೋಗಿಯನ್ನು ಪ್ರವೇಶಿಸಿ ಪ್ರಶ್ನಿಸತೊಡಗಿ ದಾಗ ಸ್ವಲ್ಪವೂ ಅವಕ್ಕಾಗದೆ, ಭಗತ್ ಉತ್ತರ ನೀಡಿದ್ದು ನಾಟಕೀಯ ವಾಗಿಯೂ ಅದ್ಭುತವಾಗಿಯೂ ಇತ್ತು :

"ನೀವೆಲ್ಲ ಎಲ್ಲಿಗೆ ಹೊರಟಿದ್ದೀರಿ ?"

"ಫಿರೋಜ್‌ಪುರಕ್ಕೆ"

"ನೀನು ಯಾವ ಠಾಣೆಯವನು ?"

"ನಿಹಾಲ್‌ಸಿಂಗ್ ವಾಲಾ ಠಾಣೆಯವನು"

"ಬೆಲ್ ನಂಬರ್ ಎಷ್ಟು ?"

"ನೋಡಿ, ೨೩೪೦೫೦"

"ನಿನ್ನ ರೈಲ್ವೆ ಪಾಸೆಲ್ಲಿ ?"

"ನನ್ನ ಸಂಗಡಿಗನಲ್ಲಿದೆ. ಕಚೇರಿಯಲ್ಲಿ ಅದನ್ನು ಟಿಕೆಟ್ಟಾಗಿ ಬದಲಾಯಿಸಿಕೊಂಡು ಬರಲು ಹೋಗಿದ್ದಾನೆ."

"ನಿನ್ನ ಹೆಸರು ?"

"ಕರ್ತಾರ್‌ಸಿಂಗ್."

"ಯಾವ ಕೆಲಸದ ಮೇಲೆ ನೀನಿಲ್ಲಿಗೆ ಬಂದಿದ್ದೀಯೆ ?"

"ಖೈದಿಗಳನ್ನು ಕರೆತಂದಿದ್ದೇನೆ."

ಸರಿ. ಪೋಲೀಸರು ಪಾಸ್ ಅನ್ನು ಬದಲಾಯಿಸಲು ರೈಲ್ವೆ ಕಚೇರಿಗೆ ಯಾರಾದರೂ ಹೋಗಿದ್ದಾರೆಯೋ ಇಲ್ಲವೇ ಎಂಬುದನ್ನು ತನಿಖೆ ಮಾಡಲು ಸಬ್‌ಇನ್‌ಸ್ಪೆಕ್ಟರ್ ಆ ಕಡೆಗೆ ನಡೆದ. ತಕ್ಷಣ ಭಗತ್ ಸಿಂಗ್ ಬೇರೆ ಬೋಗಿಗೆ ಪ್ರವೇಶಿಸಿ, ಸಾಧುವಿನ ವೇಷ ಧರಿಸಿ, ಗೀತೆಯ ಪಠಣದಲ್ಲಿ ತೊಡಗಿದ. ಪೋಲೀಸ್ ಸಮವಸ್ತ್ರದ ಗಂಟನ್ನು ಬೇರೊಂದು ಬೋಗಿಗೆ ಸಾಗಿಸಲು ಏರ್ಪಾಟು ಮಾಡಿದ. ಮುಂದಿನ ನಿಲ್ದಾಣದಲ್ಲಿ ಕರ್ತಾರ್‌ಸಿಂಗ್ ಹೆಸರಿನ ಪೋಲೀಸ್‌ನವನಿಗಾಗಿ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಎಲ್ಲೆಲ್ಲೂ ಹುಡುಕಿ ಸುಸ್ತಾದ.

ಲಾಲಾ ಲಜಪತರಾಯ್ ಹತ್ಯೆಗೆ ಪ್ರತೀಕಾರವಾಗಿ ಸಾಂಡರ್ಸ್‌ನ ಕೊಲೆ ಮಾಡಿದ ಭಗತ್‌ಸಿಂಗ್ ತಲೆಮರೆಸಿಕೊಳ್ಳಲು ಲಾಹೋರ್ ಬಿಡ ಬೇಕಾಯಿತು. ಆಗ ಡಿ.ಎ.ವಿ. ಕಾಲೇಜ್ ಬಿಡುವಾಗ ಗಡ್ಡ ತೆಗೆದು, ಒಳ್ಳೆಯ ಉಣ್ಣೆಯ ಸೂಟ್ ಧರಿಸಿ, ಸ್ನೇಹಿತನ ಎರವಲು ಹ್ಯಾಟ್ ಅನ್ನು ತಲೆಯ ಮೇಲಿರಿಸಿಕೊಂಡು, ಅಧಿಕಾರಿಯಂತೆ ಹೊರಬಂದು, ದುರ್ಗಾದೇವಿಯ ಮನೆತಲುಪಿದ. ಆಕೆಯನ್ನು ಕುರಿತು, "ನೀನು ನಿನ್ನ ಮಗುವಿನೊಂದಿಗೆ ನನ್ನೊಡನೆ ಹೊರಡಲು ಸಿದ್ಧಳಾಗಬಲ್ಲೆಯಾ ? ಲಾಹೋರನ್ನು ಬಿಡಲು ಅದರಿಂದ ನನಗೆ ಅನುಕೂಲವಾದೀತು" ಎಂದು ನೆರವು ಯಾಚಿಸಿದ. ಅದಕ್ಕೆ ಆಕೆ ಮರುಮಾತಿಲ್ಲದೆ ಒಪ್ಪಿಕೊಂಡು, ಭಗತ್‌ಸಿಂಗನ ಹೆಂಡತಿಯಂತೆ, ತನ್ನ ಮಗುವನ್ನೂ ಕರೆದುಕೊಂಡು ಕುದುರೆ ಗಾಡಿಯಲ್ಲಿ ರೈಲು ನಿಲ್ದಾಣಕ್ಕೆ ಬಂದು, ಟಿಕೇಟು ಪಡೆದು ರೈಲ್ವೆ ಡಬ್ಬಿ ಪ್ರವೇಶಿಸಿದರು. ನಿಲ್ದಾಣದಲ್ಲೆಲ್ಲಾ ಪೋಲೀಸರ ದಂಡೇ

ನಡೆದಿತ್ತು. ಆದರೆ, ಹ್ಯಾಟು ಸೂಟಿನ 'ಈ ಸಾಹೇಬನ' ಬಗ್ಗೆ ಅವರಿಗೆ ಗುಮಾನಿ ಬರಲು ಸಾಧ್ಯವಾಗಲೇ ಇಲ್ಲ.

ಲಾಹೋರ್ ಅನ್ನು ಬಿಟ್ಟು ಕಲ್ಕತ್ತೆಗೆ ಪಲಾಯನ ಮಾಡಿದ. ಅಲ್ಲಿ ರೈತಕಾರ್ಮಿಕರ ಅಖಿಲ ಭಾರತ ಸಮ್ಮೇಳನವೊಂದು ನಡೆದಿತ್ತು. ಆ ಸಮ್ಮೇಳನದ ಅಧ್ಯಕ್ಷತೆಯನ್ನು ಸೋಹನ್‌ಸಿಂಗ್ ವಹಿಸಿದ್ದರು. ಅವರನ್ನು ಭೇಟಿ ಮಾಡುವ ಉತ್ಕಟತೆ ಹೆಚ್ಚಾಗಿ ತಾನು ಗಡ್ಡಧಾರಿ ವೇಷದಲ್ಲಿ ಆಯುಕ್ತ್ಯರ್ಮ ಶಾಲೆಯೊಂದರಲ್ಲಿ ಕುಳಿತು, ಸಮ್ಮೇಳನದ ಮಧ್ಯದಲ್ಲೇ ಕರೆ ಕಳಿಸಿ ಸೋಹನ್ ಸಿಂಗರನ್ನು ಕರೆಸಿ, ಸಮ್ಮೇಳನದ ವಿವರವನ್ನೆಲ್ಲಾ ಕೇಳಿ ತಿಳಿದುಕೊಂಡನು. ಕೊನೆಗೆ ಹೊರಡುವಾಗ "ಶ್ರಮಿಕರನ್ನೂ, ರೈತರನ್ನೂ, ಚೆನ್ನಾಗಿ ಸಂಘಟಿಸುವ ಕೆಲಸ ನೀವು ಮಾಡಿ. ಬ್ರಿಟೀಷರ ಆಳ್ವಿಕೆಯನ್ನು ಒಡೆಯುವ ಕೆಲಸ ನಾವು ಮಾಡುತ್ತೇವೆ, ಈ ರೀತಿಯ ಕಾರ್ಯವಿಭಜನೆಯಿಂದ ಭವಿಷ್ಯವನ್ನು ನಾವು ರೂಪಿಸೋಣ" ಎಂದು ಭರವಸೆ ಮಾತನ್ನಾಡಿ, ಸಂಘಟನೆಗೆ ಬೆಂಬಲ ಸೂಚಿಸಿ ಅಲ್ಲಿಂದ ಹೊರಟ.

ಹೀಗೆ ತಾನು ನಂಬಿದ ತತ್ವಕ್ಕಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಭಗತ್‌ಸಿಂಗ್ ಪಟ್ಟಪಾಡು, ತೊಟ್ಟವೇಷ, ಅನುಭವಿಸಿದ ಯಾತನೆಗಳು ಒಂದೇ! ಎರಡೇ!!

ಅಧ್ಯಾಯ ೫

ಮಾನವತಾವಾದಿ

ನಮ್ಮ ರಾಷ್ಟ್ರ ದ್ವಂದ್ವದ ಬದುಕಿನಲ್ಲಿ ಬೆಳೆದು ಬಂದಿದೆ. ಅಲ್ಲಿಹುದು ನಮ್ಮ ಮನೆ ಇಲ್ಲಿ ಬಂದೆ ಸುಮ್ಮನೆ ಎಂಬ ನಿಗೂಢ, ಅವಾಸ್ತವಿಕತೆಯ ಹಂದರದಲ್ಲೆ ನಂಬಿಕೆ ಇಟ್ಟಿರುವ ನಮ್ಮಲ್ಲಿ ಪರ ಲೋಕದ ಕಲ್ಪನೆಗೆ ಸಿಕ್ಕಿರುವಷ್ಟು ಪ್ರಾಮುಖ್ಯತೆ ಇಹಲೋಕದ ಬದುಕಿಗೆ ಸಿಕ್ಕಿಲ್ಲ. ಇದೆಲ್ಲಾ ಕೆಲವು ಜನ, ಹಲವು ಜನರಿಂದ ಹೊಟ್ಟೆ ತುಂಬಿಸಿಕೊಳ್ಳಲು ಮಾಡಿದ ಹುಸಿ ವಾದ. ಈ ಹುಸಿ ವಾದದ ಚಿಪ್ಪೊಡೆದು ಒಳಗಿನ ಪೊಳ್ಳುತನ ಬಯಲು ಮಾಡುವುದು ಅತಿ ಕಠಿಣ ವಾದುದು. ಏಕೆಂದರೆ ನಮ್ಮನ್ನು ಹಿಂದಿನಿಂದಲೂ ಬಿಗಿದು ಬಂಧಿಸಿ ರುವ ನಂಬಿಕೆಗಳು ಕೊಡವಿದಾಗ ಉದುರುವಂತಹುವಲ್ಲ. ವಜ್ರವನ್ನು ವಜ್ರದಿಂದಲೇ ಕತ್ತರಿಸಬೇಕೆಂಬ ಮಾತಿನಂತೆ, ಸಮರ್ಥ ವಿಚಾರವಾದ ದಿಂದ ಬಲಿಷ್ಠ ಅವಿಚಾರಗಳನ್ನು ನಾಶಗೊಳಿಸಬೇಕು. ಇದಕ್ಕೆ ವೈಚಾರಿಕ ಚಿಂತನೆ, ಸಮೂಹ ಪ್ರಜ್ಞೆ ಬಹಳ ಮುಖ್ಯ. ಈ ಕೆಲಸವನ್ನು ಒಬ್ಬ ವ್ಯಕ್ತಿ ಸಾಧಿಸಿ ತೋರಿಸುವುದು ಕಷ್ಟ. ಆದರೆ ಮಾತಿನಲ್ಲಿ ಹೇಳುವುದು ಸುಲಭ, ಈ ಕೆಲಸವನ್ನು ಭಗತ್‌ಸಿಂಗ್ ದಿಟ್ಟತನದಿಂದ ಮಾಡಿ ತೋರಿಸಿದ.

ವಾಸ್ತವವಾಗಿ ಭಗತ್‌ಸಿಂಗ್ ಸಂಪ್ರದಾಯ ಕುಟುಂಬದಿಂದ

ಬಾವವನು. ತನ್ನ ತಂದೆ, ತಾಯಿ ಆದಿಯಾಗಿ ಎಲ್ಲರೂ ಆಸ್ತಿಕರಾಗಿದ್ದರು. ಆರ್ಯಸಮಾಜದ ಏಳಿಗೆಗಾಗಿ ಸಕ್ರಿಯವಾಗಿ ಶ್ರಮಿಸಿದ್ದರು. ಇಂಥ ಕುಟುಂಬದಲ್ಲಿ ಹುಟ್ಟಿದ ಈತ ಬಾಲಕನಾಗಿದ್ದಾಗ ದೇವರ ಆರಾಧಕನಾಗಿದ್ದು ಗಂಟೆಗಟ್ಟಲೆ ಗಾಯತ್ರಿ ಮಂತ್ರವನ್ನು ಪಠಿಸುತ್ತಿದ್ದ. ಪ್ರಾಥಮಿಕ ಶಿಕ್ಷಣ ಮುಗಿಸಿ, ಲಾಹೋರಿನ ಡಿ.ಎ.ವಿ. ಸ್ಕೂಲಿನಲ್ಲಿ ಸೇರಿಕೊಂಡಾಗ ವಿದ್ಯಾರ್ಥಿನಿಲಯದಲ್ಲಿ ಉಳಿದುಕೊಂಡಿದ್ದ. ಅಲ್ಲಿ ಪ್ರತಿದಿನ ಮುಂಜಾನೆ ಮತ್ತು ಸಂಜೆ ನಡೆಯುತ್ತಿದ್ದ ಪ್ರಾರ್ಥನೆಯಲ್ಲಿ ತಪ್ಪದೆ ಭಾಗಿಯಾಗುತ್ತಿದ್ದ. ಇದಕ್ಕೆ ತನ್ನ ಕುಟುಂಬದವರ ಸಲಹೆ ಸೂಚನೆಯೂ ಕಾರಣವಾಗಿತ್ತು.

ಈತನ ಸಂಗಾತಿಗಳೆಲ್ಲಾ ಹೆಚ್ಚು ಕಡಿಮೆ ಆಸ್ತಿಕರು, ಪಕ್ಕಾ ಶ್ರದ್ಧಾವಂತರು, ಅಷ್ಟೇ ಅಲ್ಲ ದೇವರ ಬಗ್ಗೆ ಕೃತಿ ರಚಿಸಿದ ಧುರೀಣರೂ ಉಂಟು. "ಕಾಕೋರಿ ಒಳಸಂಚು" ಮೊಕದ್ದಮೆಯಲ್ಲಿ ಅಪರಾಧಿಯೆಂದು ತೀರ್ಮಾನಿಸಲ್ಪಟ್ಟು, ಆಜೀವ ಜೈಲು ಶಿಕ್ಷೆಗೊಳಗಾಗಿದ್ದ ಕಾಂಬ್ರೇಡ್ ಸಚ್ಚಿಂದ್ರನಾಥ್ ಸನ್ಯಾಲ್ ತಮ್ಮ ಪ್ರಸಿದ್ಧ ಕೃತಿ 'ಬಂಧನದ ಬದುಕು'ನಲ್ಲಿ ದೇವರ ಮಹಿಮಾ ಗುಣಗಳನ್ನು ಧಾರಾಳವಾಗಿ ಕೊಂಡಾಡಿದ್ದಾರೆ. ಕಾಕೋರಿ ಮೊಕದ್ದಮೆಯ ನಾಲ್ಕು ಜನ ಪ್ರಸಿದ್ಧ ಹುತಾತ್ಮರು ತಮ್ಮ ಕೊನೆಯ ದಿನಗಳನ್ನು ಭಜನೆ ಪ್ರಾರ್ಥನೆಯಲ್ಲಿ ಕಳೆದಿದ್ದರು. ಸಮಾಜವಾದ, ಸಾಮ್ಯವಾದದ ಆಳವಾದ ಅಧ್ಯಯನ ಮಾಡಿದ ಮೇಲೂ, ತಮ್ಮ ಆರ್ಯ ಸಂಪ್ರದಾಯದ ನಂಬಿಕೆಯಂತೆ ರಾಜನ್ ಲಾಹಿಡಿಯವರು ಉಪನಿಷತ್ ಮತ್ತು ಗೀತೆಯ ಶ್ಲೋಕಗಳನ್ನು ಹಾಡುವುದನ್ನು ಬಿಡಲಾಗಲಿಲ್ಲ. ಹೀಗೆ ಈತನ ಒಡನಾಡಿಗಳೆಲ್ಲರೂ ಕಟ್ಟಾ ಸಂಪ್ರದಾಯವಾದಿಗಳಾಗಿ, ದೈವಭಕ್ತರಾಗಿದ್ದರು. ಇಂತಹವರೊಡನಿದ್ದೂ ಕೂಡ ಈತ ನಾಸ್ತಿಕನಾದದ್ದು ಅದ್ಭುತವೆನ್ನಿಸುತ್ತದೆ.

"ನಾನೇಕೆ ನಾಸ್ತಿಕನಾದೆ ?" ಎಂಬುದರಲ್ಲಿ ತನ್ನ ಗುಣ ಸ್ವಭಾವದ

ಬಗ್ಗೆ ವಿಸ್ತಾರವಾಗಿ ಹಾಗೂ ವಿಮರ್ಶಾತ್ಮಕವಾಗಿ ಹೇಳಿದ್ದಾನೆ: "ಅಸಹಕಾರ ಆಂದೋಳನದ ದಿನಗಳಲ್ಲಿ ನಾನು ರಾಷ್ಟ್ರೀಯ ಕಾಲೇಜಿನಲ್ಲಿ ಪ್ರವೇಶ ಪಡೆದುಕೊಂಡೆ. ಇಲ್ಲಿ ಬಂದ ಮೇಲೆಯೇ ದೇವರ ಅಸ್ತಿತ್ವದ ಪ್ರಶ್ನೆಯನ್ನೊಳಗೊಂಡು ಇನ್ನಿತರ ಧಾರ್ಮಿಕ ಸಮಸ್ಯೆಗಳನ್ನು ಕುರಿತು ತುಸು ಉದಾರವಾಗಿ ಯೋಚಿಸಲು ತೊಡಗಿದೆ. ಆದರೂ ಇನ್ನೂ ನಾನೊಬ್ಬ ಪಕ್ಕ ಆಸ್ತಿಕನಾಗಿದ್ದೆ. ಅಲ್ಲಿಯವರೆಗೆ ನಾನು ಸಮೃದ್ಧವಾಗಿ ಬೆಳೆದ ನನ್ನ ತಲೆಗೂದಲನ್ನು ಒಪ್ಪ–ಓರಣವಾಗಿ ಇಟ್ಟುಕೊಳ್ಳಲು ಶುರುಮಾಡಿದ್ದೆ. ಆದರೂ ನನಗೆ ಸಿಖ್ ಮತ್ತು ಇನ್ನಿತರ ಧರ್ಮಗಳ ಪ್ರಾಮಾಣಿಕತೆ ಹಾಗೂ ಸಿದ್ಧಾಂತಗಳಲ್ಲಿ ಸಂಶಯ ತಲೆದೋರುತ್ತಿತ್ತು. ಆದರೆ ದೇವರ ಅಸ್ತಿತ್ವದಲ್ಲಿ ಮಾತ್ರ ದೃಢವಾದ ನಿಷ್ಠೆ ಇತ್ತು"– ಈ ಮಾತುಗಳಿಂದ ಈತನಲ್ಲಿ ಬಂಡೆಯಂತೆ ಭದ್ರವಾಗಿದ್ದ ನಂಬಿಕೆಯನ್ನು ಪ್ರಶ್ನಿಸುವ ಪ್ರಥಮ ಪ್ರಯತ್ನದ ಲಕ್ಷಣಗಳು ಕಾಣುತ್ತವೆ.

ವಿಚಾರವಾದಿಗೆ ಸಂಶಯ ಮತ್ತು ಸಂದೇಹಗಳು ತನ್ನನ್ನು ಭದ್ರ ನೆಲೆಗೆ ಕೊಂಡೊಯ್ಯುವ ಸಾಧನಗಳಾಗುತ್ತವೆ. ಈತ ತನ್ನಂಥ ಕ್ರಾಂತಿಕಾರಿಗಳೊಡನೆ, ತನ್ನ ಸಂಶಯ ಸಂದೇಹಗಳನ್ನು ಕೆದಕುವುದನ್ನು ಮುಂದುವರೆಸಿದ. ಆದರೆ ಈತನ ಬಹಳಷ್ಟು ಮಿತ್ರರು ಆಸ್ತಿಕರೇ ಆಗಿದ್ದರು. ಕೆಲವರು ಬಾಯಲ್ಲಿ ನಾಸ್ತಿಕರಂತೆ ಮಾತನಾಡಿದರೂ ಅಂತರಂಗದಲ್ಲಿ ಆಸ್ತಿಕರಾಗಿದ್ದರು. ಒಮ್ಮೆ ತನ್ನ ಮುಖಂಡರೊಬ್ಬರಿಗೆ (ದೇವರ ಬಗ್ಗೆ ಖಚಿತವಾದ ನಂಬಿಕೆ ಇರದೇ ಇದ್ದರೂ, ಅವರು ದೇವರನ್ನು ಅಲ್ಲಗಳೆಯುತ್ತಿರಲಿಲ್ಲ.) ಹಠಮಾರಿತನದಿಂದ ದೇವರ ಬಗ್ಗೆ ಕೇಳಿದಾಗ, "ನಿನ್ನ ಮನಸ್ಸಿಗೆ ಬೇಕೆಂದಾಗ ಪೂಜೆ ಪ್ರಾರ್ಥನೆ ಮಾಡು ಅಷ್ಟೆ" ಎಂದು ಹೇಳಿದರು. ಹೀಗಾಗಿ ಈತನ ಸಂಶಯಗಳಿಗೆ ಖಚಿತ ಉತ್ತರ ಸಿಗಲಿಲ್ಲ. ಆದರೂ ಛಲ ಬಿಡದೆ ಜೊತೆಗಾರರಿಂದ ದೊರಕ

ಲಾರದ್ದನ್ನು, ವೈಚಾರಿಕ ಗ್ರಂಥಗಳ ಮೊರೆಹೊಕ್ಕು ಪಡೆದುಕೊಂಡ.

"ನಾನು ಓದಲು ಪ್ರಾರಂಭಿಸಿದೆ. ಇದರಿಂದ ನನಗೆ ಹಳೆಯ ವಿಚಾರಗಳೆಲ್ಲಾ ಅಪ್ರಸ್ತುತವಾಗಿ ಬದಲಿಯಾದವು. ನನ್ನ ಹಳೆಯ ಸ್ನೇಹಿತರಲ್ಲಿ ಅತ್ಯಂತ ವ್ಯಾಪಕವಾಗಿ ಮನೆಮಾಡಿಕೊಂಡಿದ್ದ ಹಿಂಸಾ ಮಾರ್ಗವನ್ನು ಅನುಸರಿಸುವ ಆಕರ್ಷಣೀಯ ಸ್ಥಾನದಲ್ಲಿ ಗಂಭೀರ ವಿಚಾರಗಳು ಒಡಮೂಡಿದವು. ಇನ್ನು ಮೇಲೆ ನನ್ನಲ್ಲಿ ರಹಸ್ಯವಾದವಾಗಲಿ- ಅಂಧಶ್ರದ್ಧೆಯಾಗಲಿ ಲವಲೇಶವೂ ಉಳಿಯಲಿಲ್ಲ. ಯಥಾರ್ಥವಾದ (ರಿಯಾಲಿಜಮ್)ವೇ ನನ್ನ ಬದುಕಿನ ನಂಬುಗೆಯಾಯಿತು. ಬೇರೆ ಯಾವುದೇ ದಾರಿ ಕಾಣದೇ ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ಹಿಂಸಾ ಮಾರ್ಗ ನ್ಯಾಯ ಸಮ್ಮತವೆನಿಸುತ್ತದೆಂಬುದು ಮನದಟ್ಟಾಯಿತು. ಅಹಿಂಸೆಯು ಎಲ್ಲಾ ಜನಾಂದೋಲನಗಳ ಅನಿವಾರ್ಯ ಸಿದ್ಧಾಂತವಾಗಬೇಕೆಂಬುದೇ ನನ್ನ ನಂಬಿಕೆ. ಇದು ಸಾಧನೆಯ ಮಾತಾಯಿತು. ಎಲ್ಲಕ್ಕಿಂತಲೂ ಮಹತ್ವದ್ದೆಂದರೆ, ನಾವು ಯಾವ ಆದರ್ಶಕ್ಕಾಗಿ ಹೋರಾಡುತ್ತಿದ್ದೇವೆಯೋ ಅದನ್ನು ನಾವು ಸ್ಪಷ್ಟವಾಗಿ ತಿಳಿದಿರಬೇಕು"- ಇಂಥ ವೈಚಾರಿಕ ಚಿಂತನೆಯಿಂದ ಅಭ್ಯಾಸದಲ್ಲಿ ತೊಡಗಿದ ಭಗತ್‌ಸಿಂಗ್‌ಗೆ ದೊರಕಿದ ಕೃತಿಗಳೂ ಕೂಡ ಅಷ್ಟೇ ಸಹಾಯಕವಾದವು.

ವಿಶ್ವದ ಶ್ರೇಷ್ಠ ಕ್ರಾಂತಿಕಾರಿಗಳಾದ ಲೆನಿನ್, ಟ್ರಾಟಸ್ಕಿ ಬದುಕು, ಬರಹ ಆದರ್ಶಗಳನ್ನು; ಸಾಮ್ಯವಾದಿ ಸಿದ್ಧಾಂತದ ಪಿತಾಮಹಾ ಕಾರ್ಲ್‌ಮಾರ್ಕ್ಸ್‌ರ ಕೃತಿ, ಅರಾಜಕತಾವಾದಿ ಬಕುನಿನನ್ನು ಆಳವಾಗಿ ಅಭ್ಯಾಸ ಮಾಡಿದ. ಇವರೆಲ್ಲರೂ ನಾಸ್ತಿಕರಾಗಿದ್ದರು. ಈತನ ಹಿಂಗದ ಸಂಶಯುಕ್ತ ಕೃತಿಗಳು ನೇರವಾಗಿ ನಾಸ್ತಿಕವಾದದಲ್ಲಿ ತೀವ್ರ ಆಸಕ್ತಿ ಮೂಡಿಸಿದವು. ಸತತ ಅಧ್ಯಯನ ಹಾಗೂ ಚಿಂತನೆಗಳಿಂದ, "ಗರ್ಭಾಂತರ ಕೊನೆಯಲ್ಲಿ ಈ ವಿಶ್ವವನ್ನು ಹುಟ್ಟಿಸಿ, ಅದರ ಸಂಚಾಲನ ದಿಗ್ದರ್ಶನ ಮಾಡುತ್ತಿರುವನೆಂದು ಬಾ..ಯಲಾದ ಓರ್ವ ಸರ್ವಶಕ್ತ ಪರಮಾತ್ಮನ

ಕಲ್ಪನೆ ಕೇವಲ ಒಂದು ಪೊಳ್ಳು ಹರಟೆ ಎಂಬುದು ನನಗೆ ಮನದಟ್ಟಾ ಯಿತು. ಈಗ ನಾನೊಬ್ಬ ನಾಸ್ತಿಕನಾಗಿದ್ದೆ. ನಾನೂ ನನ್ನ 'ಅವಿಶ್ವಾಸ ವನ್ನು' ಜಾಹೀರುಪಡಿಸಿದೆ"– ಎಂದು ತನ್ನೊಳಗಿನ ಪರಿವರ್ತನೆ ಯನ್ನು ಹೇಳಿದ್ದಾನೆ.

ಸ್ವರ್ಗ ನರಕಗಳ ಕಲ್ಪನೆಯಿಂದ ದೂರ ಸರಿದು ನಿಲ್ಲುವಂತ ಪ್ರಬುದ್ಧ ಚಿಂತಕನಾಗಿದ್ದಾಗಲೂ, ಜನರು ದೇವರಲ್ಲಿ ಇಡುವ ನಂಬಿಕೆಯಿಂದ ಕಷ್ಟವನ್ನು ಅನುಭವಿಸುವ ಮನಸ್ಸಿನ ಭಾರವನ್ನು ಕಡಿಮೆ ಮಾಡಿಕೊಳ್ಳ ಬಲ್ಲರೇ ಹೊರತು, ಕಷ್ಟಗಳನ್ನು ಕಡಿಮೆ ಮಾಡಿಕೊಳ್ಳುವುದಾಗಲೀ, ನಿವಾರಿಸಿಕೊಳ್ಳುವುದಾಗಲೀ ಸಾಧ್ಯವಾಗದು ಎಂಬ ನಿಲುವು ಈತನದು. "ನಮ್ಮ ಪೂರ್ವಜರು ಒಬ್ಬ ಪರಮಾತ್ಮ ಅಥವ ಒಬ್ಬ ಸರ್ವಶಕ್ತನಲ್ಲಿ ನಂಬಿಕೆಯನ್ನು ಇಟ್ಟುಕೊಂಡಿದ್ದರು ಎಂಬ ಕಾರಣಕ್ಕಾಗಿಯೇ ಯಾವ ನಾದರೂ ಒಬ್ಬ ವ್ಯಕ್ತಿ ಈ ನಂಬಿಕೆಯ ಸತ್ಯತೆಯನ್ನು ಪ್ರಶ್ನಿಸುವ ಅಥವ ಆ ಪರಮಾತ್ಮನ ಅಸ್ತಿತ್ವವನ್ನೇ ಕುರಿತು ಸವಾಲೊಡ್ಡುವ ಧೈರ್ಯ ತೋರಿಸಿದರೆ, ಅವನನ್ನು ಅಧರ್ಮಿಯೆಂದೂ ವಿಶ್ವಾಸಘಾತುಕ ನೆಂದೂ ಕರೆಯುತ್ತಾರೆ. ಹೀಗೆ ಸಮಾಜದ ಸಾಂಪ್ರದಾಯಿಕ ನಿಲುವು ನಂಬುಗೆಗಳನ್ನು ಪ್ರಶ್ನಿಸುವ ವ್ಯಕ್ತಿ ಮಂಡಿಸುವ ವಾದವನ್ನು ತಾರ್ಕಿಕ ವಾಗಿ ಖಂಡಿಸಲು, ಸೋಲಿಸಲು ಸಾಧ್ಯವಾಗದೇ ಇದ್ದಾಗ, ದೇವರ ಕೋಪದ 'ಗುಮ್ಮ' ತೋರಿಸಿ ಅವನನ್ನು ಭಯಭೀತನನ್ನಾಗಿ ಮಾಡಲು ಯತ್ನಿಸುತ್ತಾರೆ. ಅವನು ಇದಕ್ಕೆ ಬಗ್ಗದಿದ್ದಾಗ, ಅವನು ಅಹಂಕಾರಿಯೆಂದೂ, ವ್ಯರ್ಥಾಭಿಮಾನಿಯೆಂದೂ ಟೀಕಿಸುತ್ತಾರೆ. ಆದ್ದರಿಂದ ಈ ವ್ಯರ್ಥ ವಿವಾದದಲ್ಲಿಯೇ ಸಮಯ ಹಾಳು ಮಾಡು ವುದು ಸರಿಯಲ್ಲವೆಂಬುದು ನಿರ್ವಿವಾದ....

"ನಾನು ದೇವರಲ್ಲಿ ನಂಬಿಕೆ ಇಡುವುದರಿಂದ ಸದ್ಯದ ಪರಿಸ್ಥಿತಿಯಲ್ಲಿ ನನ್ನ ಜೀವನ ಸ್ವಲ್ಪ ಸುಗಮವಾಗುತ್ತಿತ್ತೆಂದೂ, ನನ್ನ ಮನಸ್ಸಿನ ಭಾರ ಒಂದಿಷ್ಟು ಕಡಿಮೆಯಾಗಬಹುದಿತ್ತೆಂದೂ ನನಗೆ ಚೆನ್ನಾಗಿ

ಗೊತ್ತಿದೆ. ದೇವರಲ್ಲಿಯ ನನ್ನ ಅಪನಂಬಿಕೆಯಿಂದಾಗಿ ನನ್ನ ಸದ್ಯದ ಬದುಕಿನ ಪರಿಸರ ತೀರ ರುಷ್ಕಗೊಂಡಿದೆ. ಅಲ್ಲದೆ ಈ ಪರಿಸ್ಥಿತಿಯಿಂದ ಉದ್ಭವಿಸುವ ಸಮಸ್ಯೆ ಇನ್ನೂ ಗಂಭೀರ ಸ್ವರೂಪ ತಳೆಯಲೂ ಬಹುದು. ರಹಸ್ಯವಾದ (Mysticism) ಅಥವಾ ಆಧ್ಯಾತ್ಮವಾದ (Spiritualism) ಇಂಥ ಪರಿಸ್ಥಿತಿಯನ್ನು ಕಾವ್ಯಮಯವ ನ್ನಾಗಿಯೂ ಮಾಡಬಲ್ಲುದು ಎಂದು ನನಗೆ ಗೊತ್ತಿದೆ. ಆದರೆ, ನನ್ನ ಬದುಕಿಗೆ ಯಾವುದೇ ಉನ್ಮಾದದ ಸಹಾಯ ಬೇಕಿಲ್ಲ. ಏಕೆಂದರೆ. ನಾನು ಯಥಾರ್ಥವಾದಿ (Realist) ಯಾಗಿದ್ದೇನೆ. ನನ್ನ ಸ್ವಭಾವ, ಮನಸ್ಸು ಇವುಗಳ ಮೇಲೆ ನಾನು ವೈಚಾರಿಕತೆ, ವಿವೇಕದ ಸಹಾಯದಿಂದ ವಿಜಯವನ್ನು ಸಾಧಿಸಬಯಸುತ್ತೇನೆ. ಆದರೆ ಈ ದಾರಿ ಯಲ್ಲಿ ನಾನು ಯಾವಾಗಲೂ ಸಫಲನಾಗಿದ್ದೇನೆ ಎಂದು ಹೇಳಲಾರೆ. ಪ್ರಯತ್ನ, ಪ್ರಯಾಸ ಮಾತ್ರ ಮನುಷ್ಯನ ಕರ್ತವ್ಯವಾಗಿದೆ. ಸಫಲತೆಯು ಅನುಕೂಲ ಪರಿಸ್ಥಿತಿಗಳ ಮೇಲೆ ಅವಲಂಬಿಸಿರುತ್ತದೆ."– ಈತನ ಈ ಮಾತುಗಳು ಆಸ್ತಿಕರ ಸವಾಲುಗಳಿಗೆ ಕೊಟ್ಟ ತಕ್ಕ ಉತ್ತರ ವಾಗಿ ಮಾತ್ರ ನಿಲ್ಲದೆ; ತಾನೇ ತನ್ನ ಅಂತರಂಗದ ತಳಮಳಕ್ಕೆ ಕೊಟ್ಟಂತ ಸಾಂತ್ವನದ ವೈಚಾರಿಕ ಉತ್ತರವೂ ಆಗಿವೆ. ದೇವರ ಅಸ್ತಿತ್ವವೇ ಸುಳ್ಳು ಎಂದಾದ ಮೇಲೆ, ಬೇರೆ ಲೋಕಗಳ, ಬೇರೆ ಅವತಾರಗಳ ಬೇರೆ ಬದುಕಿನ ಬಗ್ಗೆ ಚರ್ಚೆಗೆ ಈತ ಕೈ ಹಾಕಲಿಲ್ಲ. ಎಂತಹ ಪರಿ ಸ್ಥಿತಿಯಲ್ಲೂ ತಾನು ಕಂಡುಕೊಂಡ ಸತ್ಯವನ್ನು ಬಲಿಗೊಟ್ಟು, ರಾಜಿಮೋರಣೆ ತಾಳಿ ಜೀವ ಉಳಿಸಿಕೊಂಡು 'ಬದುಕನ್ನು' ಹಾಳು ಮಾಡಿಕೊಳ್ಳುವ ಜಾಯಮಾನ ಈತನದ್ದಾಗಿರಲಿಲ್ಲ.

೧೯೨೭ರ ಮೇ ತಿಂಗಳಿನಲ್ಲಿ ಲಾಹೋರಿನಲ್ಲಿ ಆಕಸ್ಮಿಕವಾಗಿ ಪೋಲೀಸರ ಬಂಧನಕ್ಕೊಳಗಾದಾಗ ಒಂದು ದಿನ ಸಿ.ಐ.ಡಿ.ಯ ಪರಿಷ್ಠಾಧಿಕಾರಿ ಶ್ರೀ ನ್ಯೂಮನ್ ಈತನಲ್ಲಿಗೆ ಬಂದು ಸಹಾನುಭೂತಿಯ ಮಹಾಪೂರ ಹರಿಸಿ, ಕೊನೆಯಲ್ಲಿ ತಾನು ಹೇಳಿದಂತೆಯೇ ನಡೆದು

ಕೊಳ್ಳದಿದ್ದರೆ, ಅನಿವಾರ್ಯವಾಗಿ ಕಾಕೋರಿ ವಿದ್ರೋಹಕ ಒಳಸಂಚು ಹಾಗೂ ದಸರಾ ಬಾಂಬು ಘಟನೆಯ ಮೊಕದ್ದಮೆಗಳಲ್ಲಿ ಸಿಲುಕಿಸುವು ದಾಗಿ ಬೆದರಿಕೆ ಹಾಕಿದ. ಆ ವೇಳೆಯಲ್ಲಿ ಭಗತ್‌ಸಿಂಗ್ ತನ್ನ ದೃಢತೆ ಯಲ್ಲಿ ಸ್ವಲ್ಪ ಸಡಿಲತನ ತೋರಿದ್ದರೂ ಬಂಧನದಿಂದ ಬಿಡುಗಡೆಯಾಗ ಬಹುದಿತ್ತು. ಆದರೆ ತನ್ನ ಜಾಯಮಾನಕ್ಕೆ ತಕ್ಕಂತೆ ವರ್ತಿಸಿದ. ಆ ಸಂದರ್ಭದಲ್ಲಿ ತನ್ನ ನಾಸ್ತಿಕತೆ ಹೇಗೆ ಗಟ್ಟಿಕೊಂಡಿತ್ತೆಂದು ತಾನೇ ಪರೀಕ್ಷಿಸಿಕೊಂಡೆ ಎಂದು ಈತನೇ ಹೇಳಿದ್ದಾನೆ: "...ಕೆಲವು ಪೋಲೀಸ್ ಅಧಿಕಾರಿಗಳು ನಾನು ದಿನಾಲೂ ನಿಯಮಿತವಾಗಿ ಎರಡು ಸಲ ದೇವರ ಪ್ರಾರ್ಥನೆ ಮಾಡುವಂತೆ ಪುಸಲಾಯಿಸತೊಡಗಿದರು. ಆದರೆ, ನಾನು ಸಂಪೂರ್ಣವಾಗಿ ನಾಸ್ತಿಕನಾಗಿದ್ದೆ. ಕೇವಲ ಶಾಂತಿ ಸಮಾಧಾನದ ದಿನ ಗಳಲ್ಲಿ ಮಾತ್ರ ನಾನು ನಾಸ್ತಿಕನಾಗಿರುವ ಧೈರ್ಯ ಮಾಡುತ್ತೇನೆಯೋ ಅಥವಾ ಅತ್ಯಂತ ಕಠಿಣ ದುಸ್ಸಾಹ ಸಮಯಗಳಲ್ಲಿಯೂ ಅದೇ ಸಿದ್ಧಾಂತವನ್ನು ಅಪ್ಪಿಕೊಳ್ಳುತ್ತೇನೆಯೋ ಎಂಬುದನ್ನು ಸ್ವತಃ ನನಗ ಖಚಿತಪಡಿಸಿಕೊಳ್ಳಲು ನಾನು ಆಶಿಸುತ್ತಿದ್ದೆ. ಸಾಕಷ್ಟು ಪರ್ಯಾ ಲೋಚನೆಯ ನಂತರ ನನಗೆ ಖಾತ್ರಿಯಾಯಿತು. ಯಾವುದೇ ಸ್ಥಿತಿ ಯಲ್ಲಿ ನಾನು ದೇವರನ್ನು ನಂಬುವುದಾಗಲಿ, ಪ್ರಾರ್ಥನೆ ಸಲ್ಲಿಸುವು ದಾಗಲಿ ಸಾಧ್ಯವಿಲ್ಲವೆಂದು. ಇಲ್ಲ, ಒಂದು ಕ್ಷಣವೂ ಆ ದಾರಿಯಲ್ಲಿ ನಾನು ಹಿಂತಿರುಗಿ ಹೋಗಲು ಮನಸ್ಸು ಮಾಡಲಿಲ್ಲ. ಇದೇ ನಿಜವಾದ ಪರೀಕ್ಷೆಯಾಗಿತ್ತು; ಮತ್ತು ಇದರಲ್ಲಿಯೇ ನಾನು ಉತ್ತೀರ್ಣನೂ ಆದೆ. ನನ್ನ ಈ ಸಿದ್ಧಾಂತವನ್ನು ಬಲಿಕೊಟ್ಟು ಜೀವ ಉಳಿಸಿಕೊಳ್ಳುವ ಆಸೆ ಒಂದರಘಳಿಗೆಯೂ ನನ್ನಲ್ಲಿ ಅಂಕುರಿಸಲಿಲ್ಲ; ಅಂದು ನಾನೊಬ್ಬ ಪಕ್ಕಾ ನಾಸ್ತಿಕನಾಗಿದ್ದೆನಲ್ಲದೆ ಅಂದಿನಿಂದ ನಿರಂತರವಾಗಿ ನಾಸ್ತಿಕನಾಗಿಯೇ ಇದ್ದೇನೆ. ಇಂಥ ಸತ್ವ ಪರೀಕ್ಷೆಗಳಲ್ಲಿ ನಿಷ್ಕಲಂಕಿತವಾಗಿ ತೇರ್ಗಡೆ ಯಾಗುವುದು ಅಷ್ಟು ಸುಲಭವಾದ ಕೆಲಸವಲ್ಲ". ಈತನ ಈ ಮಾತು ಗಳೇ ಈತನ ಜೀವನಾದರ್ಶದ ಭಾಷ್ಯವೆನ್ನಬಹುದು.

ಈತ ತನ್ನ ಜೀವನವನ್ನು ಒಂದು ಮಹಾನ್ ಧ್ಯೇಯಕ್ಕಾಗಿ ಸಮರ್ಪಣ ಮಾಡಿದ್ದ. ಅದು ತನ್ನ ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಮತ್ತು ಸಮಾಜವಾದದ ಸ್ಥಾಪನೆಗಾಗಿ. ಇದನ್ನು ಹೊರತು ಈತನಿಗೆ ಬೇರಾವ ಧ್ಯೇಯವಾಗಲೀ ಆಸೆಯಾಗಲೀ ಇರಲಿಲ್ಲ. ಆದ್ದರಿಂದ ದೇವರು ಧರ್ಮದ ಬಗ್ಗೆ ಯಾವ ನಂಬುಗೆಯು ಅಗತ್ಯವಿರಲಿಲ್ಲ. ಸ್ವರ್ಗ ನರಕದ ಕಲ್ಪನೆ ಕಂಡವನಲ್ಲ. ಇರುವುದನ್ನು ಬಿಟ್ಟು ಇಲ್ಲದಿರುವುದರ ಹುಡುಕಾಟ ವ್ಯರ್ಥವೆಂಬುದನ್ನು ಕಂಡುಕೊಂಡಿದ್ದ.

"ಯಾವುದೇ ಸ್ವಾರ್ಥವಿಲ್ಲದೆ ಇಹ ಅಥವಾ ಪರದ ಯಾವುದೇ ಪುರಸ್ಕಾರದ ಇಚ್ಛೆ ಇಲ್ಲದೆ ನಾನು ಅನಾಸಕ್ತ ಭಾವದಿಂದ ನನ್ನ ಜೀವನವನ್ನು ಸ್ವಾತಂತ್ರ್ಯದ ಮಹಾನ್ ಧ್ಯೇಯಕ್ಕಾಗಿ ಸಮರ್ಪಣ ಮಾಡಿದ್ದೇನೆ. ಏಕೆಂದರೆ, ನಾನು ಇದಕ್ಕಿಂತ ಹೆಚ್ಚಿನದೇನನ್ನು ಮಾಡಲು ಸಾಧ್ಯವಿಲ್ಲ ಎಂದು ಕೇವಲ ಮಾನವನ ಸೇವೆ ಮತ್ತು ದೌರ್ಜನ್ಯ ದಬ್ಬಾಳಿಕೆಗೆ ತುತ್ತಾದ ಜನಕೋಟಿಯು ಹೊರತು ಬೇರೆ ಯಾವ ಕಾರಣಕ್ಕೂ ತಮ್ಮ ಬದುಕನ್ನು ಸಮರ್ಪಿಸಿದ ಅಸಂಖ್ಯಾತ ಸ್ತ್ರೀಪುರುಷರು ನಮಗೆ ದೊರಕುವರೋ ಅಂದೇ ಸಮಸ್ತ ಮಾನವ ಕುಲಕೋಟಿಯು ವಿಮೋಚನಾ ಯುಗದ ಶುಭಾರಂಭವಾಗುತ್ತದೆ" ಎಂಬ ನಿರ್ಭೀತಿಯು ವಿಚಾರಧಾರೆಯಿಂದ ಭಗತ್‌ಸಿಂಗ್ ಎಲ್ಲರ ಗಮನ ಸೆಳೆದ ವಿಚಾರವಾದಿ.

"ಹಗ್ಗದ ನೇಣು ನನ್ನ ಕುತ್ತಿಗೆಗೆ ಬಿದ್ದು, ನನ್ನ ಕಾಲ ಕೆಳಗಿನ ಹಲಗೆ ಸರಿದಾಕ್ಷಣವೇ ನನ್ನ ಕಥೆ ಮುಗಿಯುತ್ತದೆ. ನನ್ನ ಬದುಕಿಗೆ ಪೂರ್ಣ ವಿರಾಮ ಬಂದು ಬಿಡುತ್ತದೆ. ಅದೇ ನನ್ನ ಕೊನೆಯು ಗಳಿಗೆಯಾಗುತ್ತದೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ" ಎಂಬ ಕಟು ಸತ್ಯದ ಪ್ರತಿಪಾದಕನಾಗಿದ್ದ.

ದೇವರ ಸಿದ್ಧಾಂತವು ವಿಶೇಷ ಅಧಿಕಾರಗಳನ್ನು ಸಕಲ ಭೋಗ ಭಾಗ್ಯಗಳನ್ನು ಹೊಂದಿದ ಸ್ವಾರ್ಥಿತ ಹಿತಾಸಕ್ತಿಯು ಜನರ ಸ್ವತ್ತು

ಯಾಗಿದೆ. ಇವರು ತಮಗೆ ದಕ್ಕಿದ ಅಧಿಕಾರ, ಶಕ್ತಿ, ಸಂಪತ್ತು ಹಾಗೂ ಸ್ಥಾನಮಾನಗಳನ್ನು ಈ ಸಿದ್ಧಾಂತದ ಆಧಾರದಿಂದಲೇ ಸಮರ್ಥಿಸಿಕೊಳ್ಳುತ್ತಾರೆ ಎಂಬ ನೇರ ನುಡಿಯಿಂದ ಧರ್ಮಾಂಧರಾದ ಪರಾವಲಂಬಿಗಳನ್ನು ಕೆಣಕಿದ್ದಾನೆ.

"ಧಾರ್ಮಿಕ ಉಪದೇಶಕರು ಹಾಗೂ ಅಧಿಕಾರಶಾಹಿಗಳ ಮಿಲನದಿಂದಲೆ ಜೈಲು, ನೇಣುಗಂಬ, ಬಾರುಕೋಲು ಮತ್ತು ಇಂಥ ಸಿದ್ಧಾಂತಗಳು ಜನಿಸುತ್ತವೆ" ಎಂಬ ಸತ್ಯವನ್ನು ನಿರ್ದಾಕ್ಷಿಣ್ಯವಾಗಿ ಹೇಳಿ, ಆಸ್ತಿಕ ಜನರಿಗೆ ಸವಾಲಾಗಿ ಪ್ರಶ್ನೆಗಳನ್ನು ಎಸೆದಿದ್ದಾನೆ; "ಪ್ರತಿಯೊಬ್ಬ ವ್ಯಕ್ತಿಯೂ ಅಪರಾಧವನ್ನು ಮಾಡುವಾಗ ಆ ನಿಮ್ಮ ಸರ್ವಶಕ್ತ ಸರ್ವಜ್ಞ ದೇವರು, ಅವನನ್ನು ತಡೆಯುವುದಿಲ್ಲ ಏಕೆ ? ಇದನ್ನಂತೂ ಅವನು–ದೇವರು-ಬಹು ಸರಳವಾಗಿ ಮಾಡಬಹುದಲ್ಲವೆ ? ಯುದ್ಧ ಖೋರ ರಾಜರನ್ನು ಅಥವಾ ದಾಳಿಖೋರ ಸ್ವಭಾವವನ್ನು ನಾಶ ಮಾಡಿ, ಜಾಗತಿಕ ಯುದ್ಧದಿಂದ ಜನತೆಯ ಮೇಲಾದ ಭೀಕರ ಪರಿಣಾಮವನ್ನು ಏಕೆ ತಪ್ಪಿಸಲಿಲ್ಲ ? ಭಾರತವನ್ನು ಬಿಟ್ಟು ತೊಲಗುವಂತೆ ಅವನು ಬ್ರಿಟಿಷರ ಮನಸ್ಸನ್ನೇಕೆ ಒಲಿಸಲಾರ ? ಶೋಷಕ ಬಂಡವಾಳಶಾಹಿಗಳು ತಮ್ಮ ಅಪಾರ ವೈಯುಕ್ತಿಕ ಸಂಪತ್ತನ್ನು ತ್ಯಜಿಸುವ ಮೂಲಕ ಕೇವಲ ಶ್ರಮಿಕ ಸಮುದಾಯ ಮಾತ್ರವಲ್ಲ, ಇಡೀ ಮಾನವ ಸಮಾಜವನ್ನೇ ತಮ್ಮ (ಬಂಡವಾಳಶಾಹಿಗಳ) ಪೈಶಾಚಿಕ ಬಂಧನದಿಂದ ವಿಮೋಚನೆಗೊಳಿಸುವಂತೆ ಅವರ ಹೃದಯದಲ್ಲಿ ಪರೋಪಕಾರ ಬುದ್ಧಿಯನ್ನೇಕೆ ತುಂಬಲಾರ, ನಿಮ್ಮ ದೇವರು ?" ಇಂಥ ಪ್ರಶ್ನೆಗಳು ೨೧ನೇ ಶತಮಾನಕ್ಕೆ ಕಾಲಿಡಲಿರುವ ವೈಚಾರಿಕ ಮತ್ತು ವೈಜ್ಞಾನಿಕ ಧೋರಣೆಯ ಜನರಲ್ಲೂ ಇಷ್ಟೊಂದು ಪ್ರಖರವಾಗಿ ಕಾಣದಾಗಿರುವಾಗ, ಅಂದಿನ ಯುವಕ ಬಂದೂಕಿನ ಗುಂಡಿನಂತೆ ಆಸ್ತಿಕರ ಮೇಲೆ ದಾಳಿ ಮಾಡಿದ್ದು ಆತನ ಚಿಂತನಶೀಲತೆಗೆ ಸಾಕ್ಷಿ ಎನ್ನಬಹುದು.

ಕರ್ಮ ಸಿದ್ಧಾಂತಕ್ಕೆ ತಮ್ಮೆಲ್ಲ ಬದುಕನ್ನು ಅರ್ಪಿಸಿ ನಿರ್ಜೀವಿ

ಗಳಿಂತಿದ್ದ ಜನರಲ್ಲಿ, "ಬ್ರಿಟೀಷರು ದೇವರ ದಯೆಯಿಂದ ನಮ್ಮನ್ನಾಳುತ್ತಿಲ್ಲ. ಅವರಲ್ಲಿ ಬಲವಿದೆ, ತಾಕತ್ತಿದೆ. ಹುನ್ನಾರವಿದೆ. ನಮ್ಮಲ್ಲಿ ಅವರನ್ನು ವಿರೋಧಿಸುವ ಶಕ್ತಿಯಿಲ್ಲ. ಈ ಕಾರಣದಿಂದಾಗಿಯೇ ಅವರು ನಮ್ಮನ್ನು ದಾಸ್ಯಕ್ಕೀಡುಮಾಡಿದ್ದಾರೆ. ಅವರು ನಮ್ಮನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡದ್ದು ದೇವರ ಸಹಾಯದಿಂದಲ್ಲ. ಬಂದೂಕು ಗೋಲಿಗಳಿಂದ, ಬಾಂಬು, ಪೋಲೀಸು ಮತ್ತು ಸೇನೆಯ ಸಹಾಯದಿಂದ. ನಮ್ಮ ಹೇಡಿತನ ಔದಾಸೀನ್ಯದಿಂದಾಗಿಯೇ ಅವರು ಭಾರತೀಯ ಸಮಾಜದ ವಿರುದ್ಧ ಅತ್ಯಂತ ಹೇಯವಾದ ಅಪರಾಧ ಮಾಡುತ್ತಿದ್ದಾರೆ. ಅಂದರೆ, ದಬ್ಬಾಳಿಕೆಯ ಮೂಲಕ ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರವನ್ನು ಯಶಸ್ವಿಯಾಗಿ ಲೂಟಿ ಮಾಡುತ್ತಿದೆ"– ಎಂದು ದೇವರ ಪ್ರತಿಪಾದಕರಿಗೆ, ತರ್ಕ ಪಂಡಿತರಿಗೆ ಸತ್ಯದ ಪರಿಚಯವನ್ನು ಕಟುವಾಗಿ ಹಾಗೂ ನೇರವಾಗಿ ಮಾಡಿಕೊಟ್ಟು ನಾಸ್ತಿಕವಾದವನ್ನು ಎಲ್ಲರೂ ಒಪ್ಪುವಂತೆ ಸಮರ್ಥನೆ ನೀಡಿದ್ದಾನೆ.

ವಿಶ್ವದ ಸೃಷ್ಟಿ ವಿಕಾಸದ ಬಗ್ಗೆ ಚಾರ್ಲ್ಸ್ ಡಾರ್ವಿನ್‌ನ 'ಜೀವ ವಿಕಾಸ'ವನ್ನು ಅಧ್ಯಯನಮಾಡಿ, ಸೋಹನ ಸ್ವಾಮಿಯವರ 'ಸಹಜ ಜ್ಞಾನ' ಓದಿ ನಾಸ್ತಿಕವಾದ ಪ್ರಶ್ನಿಸಿದವರಿಗೆ ಸೋದಾಹರಣವಾದ ಉತ್ತರ ನೀಡಿದ್ದಾನೆ. ತನ್ನ ತಾರ್ಕಿಕ ವಿವೇಚನೆಯಿಂದ, ತಾನು ನಾಸ್ತಿಕನಾದುದನ್ನು ಹೆಮ್ಮೆಯಿಂದ ಸಮರ್ಥಿಸಿದ್ದಾನೆ.

ತನ್ನ ಈ ಸೈದ್ಧಾಂತಿಕ ಸಂಕಲ್ಪದಿಂದ ಕ್ರಾಂತಿಕಾರಿ ದಳದಲ್ಲಿ ಈತನೊಬ್ಬ ಒಂಟಿ ಸಲಗನಂತೆ ಕಂಡುಬರುತ್ತಾನೆ. ಈತನ ಗೆಳೆಯನೊಬ್ಬ, "ನಿನ್ನ ಕೊನೆಯ ದಿನಗಳಲ್ಲಾದರೂ ನೀನು ದೇವರನ್ನು ನಂಬುವೆ" ಎಂದು ಹಂಗಿಸಿದಾಗ, ಭಗತ್‌ಸಿಂಗ್, "ಅದು ಎಂದೆಂದಿಗೂ ಸಾಧ್ಯವಿಲ್ಲ. ನನ್ನ ಮಟ್ಟಿಗೆ ಇದು ತೀರ ಅವಮಾನಕರವಾದ್ದು ಹಾಗೂ ನೈತಿಕ ಭ್ರಷ್ಟತೆಯ ಪರಮಾವಧಿ ಎಂದು ಬಗೆಯುತ್ತೇನೆ. ಸ್ವಾರ್ಥದ ಕಾರಣಗಳಿಗಾಗಿ ನಾನು ನನ್ನ ವಿಚಾರವನ್ನು ಎಂದೂ ಬಲಿ

ಕೊಡಲಾರೆ, ಸ್ವಾರ್ಥಕ್ಕಾಗಿ ನಾನು ಪ್ರಾರ್ಥನೆಯನ್ನು ಮಾಡಲಾರೆ" ಎಂದು ಮಾರ್ಮಿಕವಾಗಿ ಉತ್ತರಕೊಟ್ಟು, ಅದನ್ನು ಸಾಬೀತು ಪಡಿಸಿದ.

ಜೈಲಿನ ವಾರ್ಡರ್ ಚಿತ್ತಾರ್‌ಸಿಂಗ್ ಜೀವನ ಪರ್ಯಂತ ಬ್ರಿಟೀಷರ ಸೇವೆ ಮಾಡಿದ್ದರೂ, ಕ್ರಾಂತಿಕಾರಿಗಳ ಬಗ್ಗೆ ಗೌರವ ಅನುಕಂಪವನ್ನುಳ್ಳವನಾಗಿದ್ದ. ಮಾರ್ಚ್ ೨೩ ರಂದು ಮಧ್ಯಾಹ್ನ ಭಗತ್‌ಸಿಂಗ್‌ನನ್ನು ಆ ದಿನ ಸಂಜೆ ಗಲ್ಲಿಗೇರಿಸುತ್ತಾರೆಂಬ ವಿಷಯ ಅಧಿಕೃತವಾಗಿ ತಿಳಿದ ತಕ್ಷಣವೇ ಚಿತ್ತಾರ್‌ಸಿಂಗ್ ಕಾತರದಿಂದ ಭಗತ್‌ಸಿಂಗ್ ಇದ್ದ ಸೆಲ್‌ಗೆ ಧಾವಿಸಿ ಪಿತೃವಾತ್ಸಲ್ಯದಿಂದ, "ಮಗೂ, ನಿನ್ನ ಜೀವನದ ಕೊನೆಯ ಘಳಿಗೆ ಹತ್ತಿರವಾಗುತ್ತಿದೆ, ನಾನೂ ನಿನ್ನ ತಂದೆಯಂತಿದ್ದೇನೆ. ನನ್ನದೊಂದು ಮನವಿಯನ್ನು ನಡೆಸಿಕೊಡುವೆಯಾ ?" ಎಂದಾಗ, ಭಗತ್‌ಸಿಂಗ್ ಯಾವ ತಳಮಳ ಉದ್ವೇಗವಿಲ್ಲದೆ ಮುಗುಳ್ನಗುತ್ತಾ, "ನಾನು ಏನು ಮಾಡಬೇಕೆಂಬುದನ್ನು ಹೇಳಿ" ಎಂದ.

"ನಿನ್ನ ಜೀವನದುದ್ದಕ್ಕೂ ನೀನೆಂದೂ ದೇವರನ್ನು ಪ್ರಾರ್ಥಿಸಿಲ್ಲ, ಈಗ ಕೊನೆಯ ಘಳಿಗೆ ಹತ್ತಿರವಾಗುತ್ತಿದೆ. ಆದ್ದರಿಂದ ನೀನು ದೇವರನ್ನು ಒಮ್ಮೆಯಾದರೂ 'ವಾಹೇಗುರು' ಎಂದು ಪ್ರಾರ್ಥಿಸಬೇಕು. ಆತನ ಕೃಪೆಯನ್ನು ಯಾಚಿಸಬೇಕು"– ವಾರ್ಡರ್ ಮಾಡಿಕೊಂಡ ಮನವಿ ಇದು. ಆಗ ಭಗತ್‌ಸಿಂಗ್ ವಾರ್ಡರ್‌ನ ಬಗ್ಗೆ ಕನಿಕರಿಸಿ, ಗಟ್ಟಿಯಾಗಿ ನಕ್ಕು ನುಡಿದ: "ನಿಮ್ಮ ವಿನಂತಿಯನ್ನು ಮಾನ್ಯ ಮಾಡಲು ನನಗೇನೂ ಕಷ್ಟವಾಗುತ್ತಿರಲಿಲ್ಲ. ನೋಡಿ; ಆದರೆ ಅದನ್ನು ಇನ್ನೂ ಬಹುಮುಂಚೆಯೇ ತಿಳಿಸಲಿಲ್ಲವೇಕೆ ? ಈಗ ಕಡೆಯ ಘಳಿಗೆ ಬಂದಿದೆ. ಈಗ ನಾನು ಪರಮಾತ್ಮನ ನಾಮಸ್ಮರಣೆ ಮಾಡಿದರೆ ಅವನೇನಂದಾನು ? 'ಹಾ ! ನೀನೂ ಕಡೆಗೆ ಪುಕ್ಕಲನಾದೆಯಾ' ಎಂದಾನು. ಇಡೀ ಜೀವನದಲ್ಲಿ ಇವನು ನನ್ನನ್ನು ನೆನೆಯಲಿಲ್ಲ: ಈಗ ಸಾಯುವ

ಕಾಲ ಬಂದಿದೆ. ಅದನ್ನು ಎದುರಿಸಲಾರದೆ ನನ್ನ ಮೊರೆ ಹೋಗುತ್ತಿದ್ದಾನೆ ಎಂದಾನಲ್ಲವೆ ? ಆದ್ದರಿಂದ ನನಗೆ ಮಾರ್ಗ ಇದೇ. ನಾನು ಜೀವನವನ್ನು ಹೇಗೆ ಕಳೆದೆನೋ ಹಾಗೇ ಸಾವನ್ನೂ ಅಪ್ಪುವುದು. ನನ್ನನ್ನು ಕೆಲವರು ನಾಸ್ತಿಕನೆಂದು ಮೂದಲಿಸಬಹುದು. ನಿಜ; ಆದರೆ ಭಗತ್‌ಸಿಂಗ್ ಸಾಯುವ ವೇಳೆಯಲ್ಲಿ ನಡುಗಲಾರಂಭಿಸಿದ ಎಂದು ಯಾರೂ ದೂಷಿಸಲಾರರಲ್ಲವೆ ?” ಈ ರೀತಿ ತನ್ನ ವೈಚಾರಿಕತೆಗೆ, ಜೀವನದ ಆದರ್ಶ ತತ್ವಕ್ಕೆ ಅಂಟಿಕೊಂಡಂತಹ ಅಚಲ ಅಪೂರ್ವ ವಾಸ್ತವವಾದಿ.

ಅಧ್ಯಾಯ ೬

ಭಗತ್‌ಸಿಂಗ್ ಕಲ್ಪನೆಯ ಭಾರತ

ಭಗತ್ ಸಿಂಗನದು ಭ್ರಮೆಯ ಬದುಕಾಗಿರಲಿಲ್ಲ. ಜಾತಿ, ಧರ್ಮಗಳ ಕಿಲುಬುರಹಿತವಾದ ವಾಸ್ತವತೆಗೆ ಒತ್ತುಕೊಟ್ಟು, ಇಡೀ ಸಮಾಜದ ಏಳಿಗೆಯೊಂದಿಗೆ ವ್ಯಕ್ತಿಯ ಏಳಿಗೆಯನ್ನು ಕಂಡುಕೊಂಡಿದ್ದ. ಇಡೀ ಭಾರತದಲ್ಲಿ ಸಮಾಜವಾದದ ಸ್ಪಷ್ಟ ಕಲ್ಪನೆ ಹಾಗೂ ಆಸೆಯನ್ನು ಹೊತ್ತ ಮೊಟ್ಟಮೊದಲಿಗನೆಂದರೆ ಈತನೇ. ಈತನ ಇಡೀ ಹೋರಾಟದಲ್ಲೆಲ್ಲಾ ಈ ತತ್ವದ ಅವಿನಾಭಾವ ಸಂಬಂಧ ಕಾಣುತ್ತೇವೆ. ಬ್ರಿಟೀಷ್ ಸರ್ಕಾರ ಕೈಗಾರಿಕಾ ವಿವಾದಗಳ ಮಸೂದೆ ಮತ್ತು ಸಾರ್ವಜನಿಕ ಸಂರಕ್ಷಣಾ ಮಸೂದೆಗಳನ್ನು ಕೇಂದ್ರೀಯ ಶಾಸನ ಸಭೆಯಲ್ಲಿ ಮಂಡಿಸುತ್ತಿರುವಾಗ, ತನ್ನ ಮಿತ್ರ ಬಟುಕೇಶ್ವರ ದತ್ತನೊಂದಿಗೆ ಸರ್ಕಾರಿ ಬೆಂಚ್ ಮೇಲೆ ನಿರುಪದ್ರವಿ ಬಾಂಬ್‌ಗಳನ್ನು ಎಸೆದು, ಪೋಲೀಸರ ಬಂಧಿಯಾದಾಗ, ಸೆಷನ್ಸ್ ಕೋರ್ಟಿನಲ್ಲಿ ಮ್ಯಾಜಿಸ್ಟ್ರೇಟರ ಮುಂದೆ ಸುದೀರ್ಘವಾದ ತನ್ನ ವಾದವನ್ನು ಮಂಡಿಸಿದ. ಆ ವಾದದಲ್ಲಿ ಸಾಮಾಜಿಕ ಕಳಕಳಿ, ಅಂತಸ್ತರದ ಜನರ ಬದುಕಿನ ಚಿತ್ರ, ದುಡಿಮೆಗಾರರ ಸ್ಥಿತಿಗತಿ, ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗಳ ಕುತಂತ್ರಗಳೆಲ್ಲವನ್ನೂ ಈತ ಅರಿತದ್ದು ಕಂಡುಬರುತ್ತದೆ.

ಈತ ಮಾನವೀಯ ಅನುಕಂಪವನ್ನು ಯಾರೂ ಪ್ರಶ್ನಿಸಲಾರದಷ್ಟು ಹೊಂದಿದ್ದ. ಭವಿಷ್ಯದ ಆಕಾಂಕ್ಷೆಗಳೆಲ್ಲವೂ ಈತನಲ್ಲಿ ಅಂತರ್ಗತ

ಗೊಂಡಿದ್ದವು. ಚಿಕ್ಕ ವಯಸ್ಸಿನ ವ್ಯಕ್ತಿ, ಅತಿ ಹೆಚ್ಚಿನ ಸಂಘಟನೆಗಳಲ್ಲಿ ತೊಡಗಿ ನಿಂತಲ್ಲಿ ನಿಲ್ಲದೆ, ಕುಳಿತಲ್ಲಿ, ಕೂರದೆ ಹಗಲು ರಾತ್ರಿಗಳ ಲೆಕ್ಕ ಬಿಡದೆ ಹೋರಾಟವೊಂದಿಗೆ ಓದನ್ನು ಒಗ್ಗೂಡಿಸಿಕೊಂಡಿದ್ದರ ಫಲವಾಗಿ ಸಮಾಜದಲ್ಲಿ ಕ್ರಾಂತಿಕಾರಿ ಪರಿವರ್ತನೆಯು ಹರಿಕಾರನಾಗಲು ಸಾಧ್ಯವಾಯಿತು. ಈತನ ಈ ಹೋರಾಟ' ಇತಿಹಾಸದಲ್ಲಿ ಎದ್ದು ಕಾಣುವ ಹೆಜ್ಜೆ ಗುರುತುಗಳಾಗಿ, ಯುವ ಜನಾಂಗಕ್ಕೆ ಸ್ಫೂರ್ತಿಯು ಸ್ಮಾರಕವಾಗಿ ಕಂಡುಬರುತ್ತದೆ. ಹಾಗಾಗಿ ಈತ ಪ್ರಗತಿಪರ ಚಿಂತನೆಯ ಪ್ರಯೋಗಶೀಲ ವ್ಯಕ್ತಿಯಾಗಿ ನಿಂತಿದ್ದಾನೆ.

ಗಾಂಧೀಜಿಯವರ ಅಹಿಂಸಾ ಕಲ್ಪನೆಗೆ ಭಗತ್‌ಸಿಂಗ್ ಹಾಗೂ ಆತನ ಅನುಯಾಯಿಗಳು ಎಂದೂ ಕಿವಿಗೊಟ್ಟವರಲ್ಲ. ಗಾಂಧೀಜಿಯ "ಕಾಲ್ಪನಿಕ ಅಹಿಂಸೆ" ನಿಷ್ಪ್ರಯೋಜಕವೆಂಬುದನ್ನು ಮನಗಂಡು ಎಷ್ಟೋ ಬಾರಿ ಪ್ರತಿಕ್ರಿಯಿಸಿದ್ದೂ ಉಂಟು. ತನಗೆ ಗಲ್ಲು ಶಿಕ್ಷೆ ವಿಧಿಸಿದ್ದ ಸಂದರ್ಭದಲ್ಲಿ 'ಪಂಜಾಬ್ ಕೇಸರಿ' ಪತ್ರಿಕೆಯಲ್ಲಿ ತನ್ನ ದಿಟ್ಟ ಹಾಗೂ ನೇರ ನುಡಿಗಳಿಂದ ಕಾಂಗ್ರೆಸ್ಸಿಗರ ಧೋರಣೆಯನ್ನು ವಿಮರ್ಶಿಸಿದ್ದ: "ನಮ್ಮ ಪಕ್ಷದ ಧ್ಯೇಯ ಧೋರಣೆಗಳ ಬಗ್ಗೆ ಒಂದು ಮಾತು. ಅದನ್ನು 'ಸಮಾಜವಾದಿ ಗಣತಂತ್ರ ಸಂಘಟನೆ' ಎಂದು ಕರೆದಿದ್ದೇವೆ. ಅಂದರೆ ಪಕ್ಷದ ಉದ್ದೇಶ ಸಮಾಜವಾದಿ ವ್ಯವಸ್ಥೆಯ ಸಮಾಜವನ್ನು ರೂಪಿಸುವುದು. ನಮ್ಮ ಪಕ್ಷಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಇರುವ ವ್ಯತ್ಯಾಸ ಇದು. ಬ್ರಿಟೀಷರಿಂದ ಭಾರತೀಯರಿಗೆ ಅಧಿಕಾರ ವರ್ಗಾಯಿಸಲ್ಪಟ್ಟಾಗ ಕಾಂಗ್ರೆಸ್ಸಿನ ಕೆಲಸ ಮುಗಿದಂತೆ; ಆದರೆ ನಮ್ಮ ಉದ್ದೇಶ ಅಧಿಕಾರವು ಪ್ರತಿಯೊಬ್ಬರಿಗೂ ಲಭಿಸುವಂತೆ ಮಾಡುವುದು. ಇದಕ್ಕಾಗಿ ದುಡಿಯುವ ಜನತೆಯನ್ನು ಒಗ್ಗೂಡಿಸಬೇಕು"- ಎಂದು ಪತ್ರ ಬರೆದಿದ್ದ. ಈ ಪತ್ರವೇ ಭಗತ್‌ಸಿಂಗ್‌ನ ರಾಜಕೀಯ ಸಿದ್ಧಾಂತ ಹಾಗೂ ಆತನ ಕಲ್ಪನೆಯ ಭಾರತವೂ ಹೌದು.

ಹೋರಾಟಕ್ಕೆ ಹೊಸ ದಿಕ್ಕು, ಹೊಸ ಸ್ಫೂರ್ತಿ ಕಂಡುಕೊಂಡಂತೆ,

ಸ್ವತಂತ್ರ ಭಾರತ ಹೇಗೆ ಇರಬೇಕೆಂಬ ಕಲ್ಪನೆಯೂ ಭಗತ್‌ಸಿಂಗ್‌ನಲ್ಲಿ ಮುಂಚೆಯೇ ಮೂಡಿತ್ತು. ಜಾತಿ, ಧರ್ಮ, ಬಂಡವಾಳಶಾಹಿಗಳ ಕಪಿಮುಷ್ಠಿಯಿಂದ ನಿರಂತರ ನರಳಿರುವ ಈ ರಾಷ್ಟ್ರದಲ್ಲಿ ಹೊಸ ಗಾಳಿ ಬೀಸಬೇಕು, ಹೊಸ ವಾತಾವರಣ ನಿರ್ಮಾಣವಾಗಬೇಕು, ದುಡಿಮೆ ಗಾರರ ಆಸೆ ಆಕಾಂಕ್ಷೆಗಳಿಗೆ ಬೆಲೆ ಸಿಗಬೇಕು. ಜಾತಿರಹಿತ, ಶೋಷಣೆ ರಹಿತ, ಮೂಢನಂಬಿಕೆ ರಹಿತ, ವೈಚಾರಿಕ ಹಾಗೂ ವೈಜ್ಞಾನಿಕ ತಳಹದಿಯ ಮೇಲೆ ನಿಂತ ಸಮಾಜವಾದ ಈ ರಾಷ್ಟ್ರಕ್ಕೆ ಅನಿವಾರ್ಯ ವೆಂಬುದು ಈತನ ಖಚಿತ ಅಭಿಪ್ರಾಯವಾಗಿತ್ತು. ಈತ ರೈತ ಕಾರ್ಮಿಕ ಸಂಘಟನೆಗಳೊಂದಿಗೆ ಇಟ್ಟುಕೊಂಡಿದ್ದ ಸಂಬಂಧ, ಅವರನ್ನು ಜಾಗೃತಿಗೊಳಿಸುತ್ತಿದ್ದ ರೀತಿ, ಇವುಗಳನ್ನು ಗಮನಿಸಿದಾಗ ಈತ ಕಂಡಿದ್ದು 'ಸುಖೀ ರಾಜ್ಯ' ಅರ್ಥಾತ್ "ಸಮಾಜವಾದಿ ರಾಷ್ಟ್ರ". ರಷ್ಯದ ಕ್ರಾಂತಿಯ ಸಫಲತೆಯನ್ನು ಅಧ್ಯಯನದಿಂದ ಕಂಡುಕೊಂಡಿದ್ದ ಈತ ಮಾರ್ಕ್ಸ್ ಮತ್ತು ಲೆನಿನ್ ಸಿದ್ಧಾಂತ ನಮ್ಮ ಈ ದೇಶಕ್ಕೆ ಸೂಕ್ತವಾದು ದೆಂದು ತೀರ್ಮಾನಿಸಿದ್ದ.

ಜನರಿಂದ ಜನರ ಶೋಷಣೆ ನಡೆಯುವಂತಹ ವ್ಯವಸ್ಥೆಯನ್ನು ಗಂಭೀರವಾಗಿ ಪರಿಗಣಿಸಿದ್ದ ಈತ, ಅಂದಿನ ಯುವಕರಿಗೆ, "ಪ್ರಪಂಚ ದೆಲ್ಲೆಡೆ ಸ್ವಾತಂತ್ರ್ಯಕ್ಕಾಗಿ ಸಮರದಲ್ಲಿ ವಿದ್ಯಾರ್ಥಿಗಳು ಮುಂಚೂಣಿ ಯಲ್ಲಿದ್ದು ಬಲಿದಾನ ಮಾಡಿದ್ದಾರೆ. ನಮ್ಮ ದೇಶದ, ಈ ಪರಿಸ್ಥಿತಿ ಯಲ್ಲಿ ಭಾರತೀಯ ಯುವಕರು ಅದೇ ದೃಢ ಸಂಕಲ್ಪವನ್ನು ಪ್ರದರ್ಶಿ ಸಲು ಹಿಂತೆಗೆಯುತ್ತಾರೆಯೇ ?... ಮಿಲಿಯಾಂತರ ಜನತೆಗೆ ಕೈಗಾರಿಕೆ, ಕೊಳೆಗೇರಿ, ಹಳ್ಳಿಯ ಗುಡಿಸಲುಗಳಿಗೆ ತಲುಪಿಸಬೇಕು" ಎಂದು ಕರೆ ಕೊಟ್ಟಿದ್ದ. ಈ ಮಾತುಗಳಿಂದ ಭಾವೀ ಸ್ವತಂತ್ರ ಭಾರತದ ಚಿತ್ರದ ಸ್ಪಷ್ಟತೆಯನ್ನು ಗಮನಿಸಬೇಕು.

ಬಂಡವಾಳಶಾಹಿ, ಸಾಮ್ರಾಜ್ಯಶಾಹಿಗಳ ಕಾಲ್ತುಳಿತಕ್ಕೆ ಸಿಕ್ಕಿ ಸಂಪೂರ್ಣ ತತ್ತರಿಸಿಹೋಗಿರುವ ಗ್ರಾಮ-ಹಳ್ಳಿಗಳ ರೈತರು,

ಕಾರ್ಮಿಕರು, ಶೋಷಿತರು ನಿಜವಾಗಿಯೂ ಎಚ್ಚೆತ್ತುಕೊಳ್ಳಬೇಕು. ಉಳ್ಳವರಿಗೊಂದು ನೀತಿ, ಇಲ್ಲದಿರುವರಿಗೊಂದು ನೀತಿ ತೊಲಗಬೇಕು. ಯಾವುದೇ ತತ್ವ ಸಿದ್ಧಾಂತಗಳಿಂದ ಜನರನ್ನು ಬೇರ್ಪಡಿಸದೆ ಒಗ್ಗೂಡಿಸುವ ಕಾರ್ಯವಾಗಬೇಕು. ಪ್ರಗತಿ ಪಥದಲ್ಲಿ ಕೊಂಡೊಯ್ಯುವ ಕೆಲಸವಾಗಬೇಕು. ಇದಕ್ಕೆ ಸೂಕ್ತವಾದದ್ದು ಎಂದರೆ ನಾಸ್ತಿಕವಾದ, ವಾಸ್ತವವಾದ ನಿಜವಾದ ಜೀವನಾದರ್ಶಗಳಾಗಬೇಕು. ಇದಕ್ಕೆ ನಮ್ಮ ಆಚಾರ ವಿಚಾರಗಳಲ್ಲಿ, ನಂಬಿಕೆ ನಡಾವಳಿಕೆಗಳಲ್ಲಿ ಸಮಗ್ರ ಬದಲಾವಣೆಯಾಗಬೇಕು. ಕಲ್ಪನೆಯಲೋಕದ ಸುಖಕ್ಕಿಂತ, ವಾಸ್ತವ ಲೋಕದ ಬದುಕು ಮುಖ್ಯವೆಂಬ ಪ್ರಜ್ಞೆ ಜಾಗೃತವಾಗಬೇಕು. ಹಾಗಾಗಿ ಜಾತಿ, ಧರ್ಮ, ದೇವರುಗಳ ಹೆಸರಿನಲ್ಲಿ ಮನುಷ್ಯ ಮನುಷ್ಯರನ್ನು ಬೇರ್ಪಡಿಸಿ, ಹೃದಯ ಹೃದಯಗಳನ್ನು ಛಿದ್ರಗೊಳಿಸುವ ಶೋಷಕರು, ಬಂಡವಾಳ ಶಾಹಿಗಳು. ಪರಾವಲಂಬಿಗಳು, ಸಮಾಜವಂಚಕರು– ಹೀಗೆ ಇಡೀ ಸಮಾಜದಲ್ಲಿ ಪ್ರತಿಗಾಮಿ ಗುಣದ ಗುಂಪುಗಳು ಸೃಷ್ಟಿಯಾಗಿ ರಾಷ್ಟ್ರ ನರಕವಾಗುವುದನ್ನು ಈತ ಕಲ್ಪಿಸಿಕೊಂಡೇ ಖಚಿತವಾದ ನಿಲುವನ್ನು ತಾಳಿದ್ದ.

ಕ್ರಾಂತಿಯ ಫಲ ಎಲ್ಲರಿಗೂ ಸಮಾನವಾಗಿ ಲಭ್ಯವಾಗಬೇಕಾದರೆ, ಭ್ರಮೆಯ ಬದುಕಿನಿಂದ ಹೊರ ಬರಬೇಕೆಂಬುದು ಈತನ ನಿಲುವು. ಅದಕ್ಕಾಗಿಯೇ ಭ್ರಮೆಯ ಕೋಟೆಯನ್ನು ನಿರ್ಮಿಸಿಕೊಂಡಿದ್ದ ಕಾಂಗ್ರೆಸ್‌ನ್ನು ಬಲವಾಗಿ ವಿರೋಧಿಸಿದ್ದು. "ಭಾರತದ ಬಂಡವಾಳ ಶಾಹಿಗಳಿಗೆ ಮತ್ತು ವ್ಯಾಪಾರಸ್ಥರಿಗೆ ಕೆಲವು ಹಕ್ಕುಗಳನ್ನು ಹಾಗೂ ಸವಲತ್ತುಗಳನ್ನು ಗಳಿಸಿಕೊಡಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ಆದರೆ ಈ ಮಾರ್ಗದಿಂದ ಕಾರ್ಮಿಕರ ಮತ್ತು ರೈತರ ವಿಮೋಚನೆಯನ್ನು ಸಾಧಿಸಲಾಗುವುದಿಲ್ಲ" ಎಂದು ವರ್ತಮಾನದ ಸ್ಥಿತಿಯನ್ನು ಅಂದೇ ಭಗತ್‌ಸಿಂಗ್ ಊಹಿಸಿಕೊಂಡಿದ್ದು ಆತನ ರಾಜಕೀಯ ಪ್ರಬುದ್ಧ ಚಿಂತನೆಗೆ ಸಾಕ್ಷಿಯಾಗಿದೆ. ಇಂಥ ವೈರುಧ್ಯ ರಾಷ್ಟ್ರದಲ್ಲಿ

ಆಗಬಾರದು ಎಂದು ಚಿಂತಿಸಿ, ರೈತ ಕಾರ್ಮಿಕರ ಸಾರ್ವಭೌಮತ್ವವನ್ನು ಗುರುತಿಸುವಂತಹ ಸಮಾಜದ ಸ್ಥಾಪನೆಗೆ 'ಸಮಾಜವಾದ' ಒಂದೇ ಸರಿಯಾದ ವ್ಯವಸ್ಥೆಯೆಂದು ಭಾವಿಸಿದ್ದ. ಆ ಹಿನ್ನೆಲೆಯಲ್ಲೇ ತನ್ನ ಇಡೀ ಯುವ ಕ್ರಾಂತಿಕಾರಿಗಳನ್ನು ಸಂಘಟಿಸಿ ತನ್ನ ಹೋರಾಟವನ್ನು ರೂಪಿಸಿಕೊಂಡಿದ್ದ.

ಆದರೆ ಶತಶತಮಾನಗಳಿಂದ ಈ ದೇಶದಲ್ಲಿ ಶೋಷಣೆ ಎಂಬುದು ಒಂದು "ಸಹನೀಯ ಮೌಲ್ಯ" ಎಂಬಂತೆ ಒಪ್ಪಿದ್ದನ್ನು ಭಗತ್‌ಸಿಂಗ್ ಕಂಡಿದ್ದ. ಹಾಗಾಗಿ ತಾನು ಕಾಣಬೇಕೆಂದಿದ್ದ ಶೋಷಣೆರಹಿತ, ವರ್ಗ, ವರ್ಣರಹಿತ ಸಮಾಜ ದಿಢೀರೆಂದು ರೂಪುಗೊಳ್ಳುವುದರ ಬಗ್ಗೆ ಆತನಿಗೆ ಅನುಮಾನವಿತ್ತು: ಏಕೆಂದರೆ ಗಾಂಧಿ, ನೆಹರು ಆದಿಯಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ ಎಲ್ಲ ಧುರೀಣರೂ ಬ್ರಿಟೀಷ್ ಸಾಮ್ರಾಜ್ಯ ಶಾಹಿಗಳ ವಿರುದ್ಧ ಹೋರಾಟ ಮಾಡುತ್ತಿದ್ದರೂ ಅವರು ಓಲೈಸುತ್ತಿದ್ದ ಜನ, ನಂಬಿದ್ದ ವಿಚಾರಗಳು ಸಮಾಜವಾದಕ್ಕೆ ವಿರೋಧವಾಗಿದ್ದವು. ಅಷ್ಟೇ ಅಲ್ಲ ಅವರಿಗೆ ಸ್ವಾತಂತ್ರ್ಯದ ಬಗ್ಗೆ ಇದ್ದಷ್ಟು ತೀವ್ರ ಕಾಳಜಿ, ಸ್ವತಂತ್ರ ರಾಷ್ಟ್ರ ಹೇಗಿರಬೇಕೆಂಬುದರ ಬಗ್ಗೆ ಇರಲಿಲ್ಲ, ಇದ್ದರೂ ಅವರೆಲ್ಲ ಆಸ್ತಿಕ ವರ್ಗಕ್ಕೆ ಆರಾಧಕರಾಗಿದ್ದುದು ಮಾತ್ರವಲ್ಲ; ಸ್ವಾತಂತ್ರ್ಯ ಚಳುವಳಿಗೆ ಧರ್ಮ, ದೇವರನ್ನು ಎಳೆದು ತಂದು ಜನರಲ್ಲಿ ನಿಧಾನವಾಗಿ ಬಿಕ್ಕಟ್ಟನ್ನುಂಟುಮಾಡಿದ್ದರು. ಇಂದಿನ ಅನಾಹುತಗಳಿಗೆ ಅಂದೇ ಸಂಧಾನ ಪಂಥದವರು ನಾಂದಿ ಹಾಡಿದರು. ಈ ಎಲ್ಲದರ ಹಿನ್ನೆಲೆ ಭಗತ್‌ಸಿಂಗ್ ಅನುಯಾಯಿಗಳಿಗಿರದಿದ್ದರೂ ಈತನಿಗಂತೂ ಇತ್ತು. ಏಕೆಂದರೆ ಭಗತ್‌ಸಿಂಗ್‌ನಂತಹ ಯುವ ಕ್ರಾಂತಿಕಾರಿಗಳಲ್ಲಿ ಹೆಚ್ಚು ಮಂದಿ ಆಸ್ತಿಕವಾದಿಗಳೇ ಇದ್ದರು. ಆದರೆ ಇದಕ್ಕೆ ಅಪವಾದ ವಾಗಿ ಈತ ಮಾತ್ರ ನಾಸ್ತಿಕನಾಗಿ ವಾಸ್ತವಿಕ ಬದುಕನ್ನು ಅರ್ಥಮಾಡಿ ಕೊಂಡಿದ್ದ.

ತನ್ನ ಇಬ್ಬರು ಮಿತ್ರರಾದ ಸುಖದೇವ್, ರಾಜಗುರುವಿನೊಂದಿಗೆ

ನೇಣಿಗೆ ಕೊರಳೊಡ್ಡುವಾಗ ಯುವಕರಿಗೆ ಹೇಳಿದ ಮಾತು ಈತನ ಕಲ್ಪನೆಯ ಭಾರತ ಹೇಗಿತ್ತೆಂಬುದಕ್ಕೆ ನಿದರ್ಶನವಾಗಿದೆ: "ನನ್ನ ಸಾವು ದೇಶದ ಮಿಲಿಯಾಂತರ ಯುವ ಜನತೆಯಲ್ಲಿ ದೇಶಪ್ರೇಮ ಉತ್ಸಾಹದ ಜ್ವಾಲೆಯನ್ನು ಹೊತ್ತಿಸುತ್ತದೆ. ಸ್ವಾತಂತ್ರ್ಯ ಸಂಗ್ರಾಮದ ಸೋಪಾನದಲ್ಲಿ ತ್ಯಾಗಮಾಡಲು ಸ್ಫೂರ್ತಿ ನೀಡುತ್ತದೆ, ಅದರ ಮೂಲಕ ಕೇವಲ ವಸಾಹತುಶಾಹಿ ಸಂಕೋಲೆಯಿಂದ ಮಾತ್ರವಲ್ಲದೆ, ಎಲ್ಲಾ ರೀತಿಯ ಮಾನವನಿಂದ ಮಾನವನ ಶೋಷಣೆಯಿಂದ ವಿಮುಕ್ತವಾಗಿರುವ ಸ್ವತಂತ್ರ ಭಾರತ ಹೊರಹೊಮ್ಮುತ್ತದೆ." ಇಂಥ ಭರವಸೆಯಿಂದ ಹುತಾತ್ಮನಾದ ಈತನ ಮಾತುಗಳನ್ನು ಇಂದಿನ ಯುವ ಜನಾಂಗದಾದಿಯಾಗಿ ಎಲ್ಲರೂ ಮರೆತಿರುವುದರಿಂದ ರಾಷ್ಟ್ರ ವಿಪತ್ಪರಂಪರೆಗಳನ್ನು ತಂದುಕೊಂಡು ನರಳುತ್ತಿದೆ.

ಉತ್ಸಾಹಿ ಮನಸ್ಸಿನ ಕ್ರಾಂತಿಕಾರಿಗಳಲ್ಲಿ ಜಾತಿ ಮತ ಪಂಥಗಳನ್ನು ಮೆಟ್ಟಿನಿಂತ ದೇಶಪ್ರೇಮ ಗೂಡು ಮಾಡಿಕೊಂಡಿತ್ತು. ಇವರು ನೇಣುಗಂಬವೇರುವಾಗಲೂ ಹೆದರಿದ್ದಾಗಲೀ, ರಾಜೀಭಾವ ತೋರಿದ್ದಾಗಲೀ, ಆದರ್ಶಗಳನ್ನು ಗಾಳಿಗೆ ತೂರಿದ್ದಾಗಲಿ ಮಾಡಲಿಲ್ಲ. ಮಿಗಿಲಾಗಿ ತಮ್ಮ ತರುವಾಯ ತಾವು ರೂಪಿಸಿದ್ದ ಹೋರಾಟ ನಿಲ್ಲಬಾರದು. ಬ್ರಿಟೀಷರಾಗಲಿ, ಬಂಡವಾಳಶಾಹಿಗಳಾಗಲಿ ಒಡ್ಡುವ ಯಾವ ವಿಭಜಕ ನೀತಿಗಳನ್ನು ಸ್ವೀಕರಿಸಿ, ಗುಲಾಮಗಿರಿ ಸಂಸ್ಕೃತಿಯಲ್ಲಿ ಬಾಳಬಾರದೆಂಬ ಆಶಯ ಅವರದಾಗಿತ್ತು. ಉದಾಹರಣೆಗೆ, ಕಾಕೋರಿ ರೈಲು ದರೋಡೆಯಲ್ಲಿ ಭಾಗಿಯಾಗಿ ಕಡೆಗೆ ನೇಣುಗಂಬವೇರಿದ ಮುಸ್ಲಿಂ ಯುವಕ ಅಶ್ಫಾಕುಲ್ಲಾ ಖಾನ್ ದೇಶದ ಯುವ ಜನತೆಗೆ ಕೊಟ್ಟ ಸಂದೇಶವಿದು: "ಹಿಂದೂಸ್ಥಾನದ ಸೋದರರೇ. ನೀವು ಯಾವುದೇ ಧರ್ಮದವರಾಗಿರಲಿ ದೇಶದ ಕೆಲಸದಲ್ಲಿ ಭಾಗಿಗಳಾಗಿ; ವ್ಯರ್ಥವಾಗಿ ನಿಮ್ಮೊಳಗೆ ಜಗಳವಾಡಬೇಡಿ. ದಾರಿ ಬೇರೆಯದಾಗಿರಬಹುದು. ಆದರೆ ಎಲ್ಲರ ಉದ್ದೇಶವೂ ಒಂದೇ. ನಾವು ಎಲ್ಲಾ ಕಾರ್ಯಗಳನ್ನು ಒಂದೇ

ಉದ್ದೇಶದಿಂದ ಪೂರೈಸಲೋಸುಗ ಮಾಡುತ್ತಿರುವ ನಮ್ಮಲ್ಲೇ ಈ ಜಗಳಗಳೇಕೆ ? ನೀವೆಲ್ಲರೂ ಒಂದಾಗಿ ದೇಶವನ್ನು ಆಳುತ್ತಿರುವವರನ್ನು ಎದುರಿಸಿ, ನಮ್ಮ ದೇಶವನ್ನು ಸ್ವಾತಂತ್ರ್ಯಗೊಳಿಸಿ. ದೇಶದ ಏಳುಕೋಟಿ ಮುಸಲ್ಮಾನರಲ್ಲಿ ದೇಶಕ್ಕಾಗಿ ಗಲ್ಲಿಗೇರುತ್ತಿರುವವರಲ್ಲಿ ನಾನು ಮೊದಲನೆಯವನು. ಇದನ್ನು ನೆನಪಿಸಿಕೊಂಡರೆ ನನಗೆ ಬಹಳಷ್ಟು ಹೆಮ್ಮೆ ಎನಿಸುತ್ತದೆ" ಎಂದು ಗಲ್ಲಿಗೇರುವ ದಿನ ಮುಖಕ್ಕೆ ಮುಸುಕನ್ನು ತಾನೇ ಧರಿಸಿ, ನಗುನಗುತ್ತಾ ಗಲ್ಲಿಗೇರಿದ. ಈತ ತನ್ನ ಕವಿತೆಯೊಂದರಲ್ಲಿ ತೋಡಿಕೊಂಡ ಮನದಾಳದ ಭಾವನೆ ಇದು :

"ಆಸೆಯಿಲ್ಲ ಎನಗೆ ಇನ್ನಾವುದೂ
ಇರುವುದೊಂದೇ ಆಸೆ
ನನ್ನ ಶವದ ಪೆಟ್ಟಿಗೆಯ ಮೇಲೆ
ಯಾರಾದರೂ ಚೆಲ್ಲಲಿ ದೇಶದ ಹಿಡಿ ಮಣ್ಣನು".

ಇದೇ ರೀತಿ ಬಂಗಾಳದ ಕ್ರಾಂತಿಕಾರಿ ಕವಿ ಎಂದೇ ಪ್ರಸಿದ್ಧನಾದ ಕಾಜಿ ನಜರುಲ್ ಇಸ್ಲಾಂ ತಮ್ಮ ಕವಿತೆಯೊಂದರಲ್ಲಿ ಭಾವೈಕ್ಯತೆಯನ್ನು ಎತ್ತಿಹಿಡಿದ ರೀತಿ ಆದರ್ಶಮಯವಾದದು. "ನನ್ನ ಒಂದು ಗಿಡದಲ್ಲಿ ಎರಡು ಹೂವುಗಳಿವೆ, ಅವೇ ಹಿಂದು_ಮುಸ್ಲಿಂ"

ಬಂಗಾಳದ ವಿಭಜನೆ ವಿರೋಧಿಸಿ, ಕಿಂಗ್ಸ್‌ಫೋರ್ಡ್ ಹತ್ಯೆ ಯತ್ನದಲ್ಲಿ ಸಿಕ್ಕಿಕೊಂಡು ಪೋಲೀಸರ ಬಂಧಿಯಾದ ಖುದಿರಾಮ್ ಭೋಸ್‌ಗೆ ಮ್ಯಾಜಿಸ್ಟ್ರೇಟರು ನೀಡಿದ ತೀರ್ಪು ಗಲ್ಲು ಶಿಕ್ಷೆ! ತೀರ್ಪು ಕೇಳಿದ ಆ ಪೋರ ಮುಗುಳ್ನಕ್ಕ! ಮ್ಯಾಜಿಸ್ಟ್ರೇಟ್ ಆಶ್ಚರ್ಯಚಕಿತರಾಗಿ, "ನಾನು ಹೇಳಿದ್ದು ಅರ್ಥವಾಯಿತೆ ?" ಎಂದು ಪ್ರಶ್ನಿಸಿದರು, 'ಖಂಡಿತವಾಗಿ' ಎಂದು ಉತ್ತರಿಸಿ ಗಲ್ಲುಶಿಕ್ಷೆಯನ್ನು ಹಸನ್ಮುಖನಾಗಿ ಸ್ವೀಕರಿಸಿದ.

ಇಂಥ ಜಾತ್ಯತೀತ, ದೇಶಭಕ್ತಿ ಪಂಥದವರಿಂದ ತುಂಬಿದ ಕ್ರಾಂತಿ

ಕಾರಿ ದಳವಲ್ಲಿ, ತನ್ನದೇ ಆದ ಸಮಾಜವಾದದ ಹಾಗೂ ನಾಸ್ತಿಕವಾದದ ಹೆಜ್ಜೆಗುರುತುಗಳನ್ನು ಮೂಡಿಸಿದ ಭಗತ್‌ಸಿಂಗ್‌ಗೆ ಪರಂಪರೆಯ ಪ್ರಜ್ಞೆ ಇತ್ತು. ಶೋಷಿತ ಜನರ ಬಗ್ಗೆ ಮಾನವ ಜೀವನದ ಬಗ್ಗೆ ಆಳವಾದ ಪ್ರೀತಿ ಮತ್ತು ವಾತ್ಸಲ್ಯವಿತ್ತು. ಹಸಿವು, ಅನಕ್ಷರತೆಯಿಂದ ನೆಲಕಚ್ಚಿ ತಮ್ಮತನವನ್ನು ನೀಗಿಕೊಂಡಿದ್ದ ಮಿಲಿಯಾಂತರ ಜನರ ಬಗ್ಗೆ ಭಾವೋದ್ವೇಗಗೊಳ್ಳುವ ಮನಸ್ಸು ಈತನದು. ಈತನಿಗೆ ಬ್ರಿಟೀಷ್ ಸಾಮ್ರಾಜ್ಯಶಾಹಿ ಬಗ್ಗೆ ಎಷ್ಟು ಆಕ್ರೋಶವಿತ್ತೋ, ಅಷ್ಟೇ ಆಕ್ರೋಶ ಸಮಯ ಸಾಧಕತನದ ಸಂಧಾನಪರರ ಮೇಲೂ ಇತ್ತು. ಅದಕ್ಕಾಗಿಯೇ ಸಮಾಜವಾದದಿಂದ ಮಾತ್ರ ನಮ್ಮ ಸಾಮಾಜಿಕ ರೋಗಗಳಿಗೆ ಸಾಧ್ಯವೆಂದು ಪ್ರತಿಪಾದಿಸಿದ.

"ಧಾರ್ಮಿಕ ಮೂಢನಂಬಿಕೆಗಳು ಮತ್ತು ಮತಾಂಧತೆ ನಮ್ಮ ಪ್ರಗತಿಗೆ ಬಹು ದೊಡ್ಡ ಆತಂಕಗಳಾಗಿವೆ. ಅವು ಅಡತಡೆಗಳೆಂದು ಸಾಬೀತಾಗಿರುವುದರಿಂದ, ಅವುಗಳನ್ನು ದೂರ ಒಗೆಯಬೇಕು" ಎಂಬ ವಿಚಾರವನ್ನು ಈತ ದೃಢವಾಗಿ ನಂಬಿದ್ದ. ಈತ ಮಾತ್ರವಲ್ಲ ಅಂದಿನ ಎಲ್ಲ ಯುವ ಕ್ರಾಂತಿಕಾರಿಗಳೆಲ್ಲರೂ ತಾವು ಬಂದ ಜಾತಿ ವರ್ಗಗಳನ್ನು, ಭಾಷೆ, ಪ್ರಾಂತ್ಯಗಳನ್ನು ಗಣನೆಗೆ ತಂದುಕೊಳ್ಳದೆ ಭಾರತದ ಎಲ್ಲ ಶೋಷಿತ ಜನತೆಗಾಗಿ ಹೋರಾಡಿ ತಮ್ಮನ್ನು ಸಂಪೂರ್ಣವಾಗಿ ದೇಶಕ್ಕಾಗಿ ಅರ್ಪಿಸಿಕೊಂಡರು.

"ಕ್ರಾಂತಿ ಮಾನುಕುಲದ ಕಸಿದುಕೊಳ್ಳಲಾರದ ಹಕ್ಕು"– ಎಂದು ಸಾರಿ, ಸ್ವಾತಂತ್ರ್ಯಕ್ಕಾಗಿ ಮಾತ್ರ ನಮ್ಮ ಹೋರಾಟ ಸೀಮಿತವಾಗದೆ; ದೇಶದ ಏಳಿಗೆಗೆ ನಿರಂತರವಾಗಿರಬೇಕೆಂಬ ಎಚ್ಚರಿಕೆ ಮಾತನ್ನು ಭಗತ್‌ಸಿಂಗ್ ಯುವಕರಿಗೆ ಹೇಳಿದ ಕಿವಿಮಾತು ಧ್ವನಿಪೂರ್ಣವಾಗಿದೆ.

ಇಂಥ ಪ್ರಗತಿಪರ ಧೋರಣೆಯು ಭಗತ್‌ಸಿಂಗ್‌ನ ಚಿಂತನೆಗಳಿಗೆ ಜೀವ ನೀಡಿ, ಚಾಲನೆ ನೀಡದೆ ಮೂಲೆ ಗುಂಪು ಮಾಡಿದ್ದರ ಫಲವಾಗಿ

ಇಂದು 'ಸಮಾಜವಾದಿ ಪ್ರಜಾಪ್ರಭುತ್ವದಲ್ಲಿ' (?) ಸಾಮಾನ್ಯ ಜನರ ಬಾಳು ಗೋಳಾಗಿ, ಬಂಡವಾಳಶಾಹಿಗಳ ಮೇಲ್ಮೆಯನ್ನು ಕಾಣು ವಂತಾಗಿದೆ. ●

ಅಧ್ಯಾಯ ೭

ಹುತಾತ್ಮನಿಗೆ ಸಂದ ನಮನ

ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳಿಬ್ಬರು ಬ್ರಿಟಿಷ್ ಸರ್ಕಾರದ ಅಮಾನುಷ ಶಿಕ್ಷೆಗೆ ಗುರಿಯಾಗಿ, ಹುತಾತ್ಮರಾದಾಗ ಇಡೀ ರಾಷ್ಟ್ರವೇ ಕಣ್ಣೀರಿಟ್ಟಿತು. ದೇಶ ವಿದೇಶಗಳ ಎಲ್ಲ ಪತ್ರಿಕೆಗಳಲ್ಲೂ ಪ್ರಧಾನ ಸುದ್ದಿಯಾಗಿ ಜಗತ್ತಿನ ಗಮನ ಸೆಳೆಯಿತು. ಶೋಷಿತ ಜನ ನಿದ್ರೆ ಆಹಾರ ತೊರೆದು ದಿಕ್ಕೆಟ್ಟವರಾಗಿ ಗೋಳಾಡಿದರು. ರಾಷ್ಟ್ರದ ಹಾಗೂ ಜಗತ್ತಿನ ಮಾನವತಾವಾದಿಗಳೆಲ್ಲ ಈ ಹತ್ಯೆಯನ್ನು ಉಗ್ರವಾಗಿ ಖಂಡಿಸಿದರು. ಬಹುಶಃ ಕಿರಿಯ ವಯಸ್ಸಿನ ವ್ಯಕ್ತಿಗಳು ಇಷ್ಟೊಂದು ಜನರ ಗಮನ ಸೆಳೆದು, ಅವರ ಕಂಬನಿ ಮಿಡಿಯುವಂತಹ ಬದುಕನ್ನು ಬಾಳಿದ್ದು ಜಾಗತಿಕ ಇತಿಹಾಸದಲ್ಲಿ ತುಂಬಾ ವಿರಳ. ಅಂಥ ವಿರಳ ಪಂಕ್ತಿಯಲ್ಲಿ ಭಗತ್‌ಸಿಂಗ್ ಒಬ್ಬ ಸ್ಮರಣೀಯ ವ್ಯಕ್ತಿ.

ಭಗತ್‌ಸಿಂಗ್ ನೇಣುಗಂಬವನ್ನೇರುವ ದಿನ ಆತನ ಭೇಟಿ ಮಾಡಿದ ಪ್ರಾಣನಾಥ್ ಮೆಹತಾ ಲೆನಿನ್‌ರ ಜೀವನ ಚರಿತ್ರೆಯನ್ನೊಳಗೊಂಡ ಕೃತಿ ನೀಡಿ, "ದೇಶಕ್ಕೆ ನಿನ್ನ ಸಂದೇಶವೇನು" ? ಎಂದು ಕೇಳಿದರು. ಅದಕ್ಕೆ ಮರುಕ್ಷಣವೇ ಭಗತ್‌ಸಿಂಗ್‌ನಿಂದ ಬಂದದ್ದು "ಸಾಮ್ರಾಜ್ಯವಾದ ಮುರ್ದಾಬಾದ್–ಇಂಕ್ವಿಲಾಬ್ ಜಿಂದಾಬಾದ್" ಎಂಬ ಘೋಷಣೆ. ಈ ಮಾತುಗಳಲ್ಲಿ ಅವನಲ್ಲಿದ್ದ ಅದಮ್ಯ ದೇಶಪ್ರೇಮ ಹೊರತು ಮತ್ತೇನೂ ಕಾಣುತ್ತಿರಲಿಲ್ಲ.

ನೇಣಿಗೆ ಕೊರಳೊಡ್ಡುವ ಕೆಲವು ದಿನಗಳ ಮುಂಚೆ ತನ್ನ ಸಂಗಾತಿಗಳಿಗೆ ಬರೆದ ಪತ್ರ ಅವನ ಸೈದ್ಧಾಂತಿಕ ಧೀಮಂತ ಚಿಂತನೆಗೆ ಸಾಕ್ಷಿಯಾಗಿದೆ. "ಬದುಕಿರಬೇಕೆಂಬ ಆಸೆ ನನ್ನಲ್ಲೂ ಇರಬೇಕಾದ್ದು ಸಹಜವಾಗಿದೆ, ನಾನಿದನ್ನು ಮುಚ್ಚಿಡಬಯಸುವುದಿಲ್ಲ. ಆದರೆ ಬದುಕಿರಬೇಕಾದರೆ ನನ್ನದೊಂದು ಷರತ್ತಿದೆ. ನಾನು ಖೈದಿಯಾಗಿ ಜೀವಿಸಲು ಇಚ್ಛಿಸುವುದಿಲ್ಲ. ನನ್ನ ಹೆಸರು ಭಾರತದ ಕ್ರಾಂತಿಯ ಪತಾಕೆಯಾಗಿ ಹೋಗಿದೆ. ಮತ್ತು ನನ್ನ ಕ್ರಾಂತಿಕಾರಿ ಪಕ್ಷದ ಆದರ್ಶ ಹಾಗೂ ಬಲಿದಾನಗಳು ನನ್ನನ್ನು ಬಹು ಎತ್ತರಕ್ಕೇರಿಸಿವೆ. ಎಷ್ಟೊಂದು ಎತ್ತರಕ್ಕೆಂದರೆ ನಾನೇನಾದರೂ ಬದುಕಿದ್ದರೆ ಅಷ್ಟು ಎತ್ತರಕ್ಕೆ ಏರಲಾರದಷ್ಟು ಮಟ್ಟಿಗೆ. ನನ್ನ ದೌರ್ಬಲ್ಯಗಳ ಅರಿವು ಇಂದು ಜನಕ್ಕಿಲ್ಲ. ನಾನು ಗಲ್ಲು ಶಿಕ್ಷೆಯಿಂದ ಏನಾದರೂ ಮುಕ್ತನಾದರೆ ಅವುಗಳು ಎಲ್ಲರ ಮುಂದೂ ಪ್ರದರ್ಶಿತವಾಗುತ್ತವೆ. ಕ್ರಾಂತಿಯ ಪ್ರತೀಕ ಘಟಕ್ಕನೆ ಕೆಳಗೆ ಬೀಳುತ್ತದೆ: ಬಹುಶಃ ಚೂರುಚೂರಾಗುತ್ತದೆ ಕೂಡ. ಆದರೆ ಸ್ಥೈರ್ಯದಿಂದ ನಗುನಗುತ್ತಾ ನೇಣುಗಂಬವನ್ನೇರಿದರೆ ಭಾರತದ ಮಾತೆಯರು ತಮ್ಮ ಮಕ್ಕಳನ್ನು ಭಗತ್‌ಸಿಂಗ್‌ನನ್ನಾಗಿ ಮಾಡಲು ತವಕಿಸಿಯಾರು ಮತ್ತು ದೇಶಕ್ಕಾಗಿ ಬಲಿದಾನ ಮಾಡಲು ತಯಾರಿರುವವರ ಸಂಖ್ಯೆ ಎಷ್ಟು ಹೆಚ್ಚಾಗುತ್ತದೆ ಎಂದರೆ, ಕ್ರಾಂತಿಯನ್ನು ತಡೆಗಟ್ಟುವುದು ಸಾಮ್ರಾಜ್ಯಶಾಹಿಯ ನಗ್ನ ರಾಕ್ಷಸೀ ಶಕ್ತಿಗೆ ಕೇವಲ ಅಸಾಧ್ಯದ ಮಾತಾಗುತ್ತದೆ. ಹೌದು, ನನ್ನ ಒಂದು ಅನಿಸಿಕೆಯನ್ನು ಈಗಲೂ ಹೇಳಿಬಿಡುತ್ತೇನೆ. ದೇಶ ಮತ್ತು ಮಾನವತೆಗಾಗಿ ನಾನು ಏನೇನು ಮಾಡಬಹುದೆಂದು ಅಂದುಕೊಂಡಿದ್ದೆನೋ ಅದರ ಸಾವಿರದ ಒಂದು ಪಾಲನ್ನೂ ನಾನು ಮಾಡಲಾಗಲಿಲ್ಲ. ಬದುಕಲು ಸಾಧ್ಯವಿದ್ದಿದ್ದರೆ ಅವನ್ನು ಪೂರೈಸಲು ಅವಕಾಶ ದೊರೆಯುತ್ತಿತ್ತೇನೋ; ಆಗ ನನ್ನಾಸೆ ಪೂರ್ಣವಾಗುತ್ತಿತ್ತು. ಇದೊಂದಲ್ಲದೆ ನೇಣುಗಂಬದಿಂದ ಪಾರಾಗಿ ಬದುಕಿರಲು ನನ್ನಲ್ಲಿ ಏದೂ ಇನ್ನಾವ ಲಾಲಸೆಯೂ ಇರಲಿಲ್ಲ.

ನನಗಿಂತಲೂ ಅದೃಷ್ಟಶಾಲಿ ಇನ್ನಾರು ? ನನ್ನ ಬಗ್ಗೆ ಈಚೀಚೆಗೆ ನನ್ನಲ್ಲಿ ಹೆಮ್ಮೆ ಹೆಚ್ಚಿದೆ. ನನಗಿನ್ನಾವ ಆಸೆಯೂ ಉಳಿದಿಲ್ಲ. ಈಗ ಧೈರ್ಯವಾಗಿ ಕಡೆಯ ಪರೀಕ್ಷೆಯನ್ನೆದುರು ನೋಡುತ್ತಿದ್ದೇನೆ. ಅದರಲ್ಲೂ ಉತ್ತೀರ್ಣನಾದೇನೆಂಬ ಹಂಬಲ ಇದೆ."

ಈ ಮೇಲಿನ ಮಾತುಗಳು ಯುವಕರನ್ನು ರಾಷ್ಟ್ರಸೇವೆಯಲ್ಲಿ ತೊಡಗಿಸಲು ಚೇತನಕಾರಿಗಳಾಗಿವೆ.

ಒಬ್ಬ ಕ್ರಾಂತಿಕಾರಿ ಸಾವನ್ನು ಹೇಗೆ ಸ್ವೀಕರಿಸಬೇಕೆಂಬುದಕ್ಕೆ ಸ್ವತಃ ತನ್ನ ತಮ್ಮನಿಗೆ ಭಗತ್‌ಸಿಂಗ್ ಬರೆದ ಪತ್ರದಿಂದ ತಿಳಿದುಕೊಳ್ಳಬಹುದು. ಈತನ ಮರಣಕ್ಕೆ ಕೆಲವು ದಿನಗಳ ಮುನ್ನ ತಂದೆ, ತಾಯಿ, ಕುಲ್ತಾರ್ ಸಿಂಗ್ ಸೇರಿದಂತೆ ಹಲವರು ಈತನನ್ನು ಭೇಟಿ ಮಾಡಲು ಬಂದಾಗ ಎಂದಿನ ಸ್ಫೂರ್ತಿ ಮತ್ತು ಲವಲವಿಕೆ ಶೈಲಿಯಲ್ಲಿ ಮಾತನಾಡಿದ. ಆದರೆ ಈತನ ತಮ್ಮ, ತನ್ನ ಅಣ್ಣನ ಮರಣದಂಡನೆಯ ಬಗ್ಗೆ ದುಃಖ ತಡೆದು ಕೊಳ್ಳಲಾರದೆ ಬಿಕ್ಕಳಿಸಿದ. ಎಲ್ಲರೂ ಜೈಲಿನಿಂದ ಮನೆಗೆ ಹಿಂತಿರುಗಿದ ಮೇಲೆ, ತನ್ನ ತಮ್ಮ ಕುಲ್ತಾರ್‌ಸಿಂಗ್‌ಗೆ ವೈಯಕ್ತಿಕ ಜೀವನದ ಪತ್ರ ಬರೆದ. ಆ ಪತ್ರ ಕ್ರಾಂತಿಕಾರಿ ಎಂತಹ ಸಾವನ್ನು ಬಯಸಬೇಕು ಎಂದು ಪರೋಕ್ಷವಾಗಿ ಬೋಧಿಸಿದಂತಿದೆ: "ಇಂದು ನಿನ್ನ ಕಣ್ಣೀರನ್ನು ಕಂಡು ನನಗೆ ಬಹಳ ನೋವಾಯಿತು. ನಿನ್ನ ದನಿಯಲ್ಲಿ ದುಃಖವಿತ್ತು, ನಿನ್ನ ಕಣ್ಣೀರನ್ನು ನೋಡಲು ನನಗೆ ಸಾಧ್ಯವಾಗಲಿಲ್ಲ. ತಮ್ಮಾ, ಧೈರ್ಯವಾಗಿ ಓದನ್ನು ಮುಂದುವರೆಸು. ನಿನ್ನ ಬಗ್ಗೆ ಗಮನವಿರಲಿ."

"ಹತಾಶನಾಗಬೇಡ.... ಇನ್ನೇನು ಬರೆಯಲಿ ? ಇನ್ನೇನು ತಾನೇ ನಾನು ಹೇಳಬಲ್ಲೆ ? ಕೇಳು...."

ಮರ್ದನದ ಹೊಸ ವಿಧಾನಗಳನ್ನವರು
ಹುಡುಕುತ್ತಲೇ ಇದ್ದಾರೆ.
ಎಷ್ಟು ದೂರ ಸಾಗಿಯಾರೆಂದು ನಾವ್ ಕಾತರದಿ
ಕಾಯುತ್ತಿದ್ದೇವೆ.

ಜೀವನದ ಕುರಿತಾಗಿ ನಾವು ಕೋಪಗೊಳ್ಳುವುದೇಕೆ ?
ಆಗಸವ ಶಪಿಸಿ ನಾವು ದೂರುವುದೇಕೆ ?
ನಮ್ಮದೊಂದು ವಿಭಿನ್ನ ಜಗತ್ತು. ಅದಕ್ಕಾಗಿ ನಾವು
ಸಮರವನ್ನೇ ಸೆಣಸೋಣ.
ಓ ಪಕ್ಷದ ಬಂಧುವೇ : ಎನಗುಳಿದಿರುವುದು
ಇನ್ನೊಂದೆರಡು ಘಳಿಗೆ ಮಾತ್ರ,
ಮುಂಜಾವಿನ ದೀಪ ನಾನು, ಇನ್ನೇನು
ಆರಿಹೋಗಲಿದ್ದೇನೆ:
ಎನ್ನ ದೇಶದ ಬಂಧುಗಳೇ ಸಂತಸದಿ ಉಳಿಯಿರಿ.
ಇನ್ನು ನಮ್ಮ ಕಥೆ,
ನಾವಿನ್ನು ಹೊರಟೆವು,
ವಿದಾಯ ! ವಿದಾಯ ನಿಮಗೆ !
ಧೀರರಾಗಿರಿ ಎಂದೂ !

ತಾನು ಸಾವಿಗೆ ಕೊರಳೊಡ್ಡುತ್ತಿರುವಾಗಲೂ ಹೆದರದೆ, ತನ್ನ ಸಾವಿಗೆ ಕಣ್ಣೀರಿಡುವ ಬೇರೆಯವರಿಗೆ ಧೈರ್ಯ ತುಂಬಿ, ಬದುಕನ್ನು ಪ್ರೀತಿಸುವಂತೆ ಬೋಧಿಸುವ ಅಪರೂಪದ ವ್ಯಕ್ತಿತ್ವ ಈತನದು.

ಹೀಗೆ ಭಗತ್‌ಸಿಂಗ್ ಸಿಡಿಲ ನುಡಿಗಳಿಂದ, ಅಪ್ರತಿಮ ವಿಚಾರಗಳಿಂದ ಯುವಕರಲ್ಲಿ ಹೋರಾಟದ ಕಿಡಿ ಮೂಡಿಸಿ ಬ್ರಿಟೀಷ್ ಸರ್ಕಾರದ ಜಂಘಾಬಲವೇ ಉಡುಗಿ ಹೋಗುವಂತೆ ಮಾಡಿ ಹುತಾತ್ಮನಾದ. ಇಂಥ ಉಜ್ವಲ ವೀರಗಾಥೆಯ ಭಗತ್‌ಸಿಂಗ್ ಮತ್ತು ಈತನ ಸಂಗಾತಿಗಳ ಪ್ರಾಣವನ್ನು ಮಹಾತ್ಮ ಗಾಂಧೀಜಿಯವರು ಉಳಿಸಲಿಲ್ಲವೆಂಬುದು ವ್ಯಥೆಯ ಸಂಗತಿ.

ಗಾಂಧೀಜಿ-ಇರ್ವಿನ್ ಒಪ್ಪಂದ ನಡೆದದ್ದು ೧೯೩೧ರ ಮಾರ್ಚ್ ೫ರಂದು. ಭಗತ್‌ಸಿಂಗ್ ಮತ್ತು ಮಿತ್ರರನ್ನು ಗಲ್ಲಿಗೇರಿಸುವುದಕ್ಕೆ ನಿರ್ಧರಿಸಿದ್ದ ದಿನಾಂಕ : ೧೯೩೧ರ ಮಾರ್ಚ್ ೨೪. ಹಾಗಾಗಿ ಗಾಂಧೀಜಿ

ಯುವರು ಇರ್ವಿನ್‌ನೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಶಿಕ್ಷೆ ಅನುಭವಿಸುತ್ತಿರುವ ಎಲ್ಲಾ ಕಾಂಗ್ರೇಸ್ ಕಾರ್ಯಕರ್ತರನ್ನು ಜೈಲಿನಿಂದ ಬಿಡುಗಡೆಗೊಳಿಸಿದರು. ಆದರೆ ಈ ಮೂರು ಮಂದಿಯನ್ನು ಬಿಡುಗಡೆಗೊಳಿಸದಿದ್ದರೂ, ಪ್ರಾಣವನ್ನಾದರೂ ಉಳಿಸಬಹುದಿತ್ತು, ಇದಕ್ಕೆ ನೇತಾಜಿ ಸುಭಾಷ್ ಚಂದ್ರಬೋಸರು ಪ್ರಯತ್ನ ಪಟ್ಟರೂ ಸಫಲವಾಗಲಿಲ್ಲ.

ಇಲ್ಲಿ ಇನ್ನೂ ಒಂದು ಚರ್ಚಾರ್ಹವಾದ ಸಂಗತಿ ಎಂದರೆ, ಈ ಮೂವರನ್ನು ಗಲ್ಲಿಗೇರಿಸುವುದಾದರೆ ಕರಾಚಿಯಲ್ಲಿ ಕಾಂಗ್ರೇಸ್ ಅಧಿವೇಶನಕ್ಕೆ ಮೊದಲೇ ಮಾಡಬೇಕೆಂದು ಗಾಂಧೀಜಿ ಅಭಿಪ್ರಾಯಪಟ್ಟಿದ್ದರಿಂದ ಗೊತ್ತಾಗಿದ್ದ ದಿನಕ್ಕಿಂತ ಒಂದು ದಿನ ಮುಂಚಿತವಾಗಿಯೇ ಈ ಹತ್ಯೆ ನಡೆಯಿತು. ಇದಕ್ಕೆ ಪ್ರಬಲವಾದ ಕಾರಣವೆಂದರೆ 'ಕಾಲ್ಪನಿಕ ಅಹಿಂಸಾ ಮಾರ್ಗ'ದ ಗಾಂಧೀಜಿಗೆ ಕ್ರಾಂತಿಕಾರಿ ಮಾರ್ಗ ಹಿಡಿದಿದ್ದ ಯುವಕರ ಬಗ್ಗೆ ಅತೃಪ್ತಿ ಎನ್ನುವುದಕ್ಕಿಂತ; ತನ್ನ ಸಿದ್ಧಾಂತಕ್ಕೆ 'ಅಮರತ್ವ' ದೊರಕಲಿ ಎಂಬ ಅಂತರಂಗದಲ್ಲಿದ್ದ ಹಠವಾದಿತನವೇ ಮುಖ್ಯವೆನಿಸಿತು. ಗಾಂಧೀಜಿಯ ಈ ನಿಲುವಿಗೆ ಪೂರಕವಾಗಿ ತನ್ನನ್ನು ಪ್ರಶ್ನಿಸದ ಹಿಂಬಾಲಕರ ನಿರ್ಲಿಪ್ತತೆಯೂ ಪ್ರೇರಣೆ ನೀಡಿತ್ತು. ಹಾಗಾಗಿ ಗಾಂಧೀಜಿ ಇದೊಂದು ಅಪವಾದದಿಂದ ಬಿಡಿಸಿಕೊಳ್ಳಲಾಗದೇ ಉಳಿದರು. ಅಷ್ಟೇ ಅಲ್ಲ ಕ್ರೋಧಗೊಂಡ ಜನತೆಯಿಂದ ಉಗ್ರ ಪ್ರತಿಭಟನೆಯನ್ನೂ ಎದುರಿಸಬೇಕಾಯಿತು. ಆದರೆ ಭಗತ್‌ಸಿಂಗನಿಗೆ ಗಾಂಧೀಜಿ ಹಿಡಿದ ಪಂಥ, ನಡೆದ ಮಾರ್ಗ ಮತ್ತು ಅನುಸರಿಸಿದ ನೀತಿಗಳಿಗೆ ಅಸಮಾಧಾನವಿತ್ತೇ ಹೊರತು; ಅವರ ಬಗ್ಗೆ ಅಗೌರವವಾಗಲೀ ತಿರಸ್ಕಾರ ಭಾವವಾಗಲೀ ಇರಲಿಲ್ಲ.

ಇಷ್ಟಾದರೂ ಗಾಂಧೀಜಿ, ಭಗತ್‌ಸಿಂಗ್‌ಗೆ ನಮನ ಸಲ್ಲಿಸುವುದರಲ್ಲಿ ಹಿಂದುಳಿಯಲಿಲ್ಲ. "...ನನ್ನ ನಿಶ್ಚಿತ ಅಭಿಪ್ರಾಯದಲ್ಲಿ ಸರ್ಕಾರವು ಮಾಡಿದ ಗುರುತರವಾದ ಪ್ರಮಾದದಿಂದಾಗಿ ಭಗತ್‌ಸಿಂಗ್ ಮತ್ತು ಅವನ ಸಂಗಾತಿಗಳು ಯಾವ ಸ್ವಾತಂತ್ರ್ಯದ ಸಫಲತೆಗಾಗಿ ಮಡಿ

ದರೋ, ಆ ಸಫಲತೆಯನ್ನು ಸಾಧಿಸಲು ನಾವೀಗ ಹೆಚ್ಚು ಶಕ್ತರಾಗಿದ್ದೇವೆ. ಕೋಪೋದ್ರಿಕ್ತರಾಗಿ ಈ ಘಟನೆಗೆ ಪ್ರತಿಕ್ರಿಯಿಸುವುದರಿಂದ ನಮ್ಮ ಶಕ್ತಿ ಮತ್ತು ಅವಕಾಶಗಳನ್ನು ಕಳೆದುಕೊಳ್ಳದಿರೋಣ. ಸಾರ್ವತ್ರಿಕ ಹರತಾಳ ಈಗಾಗಲೇ ಜಾರಿಯಲ್ಲಿದೆ, ರಾಷ್ಟ್ರಪ್ರೇಮಿಗಳಿಗೆ ನಾವು ತೋರ ಬಹುದಾದ ಅತಿ ಹೆಚ್ಚಿನ ಗೌರವ ಎಂದರೆ ಮೌನ ಮತ್ತು ಆದರದಿಂದ ಕೂಡಿದ ಮೆರವಣಿಗೆಗಳನ್ನು ನಡೆಸುವುದು. ಆತ್ಮಶೋಧನೆಗೆ ಮತ್ತು ರಾಷ್ಟ್ರಕ್ಕಾಗಿ ಹೆಚ್ಚಿನ ಶ್ರದ್ಧೆಯಿಂದ ಸೇವೆ ಸಲ್ಲಿಸುವುದಕ್ಕೆ ಘಟನೆ ಪ್ರೇರಣೆ ನೀಡಲಿ,

ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳ ತ್ಯಾಗ ಬಲಿದಾನಗಳು ನಮ್ಮ ಸ್ವಾತಂತ್ರ್ಯದ ಗೆಲುವಿನ ಶಕ್ತಿಯನ್ನು ಹೆಚ್ಚಿಸಿವೆ"–ಎಂದು ಅರ್ಥ ಪೂರ್ಣವಾದ ನಮನ ಸಲ್ಲಿಸಿದರು.

ನೇತಾಜಿ ಸುಭಾಷ್ ಚಂದ್ರಬೋಸರು. "ಇಡೀ ದೇಶವನ್ನು ಆವರಿಸಿಕೊಂಡಿರುವ ಕ್ರಾಂತಿಯ ಸ್ಫೂರ್ತಿಯ ಚಿಹ್ನೆ ಭಗತ್‌ಸಿಂಗ್. ಆ ಸ್ಫೂರ್ತಿ ಹೊತ್ತಿಸಿರುವ ಜ್ವಾಲೆ ಎಂದೆಂದಿಗೂ ಆರಿ ಹೋಗುವುದಿಲ್ಲ" ಎಂದು ಕೊಂಡಾಡಿದರು.

ಜವಹರಲಾಲ್ ನೆಹರು. "ಭಗತ್‌ಸಿಂಗ್ ಮತ್ತು ಆತನ ಸಂಗಾತಿಗಳ ಉಜ್ವಲವಾದ ಧೈರ್ಯ ಮತ್ತು ತ್ಯಾಗ ಭಾರತದ ಯುವ ಜನತೆಗೆ ಸ್ಫೂರ್ತಿಯಾಗಿದೆ"–ಎಂದು ಸ್ಮರಿಸಿದರು.

ಕೆ. ಕೆ. ಕುಲ್ಲರ್‌ರವರು, ಈತನ ವ್ಯಕ್ತಿತ್ವವನ್ನು ಚಿತ್ರಿಸುವಾಗ ಶೆಲ್ಲಿಯ ಪ್ರೊಮಿಥಿಯಸ್ ಅನ್‌ಬೌಂಡ್ ಎಂಬ ಕೃತಿಯ ಕೆಲವು ಸಾಲು ಗಳನ್ನು ಉದಾಹರಣೆಯಾಗಿ ಹೇಳಿದ್ದಾರೆ : "ಭಗತ್‌ಸಿಂಗ್ ಪ್ರೊಮಿಥಿ ಯಸ್ ನಂತೆ ಉದಾತ್ತ ಪ್ರೇಮದ ಬುನಾದಿಯ ಮೇಲೆ ನಿಂತ ಮಾನವನ ಆವಿರ್ಭಾವದ ಕನಸು ಕಂಡವನು. ಅಂತೆಯೇ ಸಿಂಹಾಸನಗಳು, ಪೂಜಾ ಪೀಠಗಳು, ನ್ಯಾಯ ವೇದಿಕೆಗಳು, ಕಾರಾಗೃಹಗಳು ಇಲ್ಲದಂತಹ ಸಮಾಜ ವ್ಯವಸ್ಥೆಗಾಗಿ ತಹತಹಿಸಿದವನು. ಅಂಕುಶದಿಂದ ನಿರ್ಬಂಧಿ

ಸಲ್ಪಡದೇ ಸ್ವತಂತ್ರವಾಗಿ ಸರ್ವತೋಮುಖವಾಗಿ ಮತ್ತು ಅವಿಚ್ಛಿನ್ನ ವಾಗಿ ಪ್ರಕಾಶಿಸುವಂತಹ ಮಾನವನ ಉದಯಕ್ಕಾಗಿ ಆಶಿಸಿದವನು.... ಸ್ವಾತಂತ್ರ್ಯ ಸಂಗ್ರಾಮದ ಐತಿಹಾಸಿಕ ಸಂದರ್ಭದಲ್ಲಿ ಮೇರು ಮಾನವ ನಂತೆ ಕಂಗೊಳಿಸಿದವನು... ನಮ್ಮ ಪ್ರಜ್ಞೆಯನ್ನು ಕೆಣಕಲು ಭಗತ್ ಸಿಂಗನ ಅವಮ್ಯ ಚೇತನ, ಅಮರವಾಣಿ, ನಿರಂತರವಾಗಿ ಮೊಳಗಲಿ–" ಎಂದು ತಲೆಬಾಗಿದರು.

ಮರಣದಂಡನೆಗೆ ತಲೆಯೊಡ್ಡಬೇಕಾಗಿದ್ದ ಮಗನ ಕೊನೆಗಾಲದಲ್ಲಿ ಭೇಟಿಯಾದ ತಂದೆಗೆ ಭಗತ್‌ಸಿಂಗ್ ಹೇಳಿದ, "....ಸತ್ತ ಮೇಲೆ ಈಗಿನದ ಕ್ಕಿಂತ ಉತ್ತಮವಾದ ಜೀವನವಿದೆ ಎಂದು ಹಿರಿಯರು ಹೇಳುತ್ತಾರೆ. ಹಾಗಿದ್ದಲ್ಲಿ ನಾನು ಮತ್ತೆ ಇದೇ ದೇಶದಲ್ಲಿ ಹುಟ್ಟಿ, ಬ್ರಿಟೀಷರನ್ನು ಮತ್ತೊಮ್ಮೆ ಎದುರಿಸುತ್ತೇನೆ. ಈ ನನ್ನ ದೇಶ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲೇ ಬೇಕು..." ಎಂದು; ತಮ್ಮಂದಿರಿಗೆ, "ನೀವು ಎದೆಗುಂದ ಬೇಡಿ, ನನ್ನ ಮರಣಾ ನಂತರ ದೇಶದ ಮತ್ತು ಜನತೆಯ ಸೇವೆಯನ್ನು ಕೈ ಬಿಡಬೇಡಿ, ರಾಷ್ಟ್ರದ ವೇದಿಕೆಯಲ್ಲಿ ನಿಮ್ಮ ಜೀವನವನ್ನು ಮುಡುಪಾಗಿಡಿ"-ಎಂದು ಧೈರ್ಯತುಂಬಿ, ದೇಹ ತ್ಯಜಿಸಿ ಅಮರನಾದ ಈತನ ತ್ಯಾಗ, ಧೈರ್ಯ ನಿಷ್ಠೆಗಳ ಸಾರ್ಥಕ ಬದುಕಿಗೆ ಹೆಮ್ಮೆ ಪಡದವರು ಯಾರಾದರೂ ಇರಲು ಸಾಧ್ಯವೆ ?

ಇಂಥ ದೇಶಭಕ್ತಿಯ ಕಡುಗಲಿತನವನ್ನು ಮೆರೆದ ಭಗತ್‌ಸಿಂಗನ ವ್ಯಕ್ತಿತ್ವಕ್ಕೆ ತಲೆಬಾಗದ ಊರು, ದೇಶ, ರಾಷ್ಟ್ರ ಯಾವುದಾದರೂ ಇದೆ ಎನ್ನಲು ಸಾಧ್ಯವೆ ?

ನಾಡ ಬಿಡುಗಡೆಗಾಗಿ, ಸಮಾಜವಾದಿ ವ್ಯವಸ್ಥೆಗಾಗಿ ಹೋರಾಡಿ ಹುತಾತ್ಮನಾದವನಿಗೆ ಕಣ್ಣೀರಿಡದವರು ಯಾರಾದರೂ ಉಂಟೆ ?

ಆಕರ ಗ್ರಂಥಗಳು :

೧) ಭಗತ್‌ಸಿಂಗ್—ಡಾ॥ ಜಿ. ರಾಮಕೃಷ್ಣ.

೨) ಕ್ರಾಂತಿಯ ಕಿಡಿಗಳು : ಭಗತ್‌ಸಿಂಗ್ ಮತ್ತು ಸಂಗಾತಿಗಳು—ಎನ್. ಗಾಯತ್ರಿ.

೩) ನಾನೇಕೆ ನಾಸ್ತಿಕನಾದೆ ? : ಸರ್ದಾರ್ ಭಗತ್‌ಸಿಂಗ್.

೪) ಮಹೋನ್ನತ ಮಾನವ—ಎಲ್.ಪಿ. ಮಿತ್ರೋಹಿನ್,

೫) ಡಿಕ್ಷನರಿ ಆಫ್ ನ್ಯಾಷನಲ್ ಬಯೋಗ್ರಫಿ, ಕನ್ನಡ ವಿಶ್ವ ಕೋಶ, ಎ.ಐ.ಡಿ.ಎಸ್. ಓ.... ಇತ್ಯಾದಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳು.



ಸಾಮಾಜಿಕ ಚಿಂತನ ಮಾಲೆ